ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು, ಪಶು ಸಂಗೋಪನಾ ಸಚಿವರು):– ಶೂನ್ಯವೇಳೆಯಲ್ಲಿ ಪ್ರಶ್ನೆ ಕೇಳಿ ಏಕಾಏಕಿ ನಿರ್ಧಾರ ಪ್ರಕಟ ಮಾಡಿ ಎಂದು ಒತ್ತಾಯ ಮಾಡಿದರೆ ಹೇಗೆ?

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:– ನಾಳೆ ಉತ್ತರ ಕೊಡೋಣ.

ಅಧ್ಯಕ್ಷರು:– ನಾಳೆ ಕೊಡಿ.

(ಗೊಂದಲ)

ಅಧ್ಯಕ್ಷರು:– ಆಯಿತು.

ಶ್ರೀ ಗೋವಿಂದ ಎಂ. ಕಾರಜೋಳ:– ಬ್ರಿಟಿಷ್ ಆಡಳಿತದಲ್ಲೂ ಈ ರೀತಿ ಇರಲಿಲ್ಲ.

(ಈ ಹಂತದಲ್ಲಿ ಸನ್ಮಾನ್ಯ ಉಪಾಧ್ಯಕ್ಷರು ಪೀಠವನ್ನಲಂಕರಿಸಿದರು)

ಶ್ರೀ ಟಿ.ಬಿ. ಜಯಚಂದ್ರ:– ಆಯಿತು, ಮಧ್ಯಾಹ್ನದ ಹೊತ್ತಿಗೆ ಉತ್ತರ ಕೊಡಿಸುತ್ತೇನೆ.

5. ವಿತ್ತೀಯ ಕಾರ್ಯಕಲಾಪಗಳು

2014–15ನೇ ಸಾಲಿನ ಆಯವ್ಯಯದ ಮೇಲೆ ಮುಂದುವರೆದ ಸಾಮಾನ್ಯ ಚರ್ಚೆ

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ರಾಮನಗರ):– ಮಾನ್ಯ ಉಪಾಧ್ಯಕ್ಷರೆ, 2014–15ನೇ ಸಾಲಿನ ಆಯವ್ಯಯವನ್ನು ಈಗಾಗಲೇ ಸರ್ಕಾರ ಸದನದಲ್ಲಿ ಮಂಡಿಸಿದೆ. 2014–15ರ ಆಯವ್ಯಯ ಮಂಡನೆಯ ವಿವರಗಳಿಗೆ ಹೋಗುವುದಕ್ಕಿಂತ ಮುಂಚೆ ನಾನು ತಮ್ಮ ಮೂಲಕ 2013–14ರ ಬಜೆಟ್‌ನಲ್ಲಿ ಮಾನ್ಯ ಮುಖ್ಯಮಂತ್ರಿಯವರು ಮತ್ತು ಆರ್ಥಿಕ ಸಚಿವರು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿರುವುದನ್ನು ಮೊದಲನೆಯದಾಗಿ

ನನೆಪಿಸಿಕೊಳ್ಳಲಿಕ್ಕೆಬಯಸುತ್ತೇನೆ ಮತ್ತು ಸದನದ ಹಾಗೂ ಸರ್ಕಾರದ ಗಮನ ಸೆಳೆಯಬಯಸುತ್ತೇನೆ. 2013–14ರ ಬಜೆಟ್‌ನಲ್ಲಿ ಅಂದು ಮಾನ್ಯ ಮುಖ್ಯಮಂತ್ರಿಯವರು ಹೇಳಿರುವಂಥದ್ದೇನೆಂದರೆ, ರಾಜ್ಯದ ಜನತೆಯ ಬಯಕೆಗಳೂ ಸಹ ಬಹಳ ಹೆಚ್ಚೇನಿಲ್ಲ, ತಮ್ಮ ಸ್ವಂತದ್ದು ಎನಿಸಿಕೊಳ್ಳುವ ಒಂದು ನಿವೇಶನ; ತಲೆಯ ಮೇಲೊಂದು ಸೂರು; ಕುಡಿಯಲು ಸ್ವಚ್ಛ ನೀರು; ಮಾರುಕಟ್ಟೆ ಸಂಪರ್ಕಿಸಲು ಉತ್ತಮ ರಸ್ತೆಗಳು; ಮನೆ ಬೆಳಗಲು ವಿದ್ಯುತ್, ಆರೋಗ್ಯ ರಕ್ಷಣೆಯ ಕನಿಷ್ಠ ಸವಲತ್ತುಗಳು; ತಮ್ಮ ಮಕ್ಕಳ ಉತ್ತಮ ಬದುಕಿಗೊಂದು ಶಿಕ್ಷಣ, ನೆಮ್ಮದಿಯ ಜೀವನಕ್ಕಾಗಿ ಅಗತ್ಯವಾದ ಕಾನೂನು ಮತ್ತು ಶಿಸ್ತುಪಾಲನಾ ವ್ಯವಸ್ಥೆ, ಇವು ಶ್ರೀಸಾಮಾನ್ಯರ ಗೌರವಯುತ ಜೀವನಕ್ಕೆ ಬೇಕಾದ ಕನಿಷ್ಠ ಅವಶ್ಯಕತೆಗಳು. ರಾಜ್ಯದ ಜನತೆ ಸರ್ಕಾರಗಳಿಂದ ಇದಕ್ಕಿಂತ ಹೆಚ್ಚಿನದೇನನ್ನೂ ಬಯಸುತ್ತಿಲ್ಲ. ನಮ್ಮ ಜನರು ಸಮಾಧಾನಿಗಳು, ಸಂಯಮಶೀಲರು, ಸಮಸ್ಯೆಗಳನ್ನು ಚೆನ್ನಾಗಿ ಅರ್ಥೈಸಿಕೊಳ್ಳುವವರು ಮತ್ತು ಕರುಣಾಮಯಿಗಳು ಎನ್ನುವುದನ್ನು ಸರ್ಕಾರ ಕಳೆದ ಬಜೆಟ್‌ನಲ್ಲಿ ಹೇಳಿದೆ. ಐದು ವರ್ಷಗಳ ಕಾಲ ಅವರು ಅಪಾರ ನಿರೀಕ್ಷೆಯಿಂದ ಕಾಯ್ದರು. ಸರ್ಕಾರ ಅವರ ಕನಿಷ್ಠ ಅಗತ್ಯಗಳನ್ನೂ ಸಹ ಪೂರೈಸದಿದ್ದಾಗ ಸರ್ಕಾರದ ಮೇಲೆ ಅವರಿಟ್ಟಿದ್ದ ನಂಬಿಕೆ ಮತ್ತು ವಿಶ್ವಾಸಗಳು ಕರಗಿಹೋದವು. ಅದರ ಹಿನ್ನೆಲೆಯಲ್ಲಿಯೇ ನಮ್ಮ ಪಕ್ಷವನ್ನು ಅಧಿಕಾರಕ್ಕೆ ತಂದಿದ್ದಾರೆಂದು ಹೇಳಿದ್ದಾರೆ. ಅನಂತರ, ರಾಜ್ಯದ ಜನತೆ ನಮ್ಮ ಸರ್ಕಾರದಿಂದ ಬಹಳಷ್ಟು ನಿರೀಕ್ಷಿಸುತ್ತಿದ್ದಾರೆ. ರಾಜ್ಯದ ಅಭಿವೃದ್ಧಿ ಫಲಿತಾಂಶಗಳ ನೋಟ ನಿರಾಶಾದಾಯಕವಾಗಿದ್ದು, ರಾಜ್ಯದ ಆರ್ಥಿಕ ಬೆಳವಣಿಗೆ ಕುಂಠಿತಗೊಂಡಿದ್ದು ಇವೆಲ್ಲ ಹೇಳುತ್ತಾ, ನಮ್ಮ ಸರ್ಕಾರದ ಜನಪರ ಮತ್ತು ಜನೋಪಯೋಗಿ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವ ಮೂಲಕ ಕರ್ನಾಟಕವನ್ನು ಮತ್ತೆ ಪ್ರಗತಿಯ ಪಥಕ್ಕೆ ಕೊಂಡೊಯ್ಯುವ ತುಂಬು ವಿಶ್ವಾಸ ನನ್ನಲ್ಲಿದೆ. ಇದನ್ನು ಕಳೆದ ಬಜೆಟ್‌ನಲ್ಲಿ ಹೇಳಿದ್ದಾರೆ. ಅದೇರೀತಿ ಮುಂದುವರೆದು, ಕೃಷ್ಣಾ ಕಾವೇರಿ ನಮ್ಮ ಪಾಲಿನ ನೀರನ್ನು ಸಂಪೂರ್ಣಗೊಳಿಸತಕ್ಕಂಥದ್ದು, ಅವೆರಡೂ ನಮ್ಮೆರಡು ಕಣ್ಣುಗಳಿದ್ದಂತೆ

ಎನ್ನುವ ಮಾತುಗಳನ್ನು ಹೇಳುವುದರ ಜೊತೆಗೆ ವಿದ್ಯುತ್ ಸೇರಿದಂತೆ ಹಲವಾರು ಮೂಲಸೌಕರ್ಯಗಳನ್ನು ಒದಗಿಸುವಲ್ಲಿ ಹಿಂದಿನ ಸರ್ಕಾರಗಳು ಹಿಂದೆ ಉಳಿದಿದ್ದು, ಇವುಗಳನ್ನು ಸುಧಾರಿಸಲು ಯೋಜನೆ ರೂಪಿಸಿ, ರೈತರು ಮತ್ತು ಇತರರಿಗೆ ಸಮರ್ಪಕವಾಗಿ ವಿದ್ಯುತ್ ಪೂರೈಸಲು ಆಯವ್ಯಯದಲ್ಲಿ ಅಗತ್ಯ ಅನುದಾನವನ್ನು ಒದಗಿಸಲಾಗುವುದು. ಇಂಧನ ಇಲಾಖೆಗೆ ಎಂದು ಹೇಳಿದ್ದಾರೆ. ನಂತರ, ಕೈಗಾರಿಕೆಗಳಿಗೆ ಅದರಲ್ಲೂ ವಿಶೇಷವಾಗಿ, ಹೆಚ್ಚು ಮಂದಿಗೆ ಉದ್ಯೋಗಾವಕಾಶ ಕಲ್ಪಿಸುವ ಉದ್ಯಮಗಳಿಗೆ ಶೀಘ್ರ ಅನುಮತಿ ನೀಡುವ ಮೂಲಕ ಉತ್ತೇಜನ ನೀಡಲಾಗುವುದು. ಕರ್ನಾಟಕವನ್ನು ಹೂಡಿಕೆದಾರಸ್ನೇಹಿ ರಾಜ್ಯವನ್ನಾಗಿ ರೂಪಿಸುವುದು ನಮ್ಮ ಗುರಿಯಾಗಿದೆ. ಈ ಮೂಲಕ ಬೆಂಗಳೂರು ನಗರ ಮತ್ತು ಕರ್ನಾಟಕ ರಾಜ್ಯಕ್ಕೆ ಜಾಗತಿಕ ಮಟ್ಟದಲ್ಲಿದ್ದ ಹಿಂದಿನ ಘನತೆಯ ಸ್ಥಾನವನ್ನು ಮರಳಿ ಗಳಿಸಿಕೊಡಲಾಗುವುದು. ಬೆಂಗಳೂರು ನಗರ ಮತ್ತು ರಾಜ್ಯದಲ್ಲಿನ ಅಸಮರ್ಪಕ ರಸ್ತೆ ಮತ್ತು ಇತರೆ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಲಾಗುವುದು. ಸರ್ಕಾರದ ಎಲ್ಲಾ ಸೇವೆಗಳು, ಸವಲತ್ತುಗಳು, ಯೋಜನೆಗಳು ಸರ್ವರಿಗೂ ಸಕಾಲದಲ್ಲಿ ತಲುಪುವಂತೆ ಸರ್ಕಾರಿ ಆಡಳಿತ ವ್ಯವಸ್ಥೆಯನ್ನು ಚುರುಕುಗೊಳಿಸಲಾಗುವುದು. ನಮ್ಮ ಸರ್ಕಾರವು ಮುಖ್ಯವಾಗಿ ರಾಜ್ಯದ ಹಣಕಾಸಿನ ಸ್ಥಿತಿಯನ್ನು ಬಲಪಡಿಸುತ್ತದೆ. ಸಾಲದ ಹೊರೆಯನ್ನು ಹಗುರಗೊಳಿಸಿ ಅನಗತ್ಯ ವೆಚ್ಚಗಳಿಗೆ ಕಡಿವಾಣ ಹಾಕುತ್ತದೆ. ನಮ್ಮ ಅಧಿಕಾರಿಗಳು ಸ್ವಲ್ಪ ಇದನ್ನು ಬರೆದುಕೊಳ್ಳಬೇಕು. ಇಲ್ಲಿ chief Secretary ಯವರು ಬಂದಿಲ್ಲ. ಇದನ್ನು ಹಿಂದೆ ಮಾನ್ಯ ಮುಖ್ಯಮಂತ್ರಿಯವರ ಕೈಯಲ್ಲಿ ಓದಿಸಿದ್ದೀರಿ, ಅದನ್ನು ಎಲ್ಲ ಬರೆದುಕೊಳ್ಳುವುದು ಸೂಕ್ತ. ಸಾಲದ ಹೊರೆಯನ್ನು ಹಗುರಗೊಳಿಸಿ ಅನಗತ್ಯ ವೆಚ್ಚಗಳಿಗೆ ಕಡಿವಾಣ ಹಾಕುತ್ತದೆ ಸರ್ಕಾರಿ ಸಂಪನ್ಮೂಲಗಳನ್ನು ಆರ್ಥಿಕ ಉತ್ತೇಜನಾ ಚಟುವಟಿಕೆಗಳಿಗೆ ಮತ್ತು ಆದಾಯ ರೂಢಿಸುವ ಆಸ್ತಿಗಳ ನಿರ್ಮಾಣಕ್ಕೆ ತೊಡಗಿಸುತ್ತದೆ. ಅನುದಾನ ಹಂಚಿಕೆಗಿಂತ ಹೆಚ್ಚಾಗಿ ಅದರ ಫಲಶುತ್ರಿಯ ಬಗ್ಗೆ ಹೆಚ್ಚು ಒತ್ತು ನೀಡುತ್ತೇವೆ. ಉತ್ತಮ ತೆರಿಗೆ ಸಂಗ್ರಹಣೆಗೆ ಅನುಕೂಲವಾಗುವಂತೆ ನಮ್ಮ ತೆರಿಗೆ ಸ್ವರೂಪವನ್ನು ಹೆಚ್ಚು ದಕ್ಷಗೊಳಿಸುತ್ತೇವೆ.

ಕರ್ನಾಟಕದಲ್ಲಿ 78 ಲಕ್ಷ ಕೃಷಿಕರಿರುವುದು ಎಲ್ಲ ಹೇಳಿದ್ದಾರೆ. ಹಿಂದಿನ ಸರ್ಕಾರಗಳ ಬೆಳವಣಿಗೆ ಬಗ್ಗೆ ಹೇಳಿದ್ದಾರೆ. ಪ್ರಮುಖವಾಗಿ ಅವರು ಹೇಳತಕ್ಕಂಥದ್ದು, ತೆರಿಗೆ ಸಂಗ್ರಹಣೆಯಲ್ಲಿ ಸುಧಾರಣೆ. ತೆರಿಗೆ ಸೋರಿಕೆಯ ನಿಯಂತ್ರಣ ಮತ್ತು ತೆರಿಗೆ ತಪ್ಪಿಸುವಿಕೆಯನ್ನು ತಡೆಗಟ್ಟಲು ಸರ್ಕಾರ ಸೂಕ್ತ ಕ್ರಮಗಳನ್ನು ಕೈಗೊಂಡಿದ್ದರೆ ರಾಜ್ಯದ ತೆರಿಗೆ ರಾಜಸ್ವದಲ್ಲಿ ಖಂಡಿತ ಹೆಚ್ಚಳವಾಗುತ್ತಿತ್ತು. ತಮ್ಮೂಲಕ ಸಾಲ ಎತ್ತುವಳಿಯ ಅವಲಂಬನೆ ಕಡಿಮೆಯಾಗುತ್ತಿತ್ತು. ನಿಮಗೆ ತಿಳಿದಿರುವಂತೆ ಪ್ರಸ್ತುತ ಸಾಲ ಮತ್ತು ಎತ್ತುವಳಿಗಳು ತುಂಬಾ ದುಬಾರಿಯಾಗಿವೆ. ಈ ದುಬಾರಿ ಸಾಲಗಳನ್ನು ತೆಗೆದುಕೊಂಡರೆ ಮುಂದಿನ ಪೀಳಿಗೆಯ ಮೇಲೆ ಬೃಹತ್ ಸಾಲದ ಹೊರೆಯನ್ನು ಹೊರಿಸಿದಂತಾಗುತ್ತದೆ. ನಾನು ಹಿಂದೆಯೂ ಹೇಳಿದಂತೆ ಹಾಗೂ ಈಗಲೂ ಹೇಳುವಂತೆ, ಸಾಲ ಸಿಗುತ್ತದೆ ಎಂದು ನಾವು ಸಾಲ ಮಾಡಬಾರದು. ನಮ್ಮ ಅಗತ್ಯ ಮತ್ತು ಸಾಲ ತೀರಿಕೆಯ ಸಾಮರ್ಥ್ಯವನ್ನು ಆಧರಿಸಿ ಸಾಲ ಎತ್ತುವಳಿ ಮಾಡಬೇಕು. ಈ ಸಾಲವನ್ನು ಸಹ ಭವಿಷ್ಯದಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ರಾಜಸ್ವವನ್ನು ಉತ್ಪಾದಿಸುವ ಆಸ್ತಿಗಳನ್ನು ನಿರ್ಮಾಣ ಮಾಡುವ ಸಲುವಾಗಿ ಮಾತ್ರ ಬಳಸಿಕೊಳ್ಳಬೇಕು. ಈಗಲೂ ಇದು ನನ್ನ ಖಚಿತ ನಿಲುವು. ಇದು ಮಾನ್ಯ ಮುಖ್ಯಮಂತ್ರಿಯವರು ಯಾವ ವಿಷಯವನ್ನು ಕಳೆದ ಬಜೆಟ್‌ನಲ್ಲಿ ಮಂಡನೆ ಮಾಡಿದ್ದಾರೆ....

ಶ್ರೀ ವೈ.ಎಸ್.ವಿ. ದತ್ತಾ:- ಮಾನ್ಯ ಉಪಾಧ್ಯಕ್ಷರೆ, ದಯವಿಟ್ಟು ಕ್ಷಮಿಸಿ. ಮಾಜಿ ಮುಖ್ಯಮಂತ್ರಿಯವರು, ನಾಯಕರು ಮಾತನಾಡುತ್ತಿದ್ದಾರೆ.

ಶ್ರೀ ಎನ್.ಹೆಚ್. ಕೋನರೆಡ್ಡಿ:- ಯಾರೂ ಸಚಿವರಿಲ್ಲ.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತಾ:- ವಿಷಯವನ್ನು ಬರೆದುಕೊಳ್ಳುವುದಕ್ಕೆ ಯಾರೂ ಇಲ್ಲ.

ಉಪಾಧ್ಯಕ್ಷರು:- ಬರುತ್ತಾರೆ.

ಶ್ರೀ ಎನ್.ಹೆಚ್. ಕೋನರೆಡ್ಡಿ:- Frontline ನಲ್ಲಿ ಯಾರೂ ಮಂತ್ರಿಗಳಿಲ್ಲ. ಯಾರಿಗೆ ಹೇಳುವುದು ಸಾರ್?

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಅಧಿಕಾರಿಗಳು ಬರೆದುಕೊಳ್ಳಿ ಎಂದು ಅದಕ್ಕೇ ಹೇಳಿದೆ.

ಶ್ರೀ ಎನ್.ಹೆಚ್. ಕೋನರೆಡ್ಡಿ:- ಅಧಿಕಾರಿಗಳ lounge ಖಾಲಿ, ಮಂತ್ರಿಗಳ lounge ಖಾಲಿ, ಹೇಗೆ ಸದನ ನಡೆಸುವುದು?

ಶ್ರೀ ಡಿ.ಕೆ. ಶಿವಕುಮಾರ್ (ಇಂಧನ ಸಚಿವರು):- ಅವರು ಹೇಳುವುದನ್ನು ನಾನು ಕೇಳುತ್ತಿದ್ದೇನೆ.

(ಗೊಂದಲ)

ಶ್ರೀ ವೈ.ಎಸ್.ವಿ. ದತ್ತಾ:- ನಾವೂ ಹೇಳುವುದೂ ಕಾಟಾಚಾರ, ಕೇಳಿಸಿಕೊಳ್ಳುವುದು...

ಉಪಾಧ್ಯಕ್ಷರು:- ಮಂತ್ರಿಗಳಿದ್ದಾರೆ.

ಶ್ರೀ ಹೆಚ್.ಸಿ. ಮಹದೇವಪ್ಪ (ಲೋಕೋಪಯೋಗಿ ಸಚಿವರು):- Chief Secretary, Finance Secretary ಇದ್ದಾರೆ.

(ಗೊಂದಲ)

ಶ್ರೀ ಹೆಚ್.ಸಿ. ಮಹದೇವಪ್ಪ:- ಕೆಳಗಡೆ ಒಂದು function ಇದೆ.

ಉಪಾಧ್ಯಕ್ಷರು:- function ಗೆ ಹೋಗಿದ್ದಾರೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಮಾನ್ಯ ಅಧ್ಯಕ್ಷರೆ, ಈಗ ನಾವು ಮಂತ್ರಿಗಳಿಗೆ ಬರೆದುಕೊಳ್ಳಿ ಎಂದು ಹೇಳುವುದಿಲ್ಲ. ಅಧಿಕಾರಿಗಳಿಗೆ ಬರೆದುಕೊಳ್ಳಿ ಎಂದು ಹೇಳುತ್ತೇವೆ. ಏಕೆಂದರೆ, ಮುಖ್ಯಮಂತ್ರಿಯವರಿಗೆ ದಾರಿ ತಪ್ಪಿಸುವವರೆ ಅವರು. ಮುಖ್ಯಮಂತ್ರಿಯವರಿಂದ ಓದಿಸಿದ್ದಾರೆ. 2013-14 ರಲ್ಲಿ ಸಾಲ ಮಾಡಬಾರದು, ಸಾಲ ಮಾಡಿದರೂ ಸರ್ಕಾರದ ಆಸ್ತಿಯನ್ನು

ವೃದ್ಧಿ ಮಾಡತಕ್ಕಂಥದ್ದಕ್ಕೆ ಹಣ ಖರ್ಚು ಮಾಡಬೇಕೆಂದು ಹೇಳಿಸಿದ್ದಾರೆ. ಅದಕ್ಕೆ ಅವರೇನು ಹಿಂದೆ ಓದಿದ್ದಾರೆ, ಅದನ್ನು ನಾನು ಈಗ ಸ್ಮರಿಸಿಕೊಳ್ಳುತ್ತೇನೆ. ಹಿಂದೆ ಏನು ಓದಿದ್ದಾರೆ, ಇವತ್ತು ಯಾವ ರೀತಿಯಾಗಿ ನಡೆದುಕೊಂಡಿದ್ದಾರೆ, 2014–15 ನೇ ಸಾಲಿನ ಬಜೆಟ್ ಏನು ಮಂಡಿಸಿದ್ದಾರೆ ಇದು ನಮ್ಮ ಮುಖ್ಯಮಂತ್ರಿಯವರ ಅಂತರಾಳದ ಆತ್ಮಕ್ಕೆ ನಿಜವಾದ ಒಪ್ಪಿಗೆ ಇದೆಯೆ? ಅವರು ತಮ್ಮ ಮನಸ್ಸಿನ ಅಂತರಾಳದಲ್ಲಿ ಏನು ಇಟ್ಟುಕೊಂಡಿದ್ದಾರೆ ಅದನ್ನು ಹೇಳಬೇಕಾಗುತ್ತದೆ. 2013–14 ರಲ್ಲಿ ಹಿಂದಿನ ಸರ್ಕಾರದ ಮೇಲೆ ಅವರು ಯಾವ ವಿಷಯಗಳನ್ನು ಪ್ರಸ್ತಾಪ ಮಾಡಿದರು, ಅವರು ನಡೆದುಕೊಂಡಂಥ ತೆಗೆದುಕೊಂಡಂಥ ತೀರ್ಮಾನಗಳಿಂದ ರಾಜ್ಯದ ಬೊಕ್ಕಸದ ಮೇಲೆ ಆಗಿರತಕ್ಕಂಥ ಹೊರೆ, ರಾಜ್ಯದ ಜನತೆಯ ಮೇಲೆ ಹೊರಿಸಿರತಕ್ಕಂಥ ಸಾಲದ ಹೊರೆ, ಈ ಭಾಗದಲ್ಲಿದ್ದಾಗ ಅದರ ಬಗ್ಗೆ ಏನು ಚರ್ಚೆ ಮಾಡಿದ್ದಾರೆ ಮತ್ತು ಆ ಭಾಗದಲ್ಲಿ ಮೊದಲನೇ ಬಜೆಟ್ ಮಂಡನೆ ಮಾಡಬೇಕಾದರೆ ಏನು ಹೇಳಿದ್ದಾರೆ, ಈ ರೀತಿಯ ಒಂದು ಬಜೆಟ್ ಅನ್ನು ಇವತ್ತು ಅವರೇ ಹೇಳಿ ಈಗ ಎರಡನೇ ಬಜೆಟ್ ಮಂಡಿಸಬೇಕಾದರೆ, ಕಳೆದ ವಿಧಾನ ಸಭೆ ಚುನಾವಣೆಯಲ್ಲಿ ನಾವು ಜನತೆಗೆ ಸ್ವಚ್ಛ, ಸುಭದ್ರ ಮತ್ತು ಪಾರದರ್ಶಕ ಆಡಳಿತ ನೀಡುವ ಆಶ್ವಾಸನೆ ನೀಡಿದ್ದೆವು. ಚುನಾವಣೆಯಲ್ಲಿ ಕೊಟ್ಟಂಥ ಎಲ್ಲಾ ಭರವಸೆಗಳನ್ನು ಈಡೇರಿಸಿದ್ದೇವೆಂದು ಹೇಳಿದ್ದಾರೆ. ಈ ಸರ್ಕಾರ ಪದೇ ಪದೇ ಪ್ರಮುಖವಾಗಿ ಹೇಳತಕ್ಕಂಥ ಒಂದು ವಿಷಯ ಅನ್ನಭಾಗ್ಯ ಯೋಜನೆ. ಅನ್ನಭಾಗ್ಯ ಯೋಜನೆ ನಾಡಿನ ಒಂದು ಕೋಟಿ ಬಡ ಕುಟುಂಬಗಳ ಹಸಿವನ್ನು ನೀಗಿಸಿ ಅವರ ಕಣ್ಣುಗಳಲ್ಲಿ ಆನಂದಭಾಷ್ಪವನ್ನು ತಂದಿದೆ ಎಂದು ಹೇಳಿದ್ದಾರೆ. ಈ ಅನ್ನ ಭಾಗ್ಯ ಯೋಜನೆಯಡಿಯಲ್ಲಿ ಜನಕ್ಕೆ ಏನು ಆನಂದಭಾಷ್ಪ ಮೂಡಿಸಿದ್ದಾರೆ. ಜನಗಣತಿಯ ಪ್ರಕಾರ ನಮ್ಮ ರಾಜ್ಯದ ಒಟ್ಟು ಮನೆಗಳ ಸಂಖ್ಯೆ ಇರುವುದು 1,31,79,911 ಕುಟುಂಬಗಳು. ಈಗಾಗಲೇ ವಿತರಣೆಯಾಗಿರುವ ಕಾರ್ಡುಗಳ ಸಂಖ್ಯೆ:1,33,27,287. ಒಟ್ಟು ಕುಟುಂಬಗಳೇನು ಇವೆ ಅಷ್ಟನ್ನು ಮೀರಿ ಈಗಾಗಲೇ ಬಿಪಿಎಲ್ ಕಾರ್ಡುಗಳನ್ನು ವಿತರಣೆ ಮಾಡಿದ್ದಾರೆ. ಇನ್ನೂ 38 ಲಕ್ಷ ಕುಟುಂಬಗಳು

ಹೊಸದಾಗಿ ಬಿಪಿಎಲ್ ಕಾರ್ಡು ತೆಗೆದುಕೊಳ್ಳುವುದಕ್ಕೆ ಅರ್ಜಿ ಸಲ್ಲಿಸಿವೆ. ಎಪಿಎಲ್ ಕಾರ್ಡಿನ ಫಲಾನುಭವಿಗಳ ಹೆಸರಿನಲ್ಲಿ ಬರುವ ಕೇಂದ್ರ ಸರ್ಕಾರದ ಅಕ್ಕಿ ಮತ್ತೊಂದು ಇರಬಹುದು ಇದು ಒಂದು ಭಾಗ. ಸರ್ಕಾರ ಹೇಳಿದಂಥ ರೀತಿಯಲ್ಲಿ ಅನ್ನ ಭಾಗ್ಯ ಯೋಜನೆ ಎಲ್ಲರ ಕನಸಿನ ಯೋಜನೆ. ಅದಕ್ಕೆ ನಮ್ಮ ವಿರೋಧವಿಲ್ಲ, ತಕರಾರಿಲ್ಲ. ನನ್ನ ಗಮನಕ್ಕೆ ಬಂದಿರುವ ಒಂದು ಪ್ರಮುಖವಾದ ಅಂಶ; ಯಾವ ಸರ್ಕಾರ ಈ ಅನ್ನ ಭಾಗ್ಯ ಯೋಜನೆಗೆ ರೈಸ್ ಮಿಲ್ ಮಾಲೀಕರ ಹತ್ತಿರ 13 ಲಕ್ಷ ಮೆಟ್ರಿಕ್ ಟನ್ ಅಕ್ಕಿಯನ್ನು ಲೆವಿ ಮೂಲಕ ಸಂಗ್ರಹ ಮಾಡುತ್ತೇವೆಂದು ಹೇಳಿತ್ತೋ, ಅದೇ ಸರ್ಕಾರ ಹಲವಾರು ಸುತ್ತಿನ ಚರ್ಚೆಯ ನಂತರ 13 ಲಕ್ಷ ಮೆಟ್ರಿಕ್ ಟನ್ ಲೆವಿ ಅಕ್ಕಿ ಸಂಗ್ರಹ ಮಾಡುವ ಗುರಿಯ ಪ್ರಮಾಣವನ್ನು ಕಡಿಮೆ ಮಾಡುತ್ತದೆ. ಎರಡೂವರೆ ಲಕ್ಷ ಮೆಟ್ರಿಕ್ ಟನ್ ಲೆವಿ ಖರೀದಿ ಮಾಡುವುದಕ್ಕೆ ತೀರ್ಮಾನ ಮಾಡಿರುವುದು ಏನೀದೆ, ನನಗೆ ಬಂದಿರುವ ಮಾಹಿತಿಯ ಪ್ರಕಾರ, ಅಕ್ಕಿಯನ್ನು 1610/- ರೂಪಾಯಿನಂತೆ ಕೊಂಡುಕೊಳ್ಳುತ್ತೇವೆಂದು ಹೇಳಿದರು. ಲೆವಿ ಸಂಗ್ರಹಿಸುತ್ತೇವೆಂದರು. ನಂತರ ಅದನ್ನು ಕೆ.ಜಿ.ಗೆ 21/- ರೂಪಾಯಿಗೆ ತೆಗೆದುಕೊಂಡು ಹೋದರು. ಇವತ್ತು ಬೇರೆ ರಾಜ್ಯಗಳಲ್ಲಿ ಪ್ರಮುಖವಾಗಿ ಛತ್ತೀಸ್‌ಘಡ್‌ದಲ್ಲಿ ಲೆವಿ ಸಂಗ್ರಹ ರೂಪದಲ್ಲಿ ಸರ್ಕಾರಕ್ಕೇನು ಮಾರಾಟ ಮಾಡುತ್ತಿದ್ದಾರೆ, ನನಗೆ ಬಂದಿರುವ ಕೆಲವು ಮಾಹಿತಿಯಂತೆ, ಪ್ರತಿ ಕೆ.ಜಿ.ಗೆ 18/- ರೂಪಾಯಿಯಂತೆ ಅಲ್ಲಿ ಅಕ್ಕಿಯನ್ನು ಕೊಂಡುಕೊಂಡು ಕರ್ನಾಟಕ ಸರ್ಕಾರಕ್ಕೆ 24/- ರೂಪಾಯಿಯಂತೆ ಮಾರಾಟ ಮಾರುತ್ತಿರುವ ದಾಖಲೆಗಳು, ಮಾಹಿತಿಗಳು, ಸರ್ಕಾರದ ಗಮನಕ್ಕೆ ಬಂದಿವೆಯೇ? ಈ ರೈಸ್ ಮಿಲ್ ಮಾಲೀಕರು 18/- ರೂಪಾಯಿಗೆ ಅಲ್ಲಿ ಖರೀದಿಸಿ ಸರ್ಕಾರಕ್ಕೆ 24/- ರೂಪಾಯಿಗೆ ಅಕ್ಕಿಯನ್ನು ಮಾರಾಟ ಮಾಡಿರುವಂಥದ್ದು. ಈಗಾಗಲೇ ದಾವಣಗೆರೆಯಲ್ಲಿ ಈ ಪ್ರಕರಣದಲ್ಲಿ ಒಂದು ಕೇಸ್ ದಾಖಲಾಗಿದೆ. ಅನ್ನ ಭಾಗ್ಯ ಯೋಜನೆಯ ಹೆಸರಿನಲ್ಲಿ ಕಾಳಸಂತೆಯಲ್ಲಿ ದಂಧೆಕೋರರು ಆ ಹಣವನ್ನು ದುರ್ಬಳಕೆ ಮಾಡಿ ಪ್ರತಿನಿತ್ಯ 200-400 ಮೂಟೆ ಅಕ್ಕಿಯನ್ನು ವಶಪಡಿಸಿಕೊಂಡಿದ್ದೇವೆ, ಕೇಸ್ ಬುಕ್ ಮಾಡಿದ್ದೇವೆ ಎನ್ನುವುದು ಒಂದು

ಕಡೆಯಾದರೆ, ಲೆವಿ ಕಡೆಯಾದರೆ, ಲೆವಿ ಸಂಗ್ರಹ ರೂಪದಲ್ಲಿ ರೈಸ್ ಮಿಲ್ ಮಾಲೀಕರಿಂದ ತಾವು ಏನು ಅಕ್ಕಿ ಖರೀದಿ ಮಾಡಿದ್ದೀರಿ, ಅವರು ಹೊರ ರಾಜ್ಯವಾದ ಛತ್ತೀಸ್‌ಘಡ್‌ದಿಂದ 18/- ರೂಪಾಯಿಗೆ ಖರೀದಿ ಮಾಡಿಕೊಂಡು ಬಂದು, 24/- ರೂಪಾಯಿಗೆ ಇಲ್ಲಿ ಸರ್ಕಾರಕ್ಕೆ ಮಾರಾಟ ಮಾಡುತ್ತಿದ್ದಾರೆ. ಲೆವಿ ರೂಪದಲ್ಲಿ ಅವರು ಛತ್ತೀಸ್‌ಘಡ್‌ದಿಂದ 18/- ರೂಪಾಯಿಗೆ ಖರೀದಿ ಮಾಡಿಕೊಂಡು ಬಂದು ಇಲ್ಲಿ 24/- ರೂಪಾಯಿಗೆ ಮಾರಾಟ ಮಾಡುತ್ತಿದ್ದಾರಲ್ಲ, ಸರ್ಕಾರಕ್ಕೆ 18/- ರೂಪಾಯಿಯಂತೆ ಕೊಂಡುಕೊಳ್ಳುವುದಕ್ಕೆ ನಿಮಗೆ ಸಾಧ್ಯವಿಲ್ಲವೆ? ನಿಮ್ಮ ಮತ್ತು ಮಧ್ಯವರ್ತಿಗಳ ನಡುವೆ ಇರುವ ಸಂಬಂಧವೇನು? ಅವರಿಗೆ 18/- ರೂಪಾಯಿಗೆ ಸಿಗುತ್ತದೆ ಎಂದಾಗ ಸರ್ಕಾರಕ್ಕೆ ಏಕೆ ಸಿಗುವುದಿಲ್ಲ? ಅದಕ್ಕೆ ಹೇಳಿದ್ದು, ನಿಮ್ಮ ಸ್ವಚ್ಛ, ಪಾರದರ್ಶಕ ಮತ್ತು ಪ್ರಾಮಾಣಿಕ ಆಡಳಿತವೆಂದು ಏನು ಹೇಳಿದ್ದೀರಿ, ಇಲ್ಲಿ ಅದು ಎದ್ದು ಕಾಣುತ್ತದೆ. ನಿಮ್ಮ ಪಾರದರ್ಶಕವಾದ ಸ್ವಚ್ಛವಾದ ಆಡಳಿತ ಇಲ್ಲಿ ಕಾಣುತ್ತದೆ. ಇದನ್ನು ತಮ್ಮ ಮೂಲಕ ಸರ್ಕಾರದ ಗಮನವನ್ನು ಸೆಳೆಯಬಯಸುತ್ತಿದ್ದೇನೆ. ನಂತರ ಎರಡನೇ ಪುಟದಲ್ಲಿ, ನಮ್ಮ ಸರ್ಕಾರದ ಋಣಮುಕ್ತ ಯೋಜನೆಯಡಿ ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ, ಅಲ್ಪಸಂಖ್ಯಾತರ, ಹಿಂದುಳಿದ ವರ್ಗದವರ 1368 ಕೋಟಿ ರೂಪಾಯಿಗಳ ಸಾಲ ಮನ್ನಾ ಮಾಡಿ ಅವರೆಲ್ಲರ ಮುಖದಲ್ಲಿ ಮಂದಹಾಸ ಮೂಡಿಸಿದೆ ಎಂದು ಹೇಳಿಕೊಳ್ಳುತ್ತಾರೆ. ನಾನು ಸರ್ಕಾರಕ್ಕೆ ಬಯಸುತ್ತೇನೆ, 1368 ಕೋಟಿ ರೂ.ಗಳನ್ನು ಕಳೆದ ಬಜೆಟ್‌ನಲ್ಲಿ ಈ ಸಾಲ ಮನ್ನಾ ಯೋಜನೆಗೆ ಹಣವನ್ನು ಆ ನಿಗಮಗಳಿಗೆ ಕೊಟ್ಟಿದ್ದೀರಾ? ಇದು only book adjustment ಎನ್ನುವುದು ನನಗೆ ಬಂದಿರುವ ಮಾಹಿತಿ. ಈ ಸರ್ಕಾರ 1368 ಕೋಟಿ ಸಾಲ ಮನ್ನಾ ಎಂದು ಹೇಳಿ ಏನು ಬೆನ್ನು ತಟ್ಟಿಕೊಳ್ಳುತ್ತಾರೆ, ಆದರೆ ಅದು ಹೊರೆಯಾಗಿಲ್ಲ, ಬದಲಾಗಿ ಇದು book adjustment ಮಾಡಿಕೊಂಡಿದ್ದಾರೆ. ಈ ಸರ್ಕಾರ ಅಹಿಂದ ವರ್ಗದ ಜನತೆಗೆ ಕೊಟ್ಟ ಕಾರ್ಯಕ್ರಮವೆಂದು ಏನು ಹೇಳುತ್ತಾರೆ, ಇದು ಈ ಸರ್ಕಾರದ ಮೇಲೆ ಯಾವುದೇ ರೀತಿಯಿಂದ ಹೊರೆಯಾಗಿಲ್ಲವೆಂಬುದು ನನಗಿರುವ ಸ್ಪಷ್ಟವಾದ ಮಾಹಿತಿ. ನಿಮ್ಮ Action Taken Report ನಲ್ಲಿಯೂ ಸಹ ರೂ. 1368 ಕೋಟಿ

ಖಜಾನೆಯಿಂದ ನಿಗಮಗಳಿಗೆ ವರ್ಗ ಮಾಡಿರುವಂಥ ವಿಷಯಗಳು ಇದರಲ್ಲಿ ಏನಿಲ್ಲ. ಇನ್ನು ಭಾಗ್ಯ ಜ್ಯೋತಿ ಮತ್ತು ಕುಟೀರ ಜ್ಯೋತಿ ಇವರಿಗೇನು ಬಾಕಿ ಪಾವತಿ ಮಾಡತಕ್ಕಂಥದ್ದಕ್ಕೆ ರದ್ದು ಮಾಡಿದ್ದರಲ್ಲ, ಇಲ್ಲಿ Action Taken Report ನಲ್ಲಿ ಏನು ಹೇಳಿದ್ದಾರೆಂದರೆ, "ಭಾಗ್ಯ ಜ್ಯೋತಿ ಮತ್ತು ಕುಟೀರ ಜ್ಯೋತಿ ಯೋಜನೆಗಳಡಿ ದಿ:13–05–2013ರ ಬಾಕಿ ಇರುವ ದಂಢ ಸಹಿತ ವಿದ್ಯುತ್ ದರವನ್ನು ಮನ್ನಾ ಮಾಡಲಾಗಿದೆ ಮತ್ತು ಈ ಸಂಬಂಧ ವಿದ್ಯುತ್ ಸಂಪರ್ಕಗಳನ್ನು ಕಡಿತಗೊಳಿಸಿದ್ದಲ್ಲಿ ಅಂಥ ಸಂಪರ್ಕಗಳನ್ನು ಮರುಸ್ಥಾಪಿಸಲಾಗಿದೆ." ಭಾಗ್ಯ ಜ್ಯೋತಿ ಮತ್ತು ಕುಟೀರ ಜ್ಯೋತಿ ಸ್ಥಾವರಗಳ ದಿ:13–05–2013ರ ಅಂತ್ಯಕ್ಕೆ ಇದ್ದ ಬಾಕಿಯನ್ನು ಸರ್ಕಾರದ ಆದೇಶ ಸಂಖ್ಯೆ:EN/34/PSR/2013, date:17-05-2013 ರಲ್ಲಿ ಮನ್ನಾ ಮಾಡಲಾಗಿದೆ. ಮನ್ನಾ ಮಾಡಿರುವ ಮೊತ್ತವನ್ನು ವಿದ್ಯುತ್ ಸಂಸ್ಥೆಗಳಿಗೆ ಹಿಂಪಾವತಿಸಲು ಆಯವ್ಯಯದಲ್ಲಿ ಹಣ ಒದಗಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ. ಅದಕ್ಕೂ ಇನ್ನೂ ಹಣ ಬಿಡುಗಡೆ ಮಾಡಲಿಲ್ಲ. ನೀವು ಇದನ್ನು ಕಳೆದ ಬಜೆಟ್‌ನಲ್ಲಿ ಮಾಡಿರುವ ಪ್ರಾಮಿಸ್. ಈ ಬಜೆಟ್‌ನಲ್ಲಿ ಅಲ್ಲ.

ಶ್ರೀ ಡಿ.ಕೆ. ಶಿವಕುಮಾರ್:– ಕಳೆದ ವರ್ಷ ಆ ರೀತಿ ಪ್ರಾಮಿಸ್ ಮಾಡಿದ್ದಕ್ಕೆ ಪ್ರತ್ಯೇಕವಾಗಿ ರೈತರಿಗೆ ಒದಗಿಸಿರುವುದು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಉತ್ತರ ಕೊಡುವಾಗ ನೀವು ಹೇಳಿ. ಈ ವರ್ಷದ ಬಜೆಟ್‌ನಲ್ಲಿ ನೀವು ಅದನ್ನೇನು ಸಾಲ ಮನ್ನಾ ಮಾಡಲಿಲ್ಲ. 2013–14 ರಲ್ಲಿ ನೀವು ಮಾಡಿರತಕ್ಕಂಥ ಪ್ರಾಮಿಸ್ ಇದು. ನಮ್ಮ ಹಾಲು ಉತ್ಪಾಧಕರಿಗೆ 4 ರೂಪಾಯಿ ಸಹಾಯಧನ ಕೊಡುವುದು ಒಳ್ಳೆಯ ಕಾರ್ಯಕ್ರಮ, ನಾವು ಇದನ್ನು ಒಪ್ಪುತ್ತೇವೆ. ಆದರೆ, ಇವತ್ತು ಸರ್ಕಾರ ರಸ್ತೆಗಳಲ್ಲಿ ಅನ್ನ ಭಾಗ್ಯ, ಕ್ಷೀರ ಭಾಗ್ಯ, ಇವೆಲ್ಲದರ ಬಗ್ಗೆ ದೊಡ್ಡ ದೊಡ್ಡ ಜಾಹೀರಾತುಗಳನ್ನು ಹಾಕಿಕೊಂಡಿದೆ. 4 ರೂಪಾಯಿ ಹಾಲು ಉತ್ಪಾದಕರಿಗೆ ಕೊಡಬೇಕೆನ್ನುವ ಏನು ತೀರ್ಮಾನ ಮಾಡಿದರು, ಇವತ್ತು ಹಾಲು ಉತ್ಪಾದನೆ ಮಾಡತಕ್ಕಂಥ ಒಂದು ರೈತ ಕುಟುಂಬಗಳಿಗೆ ಹಸುವಿನ ಆಹಾರವನ್ನು ಖರೀದಿ

ಮಾಡಲಿಕ್ಕೆ ಇವತ್ತು ಅದರ ಬೆಲೆ ಎಲ್ಲಿಗೆ ಹೋಗಿದೆ? 2006-07 ರಲ್ಲಿ ಮೊದಲನೇ ಮಾದರಿಯ ಪಶು ಆಹಾರದ ದರ ಒಂದು ಟನ್‌ಗೆ 6,700 ರೂಪಾಯಿ ಇತ್ತು. ವಿಶೇಷವಾದಂಥ ಪಶು ಆಹಾರ ಒಂದು ಟನ್‌ಗೆ 7,510 ರೂಪಾಯಿ ಇತ್ತು. ಆದರೆ, ಇವತ್ತು ಅಂದರೆ, 20-12-2012ರಲ್ಲಿ ಒಂದು ಟನ್ ಪಶು ಆಹಾರಕ್ಕೆ 14,300 ರೂಪಾಯಿಗೆ ಏರಿಕೆ ಆಗಿದೆ. ಹಾಗೆಯೇ ವಿಶೇಷವಾದಂಥ ಪಶು ಆಹಾರ ಒಂದು ಟನ್‌ಗೆ 16,700 ರೂಪಾಯಿಗೆ ಏರಿಕೆ ಆಗಿದೆ. ಇಲ್ಲಿ ರೈತರಿಗೆ ಎಷ್ಟರಮಟ್ಟಿಗೆ ಲಾಭಾಂಶ ದೊರಕುವುದಕ್ಕೆ ಸಾಧ್ಯವಾಗಿದೆ? ಇವತ್ತಿನದಿವಸ ಆಹಾರ ದರ ಏರಿಕೆ ಆಗಿರುವುದರಿಂದ ರೈತರಿಗೆ ಹೆಚ್ಚಿನ ಲಾಭಾಂಶ ಇದರಿಂದ ದೊರಕುತ್ತಿಲ್ಲ. ಆದ್ದರಿಂದ, ಇದು ದೊಡ್ಡ ಸಾಧನೆ ಅಲ್ಲ ಎನ್ನತಕ್ಕಂಥ ವಿಷಯವನ್ನು ಹೇಳುವುದಕ್ಕೆ ಬಯಸುತ್ತೇನೆ. ನಮ್ಮ ಕೆ.ಎಂ.ಎಫ್.ನವರು ಪಶು ಆಹಾರಕ್ಕೆ ನಿಗದಿ ಮಾಡಿರತಕ್ಕಂಥ ದರ ಇದಾಗಿದೆ. ಆದರೆ, ಮಾರ್ಕೆಟ್‌ನಲ್ಲಿ ಇದಕ್ಕೆ ಇನ್ನೂ ಹೆಚ್ಚಿನ ದರ ಇದೆ. ಈ ಸಹಾಯಧನದ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಲೋಕಸಭೆಯ ಚುನಾವಣೆಯ ಮೇಲೆ ಕಣ್ಣಿಟ್ಟು ಬಜೆಟ್ ಮಾಡಿದ್ದಾರೆ. ಈ ಬಗ್ಗೆ ಪತ್ರಿಕೆಯಲ್ಲಿ ಏನು ಬಂದಿವೆ ಎಂದರೆ, ಒಂದು ಪತ್ರಿಕೆಯಲ್ಲಿ ಕೊಡುಗೆ ಬರಪೂರ ಎಂದು ಬಂದಿದೆ. ಅಹಿಂದ ಕನ್ನಡಿಯಲ್ಲಿ ಜನಪ್ರಿಯ ಬಜೆಟ್ ಬಿಂಬ, ಅದರಲ್ಲಿ 32 ಸಾವಿರ ಕೋಟಿ ಸಾಲದ ಪ್ರತಿಬಿಂಬ, ರೈತ, ವೃದ್ಧ, ಮಹಿಳೆ, ವಿದ್ಯಾರ್ಥಿಗಳಿಗೆ ಆಧಾರಸ್ತಂಬ ಎಂದು ಇನ್ನೊಂದು ಪತ್ರಿಕೆಯಲ್ಲಿ ಬಂದಿದೆ. ಮತ್ತೊಂದು ವಿಷಯ ಏನೆಂದರೆ, 1.4 ಲಕ್ಷ ಆಶ್ರಯ ಮನೆಗಳ ಫಲಾನುಭವಿಗಳ 2480 ಕೋಟಿ ರೂಪಾಯಿ ಸಾಲ ಮನ್ನಾ ಎಂದು ಬಂದಿದೆ. ಇದನ್ನು ಯಾರಾದರು ನೋಡಿದರೆ ಆಶ್ರಯ ಮನೆಗಳ ಫಲಾನುಭವಿಗಳಿಗೆ ಸರ್ಕಾರ ಎಷ್ಟು ಉದಾರತೆಯಿಂದ ಸಾಲ ಮನ್ನಾ ಮಾಡಿದ್ದಾರೆ ಎನ್ನತಕ್ಕಂಥದ್ದು ಮೇಲ್ನೋಟಕ್ಕೆ ಕಾಣುತ್ತದೆ. ಆಶ್ರಯ ಮನೆಗಳ ಫಲಾನುಭವಿಗಳ 2480 ಕೋಟಿ ರೂಪಾಯಿಗಳ ಸಾಲ ಮನ್ನಾ ಮಾಡಿದ್ದೇವೆಂದು ಮಾನ್ಯ ಮುಖ್ಯ ಮಂತ್ರಿಗಳು ಈ ಬಗ್ಗೆ ಮೊನ್ನೆದಿವಸ ಬೆಳಗಾವಿಯಲ್ಲಿ ಒಂದು ದೊಡ್ಡ ಸಭೆಯಲ್ಲಿ ಕೂಡ

ಭಾಷಣ ಮಾಡಿದ್ದಾರೆ. 2480 ಕೋಟಿ ರೂಪಾಯಿ ಸಾಲ ಮನ್ನಾ book adjustment ನಲ್ಲಿ ಆಗುತ್ತಿದೆಯೋ ಅಥವಾ 2480 ರೂಪಾಯಿಗಳನ್ನು ಈ ಸರ್ಕಾರ ಖಜಾನೆಯಿಂದ ಇವತ್ತು ತುಂಬತಕ್ಕಂಥ ಕೆಲಸ ಮಾಡುತ್ತದೆಯೇ ಎಂಬ ಬಗ್ಗೆ ಸರ್ಕಾರ ಸ್ಪಷ್ಟಪಡಿಸಬೇಕೆಂದು ಕೇಳುವುದಕ್ಕೆ ಬಯಸುತ್ತೇನೆ. ಮತ್ತೊಂದು ಪತ್ರಿಕೆಯಲ್ಲಿ 65ರ ಸಿದ್ದು ಬಜೆಟ್‌ಗೆ 29ರ ಹರೆಯ, ಇದು ಚುನಾವಣೆಯ ಭಾಗ್ಯ ಎಂದು ಇನ್ನೂ ಹಲವಾರು ರೀತಿಯಲ್ಲಿ ಹೇಳಿದ್ದಾರೆ. Times if India ಪತ್ರಿಕೆಯಲ್ಲಿ ಏನು ಹೇಳಿದ್ದಾರೆಂದರೆ, "Bangalore infrastructure is set to get 9,477 crores push" ಎನ್ನತಕ್ಕಂಥ ಒಂದು headlines ಕೊಟ್ಟಿದ್ದಾರೆ. ಬೆಂಗಳೂರು ನಗರದ ಅಭಿವೃದ್ಧಿಗೆ ಈ ಸರ್ಕಾರದ ಬಜೆಟ್‌ನಲ್ಲಿ 9,477 ಕೋಟಿ ಹಣ ಇಟ್ಟಿದ್ದಾರೆಂದು ಹೇಳಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಮೊದಲನೇ ಬಜೆಟ್‌ನಲ್ಲಿ ಈ ಸಾಲದ ಬಗ್ಗೆ ಸರ್ಕಾರದ ರೆವಿನ್ಯೂ ಕಲೆಕ್ಷನ್ ಬಗ್ಗೆ ಚರ್ಚೆ ಮಾಡಿದ್ದಾರೆ. ಅವರೇ ಕೊಟ್ಟಿರುವಂಥ ಮಾಹಿತಿ ಏನೆಂದರೆ, ಸರ್ಕಾರ ಒಂದು ರೆವಿನ್ಯೂ ಕಲೆಕ್ಷನ್‌ನಲ್ಲಿ ಇರತಕ್ಕಂಥ ಲೋಪದೋಷಗಳನ್ನು ಸರಿಪಡಿಸಿ ರೆವಿನ್ಯೂ ಕಲೆಕ್ಷನ್‌ಗೆ ಹೆಚ್ಚಿನ ಆದ್ಯತೆಯನ್ನು ಕೊಡುತ್ತೇವೆಂದು ಹೇಳಿದ್ದರು. 2013–14ನೇ ಸಾಲಿನ ನಮ್ಮ medium term fiscal plan, ಮಧ್ಯಮಾವಧಿಯ ವಿತ್ತೀಯ ಯೋಜನೆಯ ಒಂದು ಪುಸ್ತಕವನ್ನು ನಮಗೆ ಕೊಟ್ಟಿದ್ದಾರೆ. ಈ ವರ್ಷ ಸರ್ಕಾರ ಯಾವರೀತಿಯಾಗಿ ತೆರಿಗೆಯನ್ನು ಕ್ರೋಢೀಕರಿಸತಕ್ಕಂಥರಲ್ಲಿ ಗುರಿಯನ್ನು ಇಟ್ಟಿರುವುದಕ್ಕೆ ಸಂಬಂಧಪಟ್ಟಂತೆ ಅವರೇ ಹೇಳಿದ ಪ್ರಕಾರ 3,700 ಕೋಟಿ ರೂಪಾಯಿಗಳಿಗೆ ಮಿಗಿಲಾಗಿ ತೆರಿಗೆ ಖೋತಾ ಆಗಿರುವುದನ್ನು ಈ ಸರ್ಕಾರದಲ್ಲಿ ನಾವು ಕಾಣುತ್ತಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳು ಕಳೆದ ಸರ್ಕಾರಗಳ ನಡವಳಿಕೆ ಮತ್ತು ವೈಫಲ್ಯದ ಬಗ್ಗೆ ಮೊದಲನೇ ಬಜೆಟ್‌ನಲ್ಲಿ ಚರ್ಚೆ ಮಾಡಿದರು. ಇವೆಲ್ಲವನ್ನು ಸರಿಪಡಿಸತಕ್ಕಂಥ ಜವಾಬ್ದಾರಿ ನನ್ನ ಮೇಲೆ ಇದೆ ಎನ್ನತಕ್ಕಂಥ ಮಾತನ್ನು ಹೇಳಿದರು. ಆದರೆ ಅವರು ಇವತ್ತು ಎಷ್ಟರಮಟ್ಟಿಗೆ ಜವಾಬ್ದಾರಿಯನ್ನು ನಿರ್ವಹಿಸಿದ್ದಾರೆಂಬುದನ್ನು ಅವರು ಕೊಟ್ಟಿರತಕ್ಕಂಥ ಪುಸ್ತಕದಲ್ಲಿ ನಾವು ಕಾಣಬಹುದಾಗಿದೆ. ಅವರ ಗುರಿಯನ್ನು

ಮುಟ್ಟಿತಕ್ಕಂಥದ್ದರಲ್ಲಿ ಅವರು ವಿಫಲರಾಗುತ್ತಿದ್ದಾರೆಂದು ನಾವು ಇಲ್ಲಿ ಕಾಣುವುದಕ್ಕೆ ಅವಕಾಶ ಇದೆ. ಮಾನ್ಯ ಮುಖ್ಯ ಮಂತ್ರಿಗಳು ಹಿಂದಿನ ಸರ್ಕಾರಗಳ ಹಲವಾರು ರೀತಿಯ ವೈಫಲ್ಯಗಳನ್ನು ಹೇಳಿದ್ದಾರೆ. ಇವತ್ತು ಸರ್ಕಾರ ಗಮನಕ್ಕೆ ತರಕ್ಕಂಥ ವಿಷಯ ಏನೆಂದರೆ, ನಮ್ಮ ರಾಜ್ಯದ growth rate ಏನಿತ್ತು ಎಂಬ ಬಗ್ಗೆ ಸದನದ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಮಾನ್ಯ ಧರ್ಮಸಿಂಗ್‌ರವರ ಸರ್ಕಾರದಲ್ಲಿ ಮಾನ್ಯ ಸಿದ್ದರಾಮಯ್ಯನವರು ಉಪ ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಅವತ್ತು ನಮ್ಮ ರಾಜ್ಯದ growth rate 10.51% ಇತ್ತು. ದೇಶದ growth rateಗೆ ನಾವು compare ಮಾಡಿದಾಗ ಅವತ್ತಿನದಿವಸ ನಾವು ಸ್ವಲ್ಪ ಮೇಲೆ ಇದ್ದೆವು. ಅಂದರೆ, ಅವರು ಮುಖ್ಯಮಂತ್ರಿಗಳಾಗಿದ್ದಾಗ ದೇಶದ GDP rate 9.48% ಇತ್ತು. ಅವತ್ತು ನಮ್ಮ ರಾಜ್ಯದ GDP rate 10.51% ಇತ್ತು. 2006–07ರಲ್ಲಿ ನಮ್ಮ ಸಮ್ಮಿಶ್ರ ಸರ್ಕಾರ ಆಡಳಿತಕ್ಕೆ ಬಂತು. ಅವತ್ತಿನ ದಿವಸ ನಮ್ಮ ರಾಜ್ಯದ Growth rateನಲ್ಲಿಯು ಸಹ ದೇಶದ Growth rateಗಿಂತಲೂ ನಾವು ಮೇಲಿದ್ದೇವೆ. ಅವತ್ತು ದೇಶದ Growth rate 9.5% ಇದ್ದಾಗ ನಮ್ಮದು Growth rate 9.98% ಇತ್ತು. 2007–08ರಲ್ಲಿ ನಮ್ಮ Growth rate ದೇಶದ ಒಂದು GDPಗಿಂತ ಹೆಚ್ಚಿತ್ತು. ಆ ಅವಧಿಯಲ್ಲಿ ನಾವು ದೊಡ್ಡಮಟ್ಟದಲ್ಲಿ achievement ಮಾಡಿದ್ದೇವೆ. 2007–08ರಲ್ಲಿ ನಮ್ಮ ರಾಜ್ಯದ Growth rate 12.6% ಇತ್ತು. ಅವತ್ತು ದೇಶದ Growth rate 9.32% ಇತ್ತು. ಆಗ ದೇಶದ GDPಯಲ್ಲಿ ನಮ್ಮ ರಾಜ್ಯ 7ನೇ ಸ್ಥಾನದಲ್ಲಿತ್ತು. ಈಗ ಆ ಪರಿಸ್ಥಿತಿಗಳು ಎಲ್ಲಿಗೆ ಬಂದಿವೆ? 2008–09ರಲ್ಲಿ ಮತ್ತೇ ಏನು decline ಆಯಿತು. ಆಗ ನಮ್ಮ GDP growth rate 7.11%ಗೆ ಬಂತು. ಅವತ್ತು ದೇಶದ GDP 6.72% ಇತ್ತು. ಆಗ ನಾವು 25ನೇ ಸ್ಥಾನಕ್ಕೆ ಹೋದೆವು. ನಂತರ 2009–10ರಲ್ಲಿ ದೇಶದ GDP ಗಿಂತ ನಾವು ಅತ್ಯಂತ ಕೆಳಮಟ್ಟಕ್ಕೆ ಇಳಿಯುವಂತಹ ವಾತಾವರಣ ನಿರ್ಮಾಣವಾಯಿತು. 2009–10ರಲ್ಲಿ ನಮ್ಮದು growth rate 5.2% ಇತ್ತು, ದೇಶದ್ದು 8.39% GDP ಇತ್ತು. 2009–10ರಲ್ಲಿ ನಾವು 31ನೇ ಸ್ಥಾನಕ್ಕೆ ಹೋಗಿದ್ದೇವೆ. 2010–11ರಲ್ಲಿ ಸ್ವಲ್ಪ ದೇಶದ GDP growth rateಗಿಂತ ಸ್ವಲ್ಪ ಮೇಲಿದ್ದೆವು. ಆಗ ನಮ್ಮ

ರಾಜ್ಯದ್ದು 8.87% ಇತ್ತು, ದೇಶದ್ದು 8.3% ಇತ್ತು. ನಾವು ಅವತ್ತು 25ನೇ rateನಲ್ಲಿದ್ದೆವು. 2011–12ರಲ್ಲಿ ಕರ್ನಾಟಕದ GDP 6.44%, India ದೇಶದ್ದು 6.88%. ಅವತ್ತು ನಾವು 29ನೇ ಸ್ಥಾನದಲ್ಲಿದ್ದೇವೆ. ನಾನು ಏತಕ್ಕಾಗಿ ಈ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆಂದರೆ, ಇವತ್ತು ನಮ್ಮ ಒಂದು ರಾಜ್ಯ 6 ಮತ್ತು 7 ನೇ ಸ್ಥಾನದಲ್ಲಿದ್ದಂತಹ ಪರಿಸ್ಥಿತಿಯಿಂದ ಇವತ್ತು ನಾವು ಕೊನೆಯ ಹಂತಕ್ಕೆ ಹೋಗುತ್ತಿದ್ದೇವೆ. ಇವತ್ತು ಜಾರ್ಖಂಡ್ ಮತ್ತು ಉತ್ತರಖಂಡದಂತಹ ಸಣ್ಣ ರಾಜ್ಯಗಳು ಮತ್ತು ಬಿಹಾರದಂತಹ ಅತ್ಯಂತ ಹಿಂದುಳಿದಿರುವಂತಹ ಈ ಎಲ್ಲಾ ರಾಜ್ಯಗಳು ಇವತ್ತು ನಮ್ಮನ್ನು ಮೀರಿಸಿ ಅವರು GDPಯಲ್ಲಿ achievement ಕಾಣುತ್ತಿದ್ದಾರೆ. ಇವತ್ತು ನಮ್ಮ ರಾಜ್ಯದಲ್ಲಿರುವಂತಹ ಎಲ್ಲಾ ರೀತಿಯ resourceಗಳು ಎಲ್ಲಾ ರೀತಿಯ positive directionನಲ್ಲಿ ಹೋಗುವಂತಹ ಅವಕಾಶಗಳು ಈ ರಾಜ್ಯದಲ್ಲಿದ್ದರೂ ನಾವು ಯಾವ ಕಾರಣಕ್ಕಾಗಿ GDP rateನಲ್ಲಿ ಕುಸಿಯುತ್ತಿದ್ದೇವೆ? ಈಗ ಸರ್ಕಾರಗಳು ಬೆನ್ನುತಟ್ಟಿಕೊಳ್ಳುತ್ತವೆ. ಮೊನ್ನೆ ಹಿಂದಿನ ಮಾಜಿ ಮುಖ್ಯಮಂತ್ರಿಗಳು ಯಾವುದೋ ಒಂದು ಟಿ.ವಿ.ಚಾನೆಲ್‌ನಲ್ಲಿ ಹೇಳುತ್ತಿದ್ದರು. ನಾವು ಸರ್ಕಾರವನ್ನು ನಡೆಸಬೇಕಾದರೆ 39,000 ಮತ್ತು 40,000 ಕೋಟಿ ರೂಪಾಯಿಗಳು ಇರುವಂತಹ ಬಜೆಟ್ ಗಾತ್ರವನ್ನು 1,00,000 ವನ್ನು ಮೀರಿಸಿ ಬಜೆಟ್ ಅನ್ನು ಮಂಡನೆ ಮಾಡಿದೆವು. ಇದು ನಮ್ಮ achievement ಅಲ್ಲವೇ ಎಂದು ಟಿ.ವಿ.ಯಲ್ಲಿ ಹೇಳಿರುವುದನ್ನು ನಾನು ಗಮನಿಸಿದ್ದೇನೆ. ಇಲ್ಲಿ ಪ್ರಶ್ನೆ ಇರುವುದೇನೆಂದರೆ, ನಿಮ್ಮ ಬಜೆಟ್ ಗಾತ್ರವನ್ನು ದೊಡ್ಡ ಮಟ್ಟದಲ್ಲಿ ತೋರಿಸುವುದು ಒಂದು ಭಾಗವಾಗಿದೆ. ಆದರೆ ಇವತ್ತು ನಮ್ಮ GDP growth rateನಲ್ಲಿ ರಾಜ್ಯದ ಬೆಳವಣಿಗೆಯ ದೃಷ್ಟಿಯಿಂದ ಮತ್ತು ರಾಜ್ಯದಲ್ಲಿ ಸರ್ಕಾರಗಳು ಆಸ್ತಿಯನ್ನು ವೃದ್ಧಿ ಮಾಡುವಂತಹ ವಿಷಯದಲ್ಲಿ ಎಷ್ಟರಮಟ್ಟಿಗೆ ನಾವು ಇವತ್ತು ಸಾಧನೆಯನ್ನು ಮಾಡುತ್ತಿದ್ದೇವೆ ಎಂಬುದರ ಬಗ್ಗೆ ಸರ್ಕಾರವು ಚಿಂತನೆಯನ್ನು ಮಾಡಿ ಉತ್ತರವನ್ನು ಕೊಡಬೇಕಾಗಿದೆ ಎಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ಹಲವಾರು ಬದಲಾವಣೆಗಳನ್ನು ತರುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪ

ಮಾಡಿದ್ದಾರೆ. ಅದಕ್ಕಿಂತ ಮುಂಚಿತವಾಗಿ ಒಂದು ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಅದೇನೆಂದರೆ, ನಮ್ಮ ಅಧಿಕಾರಿಗಳಿಗೆ ಈ ಒಂದು ಸರ್ಕಾರದ ದಾಖಲೆಗಳನ್ನು ಪ್ರಿಂಟ್ ಹಾಕಿಸಬೇಕಾದಾಗ ಸ್ವಲ್ಪ ಸರಿಯಾಗಿ ಕೆಲಸ ನಿರ್ವಹಿಸುವ ಬಗ್ಗೆ ಸರ್ಕಾರವು ಅವರಿಗೆ ಹೇಳಬೇಕಾಗುತ್ತದೆ. ಇಲ್ಲಿ ಮಧ್ಯಮಾವಧಿ ವಿತ್ತೀಯ ಯೋಜನೆಯಲ್ಲಿ ನಮ್ಮ ಅಧಿಕಾರಿಗಳು ಕೊಟ್ಟಿರುವಂತಹ ಮಾಹಿತಿಯಲ್ಲಿ Trends in growth rate ಎಂಬ ಮಾಹಿತಿಯನ್ನು table-2 ನಲ್ಲಿ ಹೇಳುತ್ತಾರೆ. 2009–10ಕ್ಕೆ ನಮ್ಮ GDP Growth rate 1.3% ಎಂದು ಮತ್ತು 2011–12ಕ್ಕೆ 3.3% ಎಂದು ಕೊಟ್ಟಿದ್ದಾರೆ. ಈ ಪುಸ್ತಕ ಪ್ರಿಂಟ್ ಮಾಡಬೇಕಾದರೂ ಇವತ್ತು World Bank ನವರು ಇರಬಹುದು, ನೀವು World Bank ಮುಂದೆ ಹೋದಂಥ ಸಂದರ್ಭದಲ್ಲಿ ಬೇರೆ ಬೇರೆ investors ನಮ್ಮ ರಾಜ್ಯದ growth rate ಯಾವ ರೀತಿ ಇದೆ ಎನ್ನತಕ್ಕಂಥದ್ದನ್ನು ನೋಡಿಯೇ ತೀರ್ಮಾನಕ್ಕೆ ಬರುತ್ತಾರೆ. ನೀವು ನಮ್ಮ growth rate ವ ವಿಷಯದಲ್ಲಿ ಈ ರೀತಿಯ ಒಂದು ಸುಳ್ಳು ದಾಖಲೆಗಳನ್ನು ನೀವೇ ಪ್ರಿಂಟ್ ಹಾಕುವುದಾದರೆ ಅಲ್ಲಿ ಎಷ್ಟರಮಟ್ಟಿಗೆ ಜವಾಬ್ದಾರಿಯಿಂದ ಕೆಲಸ ನಿರ್ವಹಿಸುತ್ತಿದ್ದೀರಿ? ಇವತ್ತು GDP Growth ನ ವಿಷಯದಲ್ಲಿ, ಇವತ್ತು ದೇಶದ ಬೆಳವಣಿಗೆಯ ಬಗ್ಗೆ interment ನಲ್ಲಿ ಸಿಗುತ್ತದೆ. ಕೇಂದ್ರ ಸರ್ಕಾರದಲ್ಲಿರತಕ್ಕಂಥ ಮಾಹಿತಿಯ ಪ್ರಕಾರವೇ ಕೇಂದ್ರ ಸರ್ಕಾರದವರು 2009–10 ರಲ್ಲಿ ಕರ್ನಾಟಕದ GDP growth 5.2 ಎಂದು ಕೊಡುತ್ತಾರೆ. ನೀವು ನಿಮ್ಮ ಪುಸ್ತಕದಲ್ಲಿ 1.3 ಎಂದು ಪ್ರಿಂಟ್ ಹಾಕುತ್ತೀರಿ. 2011–12 ಕ್ಕೆ 3.3 ಎಂದು ಹಾಕಿದ್ದೀರಿ. ಆದರೆ 2011–12 ರಲ್ಲಿ growth rate 6.44 ಎಂದು ಇದೆ. ಈ ರೀತಿ ಮಾಹಿತಿಗಳನ್ನು ನೀವೇ ಈ ತರಹ ಇಟ್ಟು ಇವತ್ತು ಈ ರಾಜ್ಯಕ್ಕೆ ಯಾರಾದರೂ investors ಬರಬೇಕೆಂದರೆ ಎಲ್ಲಿಂದ ಕರೆದುಕೊಂಡು ಬರುತ್ತೀರಿ? ಇದನ್ನು ಪ್ರಿಂಟ್ ಹಾಕಬೇಕಾದರೆ ಯಾರಾದರೂ ಇದನ್ನು ಗಮನಿಸಿದ್ದೀರಾ? ಎಷ್ಟರಮಟ್ಟಿಗೆ ಸರ್ಕಾರ ಜಾಗರೂಕತೆಯಿಂದ ಕೆಲಸ ಮಾಡುತ್ತಿದ್ದೀರಿ? ಮಾನ್ಯ ಮುಖ್ಯಮಂತ್ರಿಗಳು ಬಜೆಟ್‌ನಲ್ಲಿ ಹೇಳುತ್ತಾರೆ. ಅಧಿಕಾರಿಗಳಿಗೆ ಎಚ್ಚರಿಕೆ ಕೊಟ್ಟು ಆಡಳಿತದಲ್ಲಿ ಒಂದು ಶಿಸ್ತುಬದ್ಧವಾದ

ಆಡಳಿತವನ್ನು ಕೊಡಲಿಕ್ಕೆ ಸರ್ಕಾರ ಎಲ್ಲಾ ಕ್ರಮವನ್ನು ಕೈಗೊಳ್ಳುತ್ತೇವೆಂದು ಹೇಳುತ್ತಾರೆ. ಇದು ಈ ಸರ್ಕಾರದ ಶಿಸ್ತುಬದ್ಧವಾದ ಒಂದು ಆಡಳಿತ. ಯಾವ ಒಂದು ಹಿನ್ನೆಲೆಯಲ್ಲಿ ನಮ್ಮ ರಾಜ್ಯದ Agriculture Sector ಇರಬಹುದು Industrial sector ಇರಬಹುದು, ಈ ಎರಡು sectors ನ ವಿಷಯದಲ್ಲಿ ನಮ್ಮ ಮುಖ್ಯಮಂತ್ರಿಗಳು ಎಷ್ಟರಮಟ್ಟಿಗೆ ಈ ಬಜೆಟ್‌ನಲ್ಲಿ ಹಣವನ್ನು ಮೀಸಲಿಟ್ಟಿದ್ದಾರೆ? ಇವತ್ತು ನಮ್ಮ ರಾಜ್ಯದಲ್ಲಿ Agriculture sectorನಲ್ಲಿ, ಇವತ್ತು ಪಾಪ, ಇಲ್ಲಿ ಇನ್ನೊಂದು ಕೃಷಿ ಬೆಲೆ ಆಯೋಗದ ಬಗ್ಗೆ ಹೇಳುತ್ತಾ ಐತಿಹಾಸಿಕವಾದಂಥ ಕೃಷಿ ಆಯೋಗ ರಚನೆ ಮಾಡುತ್ತೇವೆಂದು ಹೇಳಿಕೊಂಡಿದ್ದಾರೆ. ನಮ್ಮ ಮಾನ್ಯ ರಮೇಶ್ ಕುಮಾರ್‌ರವರು ಹೋದ ಸಲ ತಮ್ಮ ಬಜೆಟ್ ಭಾಷಣದಲ್ಲಿ ಹೇಳಿದರು. ಇದು ದೇಶದಲ್ಲಿ ಯಾರು ಮಾಡದೇ ಇರುವುದಕ್ಕೆ ಆಗದೇ ಇರತಕ್ಕಂಥದ್ದು. ಇಲ್ಲಿ ಬಜೆಟ್‌ನಲ್ಲಿ ರೈತರ ಬೆಳೆಗಳಿಗೆ ಯೋಗ್ಯವಾದ ಬೆಲೆ ನಿಗಧಿ ಪಡಿಸಲು ವಾಗ್ದಾನ ನೀಡಿರುವಂತೆ ಕೃಷಿ ಬೆಲೆ ಆಯೋಗ ರಚಿಸುವ ಆದೇಶ ಹೊರಡಿಸಿದ್ದೇವೆ ಎಂದು ಹೇಳುತ್ತಾರೆ. ಆದರೆ action taken report ನಲ್ಲಿ ಏನು ಹೇಳುತ್ತಾರೆಂದರೆ, ಸಚಿವ ಸಂಪುಟದ ಉಪ ಸಮಿತಿಯ ಶಿಫಾರಸ್ಸಿನಂತೆ ಕರಡು ಸಚಿವ ಸಂಪುಟದ ಟಿಪ್ಪಣಿಯನ್ನು ಅನುಮೋದನೆಗೆ ಸಲ್ಲಿಸಿದೆ ಎಂದು ಹೇಳುತ್ತಾರೆ. ಸರ್ಕಾರ ಬಂದು ಒಂದು ವರ್ಷವಾಗುತ್ತಾ ಬಂತು, ಎರಡನೆಯ ಬಜೆಟ್ ಅನ್ನು ಮಂಡನೆ ಮಾಡಿದ್ದಾರೆ. ಈಗ ದೇಶಕ್ಕೆ ಮಾದರಿಯಾಗುವಂತೆ ಐತಿಹಾಸಿಕವಾದಂಥ ಕೃಷಿ ಬೆಲೆ ಆಯೋಗ ಮಾಡುತ್ತೇವೆಂದು ಹೇಳಿದರು. ನಾವು ಅದನ್ನು ಕಾಣುತ್ತಿದ್ದೇವೆ. ಇವತ್ತು ಈ ಸರ್ಕಾರ ಯಾವ ರೀತಿಯಲ್ಲಿ ಬಜೆಟ್ ಆಲೋಕೇಶನ್ ಮಾಡುತ್ತಿದ್ದಾರೆ? ಇವತ್ತು ನಮ್ಮ ರಾಜ್ಯದಲ್ಲಿ ಹಣದ ಕೊರತೆ ಇಲ್ಲ. ಪ್ರತಿ ವರ್ಷ ನಮ್ಮ revenue resourcesನಲ್ಲಿ 23% ನಾವು achievement ಮಾಡುತ್ತಿದ್ದೇವೆ. ಅದು borrowing ಸೇರಿ revenue resources achievement. ಆದರೆ ಇವತ್ತು ಎಷ್ಟರಮಟ್ಟಿಗೆ ಈ ರಾಜ್ಯದ ಖಜಾನೆಯ ಹಣವನ್ನು, ಈ ರಾಜ್ಯದ 6 ಕೋಟಿ ಜನರ ಹಣವನ್ನು ಇವತ್ತು ರಾಜ್ಯದ ಅಭಿವೃದ್ಧಿಗೆ ಪೂರಕವಾದ ರೀತಿಯಲ್ಲಿ ಸದ್ಭಳಕೆ ಮಾಡುತ್ತಿದ್ದೇವೆ? ಇವತ್ತು ಸರ್ಕಾರ

ಹೇಳಬೇಕಾಗುತ್ತದೆ. ಇವತ್ತು ಸತತವಾಗಿ ಹಲವಾರು ಕಡೆ ಬರಗಾಲ ಇದೆ ಎಂದು ಸರ್ಕಾರದಿಂದಲೇ ಹೇಳಿದಿರಿ. ಈಗಾಗಲೇ 95 ತಾಲ್ಲೂಕುಗಳು ಬರಗಾಲದಿಂದ ಈ ವರ್ಷ ತೊಂದರೆಗೆ ಒಳಗಾಗಿವೆ. ಆ ಬರಗಾಲಕ್ಕೆ ಸರ್ಕಾರದಿಂದ ಏನು ಕ್ರಮ ತೆಗೆದುಕೊಳ್ಳುವುದಕ್ಕೆ ಹೊರಟಿದ್ದೀರಿ? ಕುಡಿಯುವ ನೀರಿನ ವಿಷಯದಲ್ಲಿ ಹೇಳುವುದಾದರೆ, ನಿನ್ನೆ ನಿಯಮ 69ರ ಅಡಿಯಲ್ಲಿ ಕೆಲವು ಸದಸ್ಯರುಗಳು ಕುಡಿಯುವ ನೀರಿನ ಸಮಸ್ಯೆ ಎಷ್ಟು ಇದೆ ಎಂದು ಹೇಳಿ ಚರ್ಚೆಯನ್ನು ಮಾಡಿರುತ್ತಾರೆ. ಇವತ್ತು ನಮ್ಮ ಸರ್ಕಾರ Irrigation project ಗಳನ್ನು complete ಮಾಡತಕ್ಕಂಥದ್ದು, ಅದರ ಜೊತೆಗೆ power sector ಅನ್ನು improvement ಮಾಡಬೇಕಾಗಿದೆ, ಈ ಎರಡರಲ್ಲಿ ಎಷ್ಟರಮಟ್ಟಿಗೆ ಈ ಸರ್ಕಾರ ಎಡವಿದೆ ಎನ್ನುವುದನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಹಲವಾರು ಪ್ರದೇಶದಲ್ಲಿ ಈ ವರ್ಷವೂ crop loss ಆಯಿತು. ಈ ವರ್ಷ ನಾವು ಉತ್ಪಾದನೆಯಲ್ಲಿ ಹೆಚ್ಚಿನ ಒಂದು achievement ಕಂಡಿದ್ದರೆ, ಇವತ್ತು ರೈತರು ಆಹಾರವನ್ನು ಬೆಳೆಯತಕ್ಕಂಥದ್ದರಲ್ಲಿ ಇವತ್ತು ಆ achievement ಕಂಡಿದ್ದರೆ ಅದು ಸರ್ಕಾರದ ಸಹಕಾರದಿಂದ ಅಲ್ಲ. ಇವತ್ತು ದೇಶದ ರೈತರಿಗೆ ನಮ್ಮ ರಾಷ್ಟ್ರಪತಿಗಳು ಮತ್ತು ಕೃಷಿ ಸಚಿವರು ಅಭಿನಂದನೆಯನ್ನು ಸಲ್ಲಿಸಿದರು. ಇವತ್ತು ಸರ್ಕಾರಗಳ assistanceಗಿಂತ ಹೆಚ್ಚಾಗಿ ಪ್ರಕೃತಿಯ ಒಂದು ಸಹಕಾರದಿಂದ ಇವತ್ತು ನಮ್ಮ ರೈತರು ಬೆಳೆಯನ್ನು ಬೆಳೆದಿದ್ದಾರೆಯೇ ಹೊರತು ಸರ್ಕಾರ ದೊಡ್ಡ ಮಟ್ಟದಲ್ಲಿ ಇವತ್ತು ಸಹಕಾರ ಕೊಟ್ಟು ರೈತರನ್ನು ಉದ್ಧಾರ ಮಾಡತಕ್ಕಂಥದ್ದಕ್ಕೆ ಇವತ್ತು ರೈತರನ್ನು ಪ್ರೋತ್ಸಾಹ ಕೊಡತಕ್ಕಂಥದ್ದಕ್ಕೆ ಇವರಿಂದ ಇವತ್ತು ಆಹಾರ ಉತ್ಪಾದನೆಯಲ್ಲಿ achievement ಕಂಡಿದ್ದು ಅಲ್ಲ. ಪ್ರಕೃತಿಯ ಸಹಕಾರದಿಂದ ನಾವು ಈ ಒಂದು Agriculture sector ನಲ್ಲಿ growth ಅನ್ನು ನಾವು ಕಾಣುತ್ತಿದ್ದೇವೆ. ಕಳೆದ 5 ವರ್ಷದಲ್ಲಿ ಹಲವಾರು ರೀತಿಯ ಏರುಪೇರುಗಳನ್ನು ನಮ್ಮ ರೈತರು ಏನು ಕಂಡಿದ್ದಾರೆ, ಇವತ್ತು ಅಂತಿಮವಾಗಿ ಮಾನ್ಯ ಜಗದೀಶ್ ಶೆಟ್ಟರ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಸಾಲ ಮನ್ನಾ ಎಂದು ಘೋಷಣೆ ಮಾಡಿದರು. ಆದರೆ ನಂತರ ಆ ಹಣವನ್ನು ಸಂಪೂರ್ಣವಾಗಿ ಬಿಡುಗಡೆ ಮಾಡುವುದಕ್ಕಾಗದೆ ಹಂತ ಹಂತವಾಗಿ ಈ

ಸರ್ಕಾರ ಸ್ವಲ್ಪ ಸಾಲ ಮನ್ನಾ ಯೋಜನೆಯನ್ನು ಅನುಷ್ಠಾನಕ್ಕೆ ತಂದಿರುವುದು ನಮ್ಮ ರೈತರು ಸ್ವಲ್ಪ ಉತ್ಸಾದಿಂದ ಕೆಲಸವನ್ನು ನಿರ್ವಹಿಸುವುದಕ್ಕೆ ಒಂದು ಕಾರಣ ಇರಬಹುದು. ನಮ್ಮ ಹಿಂದಿನ ಹಲವಾರು ಸರ್ಕಾರಗಳ ತಪ್ಪುಗಳನ್ನು ಸರಿಪಡಿಸಿಕೊಳ್ಳುವುದರಲ್ಲಿ ಈ Agriculture sector ಗೆ ಸರ್ಕಾರ ಮುತುವರ್ಜಿಯನ್ನು ಕೊಡಬೇಕಾಗಿದೆ. ಇವರು ಇವತ್ತು ಹಳೆಯ ಸರ್ಕಾರದ ಚಾಲನೆಯಲ್ಲಿಯೇ ಹೊರಟಿದ್ದಾರೆ. ಯಾವ ಬದಲಾವಣೆಯನ್ನು ಕಾಣುವುದಕ್ಕೆ ಸಾಧ್ಯವಾಗುತ್ತಿಲ್ಲ. Industrial growth ವಿಷಯದಲ್ಲಿ ಹೇಳುವುದಾದರೆ, ಅಕ್ಟೋಬರ್ ತಿಂಗಳಲ್ಲಿ ಇನ್ನೊಂದು GIM ಕಾರ್ಯಕ್ರಮವನ್ನು ಮಾಡುತ್ತಿದ್ದಾರೆ. ಆ GIM ಕಾರ್ಯಕ್ರಮ ಮಾಡಿದ achievement ಬಿಟ್ಟರೆ ನೀವು ಯಾವುದೇ ರೀತಿಯ Industrial growth ಬಗ್ಗೆ ಸರ್ಕಾರ ಯಾವುದೇ ರೀತಿಯ ಗಮನವನ್ನು ಕೊಟ್ಟಿಲ್ಲ. ಇದನ್ನು ಬಹಳ ಸ್ಪಷ್ಟವಾಗಿ ಹೇಳುವುದಕ್ಕೆ ಬಯಸುತ್ತಿದ್ದೇನೆ. ಇವತ್ತು ಈ ರಾಜ್ಯದಲ್ಲಿ ಸರಿಯಾದ ರೀತಿಯ ಮತ್ತು ಉತ್ತಮವಾದಂಥ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ಸಾಧ್ಯವಾಗದೆ ಇರತಕ್ಕಂಥ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಇವತ್ತು ಹಲವಾರು ರೀತಿಯ manufacturing unit ಗಳ ಪರಿಸ್ಥಿತಿ ಏನಾಗಿದೆ ಎಂದು ನಾನು ಕೇಳುವುದಕ್ಕೆ ಬಯಸುತ್ತೇನೆ. ಇವತ್ತಿಗೂ ರಾಜ್ಯದಲ್ಲಿ ಒಂದು quality project ಗಳನ್ನು ನಾವು ಕಾಣುವುದಕ್ಕಾಗುತ್ತಿಲ್ಲ. ಇವತ್ತು ಉದಾಹರಣೆಗೆ, ಕೋಲಾರ ಜಿಲ್ಲೆಯಲ್ಲಿ ಒಬ್ಬರು ಹಿರಿಯ ಅಧಿಕಾರಿಗಳು ಇದ್ದರು. ಅವರು ಅಲ್ಲಿಯ ಕೆಲವು ಯುವಕರಿಗೆ ಹೇಳಿದರು. ಕೋಲಾರದಲ್ಲಿ ಟಮಕಾ Industrial area ಎಂದು ಇದೆ. ಎಲ್ಲಾ ಬಲ್ಬ್‌ಗಳನ್ನು prepare ಮಾಡತಕ್ಕಂಥ ಒಂದು manufacturing unit ಅನ್ನು ಹಾಕಿಕೊಳ್ಳಿ ನಿಮಗೆ ಒಳ್ಳೆಯ ಉತ್ತಮವಾದಂಥ ಲಾಭಾಂಶ ದೊರಕುತ್ತದೆಂದು ಹೇಳಿ ಅಲ್ಲಿ ಹಾಕಿಸಿದರು. ಬಹುಶಃ ಅದು ನಿಮ್ಮ ಗಮನದಲ್ಲಿಯೂ ಇರಬಹುದು. ಸರಿಯಾದ ರೀತಿಯಲ್ಲಿ ವಿದ್ಯುಚ್ಛಕ್ತಿಯನ್ನು ಕೊಡದೇ ಇವತ್ತು ಅವೆಲ್ಲಾ ಮುಚ್ಚಿ ಹೋದವು. ಇವತ್ತು ಈ ಸರ್ಕಾರದಲ್ಲಿ ವಿದ್ಯುಚ್ಛಕ್ತಿ production ವಿಷಯದಲ್ಲಿ ಸರಿಯಾದ ರೀತಿಯಲ್ಲಿ ಒಂದು ಕ್ರಮವನ್ನು ತೆಗೆದುಕೊಳ್ಳದೆ ಇರುವುದರಿಂದ ಇವತ್ತು ಈ ಒಂದು growth rate ಎರಡು–

ಮೂರು percentage ನಲ್ಲಿ ನಾವಿದ್ದೇವೆ. ಇವತ್ತು Industrial growth ನಲ್ಲಿ ಇಲ್ಲಿ ಅಲ್ಪಸ್ವಲ್ಪ ರೈತರಿಗೆ ಏನು ವಿದ್ಯುಚ್ಛಕ್ತಿಯನ್ನು ಹಿಂದಿನ ಸರ್ಕಾರ ಫ್ರೀ ಕೊಡುತ್ತೇವೆನ್ನುವ ಒಂದು ತೀರ್ಮಾನವನ್ನು ಮಾಡಿ ಅವರಿಗೆ ಅಲ್ಪಸ್ವಲ್ಪ ಕರೆಂಟ್ ಕೊಡುತ್ತೇವೆಂದು ಹೇಳಿದರು. ಆದರೆ ಅವರಿಗೂ quality current ಅನ್ನು ಕೊಡುವುದಕ್ಕೆ ಸಾಧ್ಯವಾಗಿಲ್ಲ. ಇಂಧನ ಸಚಿವರು ಹಲವಾರು ಹೇಳಿಕೆಗಳನ್ನು ಕೊಟ್ಟಿರುವುದನ್ನು ನಾನು ಗಮನಿಸಿದ್ದೇನೆ. ವಿದ್ಯುಚ್ಛಕ್ತಿಯನ್ನು ರೈತರಿಗೆ ಇವತ್ತು ಉತ್ತಮವಾದಂಥ ರೀತಿಯಲ್ಲಿ ಕೊಡುತ್ತೇವೆ ಎಂದು, ಇದೆಲ್ಲವನ್ನು ನೀವು ಹೇಳಿದ್ದೀರಿ. ಆದರೆ ಇವತ್ತು ಎಷ್ಟರಮಟ್ಟಿಗೆ ಹಳ್ಳಿಗಳಲ್ಲಿ ರೈತರಿಗೆ ಕೃಷಿಗೆ ನೆರವು ನೀಡತಕ್ಕಂಥ ರೀತಿಯಲ್ಲಿ ನೀವು ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡುತ್ತಿದ್ದೀರಿ? ನಾವು ಹೋದಂಥ ಹಲವಾರು ಪ್ರದೇಶಗಳಲ್ಲಿ ಮಧ್ಯರಾತ್ರಿಯ ಎರಡು ಅಥವಾ ಮೂರು ಗಂಟೆಯಲ್ಲಿ ಕರೆಂಟ್ ಅನ್ನು ಕೊಡುತ್ತಾರೆ, ದಯವಿಟ್ಟು ಅದನ್ನು ಬೆಳಗಿನ ಹೊತ್ತಿನಲ್ಲಿ ಕೊಡಿಸಿ ಎಂದು ಆ ರೈತರು ಕೇಳುತ್ತಿದ್ದಾರೆ. ಇವತ್ತು ವಿದ್ಯುಚ್ಛಕ್ತಿಯ ವಿಷಯದಲ್ಲಿ ಈ ಸರ್ಕಾರ ಎಷ್ಟರಮಟ್ಟಿಗೆ ಇವತ್ತು ವಿದ್ಯುತ್ ಉತ್ಪಾದನೆಗೆ ಗಮನ ಹರಿಸುವುದಕ್ಕೆ ನಿರ್ಧಾರವನ್ನು ಮಾಡಿದ್ದಾರೆ ಎನ್ನುವುದನ್ನು ನಂತರ ಆ ವಿಷಯಗಳನ್ನು ನಾನು ಪ್ರಸ್ತಾಪ ಮಾಡಲಿಕ್ಕೆ ಬಯಸುತ್ತೇನೆ. Capital investment ಗೆ ಸರ್ಕಾರದಲ್ಲಿ ಹೆಚ್ಚಿನ ಗಮನವನ್ನು ಕೊಡಬೇಕಾಗಿತ್ತು. ಇವತ್ತು ಯಾವ ರೀತಿಯಲ್ಲಿ invest ಮಾಡಲಿಕ್ಕೆ ಹೊರಟಿದ್ದಾರೆ? ಇದು ಯಾವ ರೀತಿ ಇದೆ ಎಂದರೆ, ಈ ಸರ್ಕಾರದ ಈಗಿನ ಒಂದು financial resources management ಇವತ್ತು ಮಾಡತಕ್ಕಂಥದ್ದು ಇದೆ ಎನ್ನುವುದರ ಬಗ್ಗೆ ಒಂದು ಉದಾಹರಣೆಯನ್ನು ಕೊಡುವುದಕ್ಕೆ ಬಯಸುತ್ತೇನೆ. ಇವತ್ತು ಒಬ್ಬ ಪ್ರತಿಭಾನ್ವಿತ ರ್‍ಯಾಂಕ್ ವಿದ್ಯಾರ್ಥಿ ಯಾವುದೇ ಒಂದು exam ನ question paper ಗಳಲ್ಲಿ ಸ್ವಲ್ಪ ಕಷ್ಟವಾಗಿರುವಂಥದ್ದು ಬರುತ್ತದೆ. ಅವನು zero marks ತೆಗೆಯಲಿಕ್ಕೆ ಹೋಗುವುದಿಲ್ಲ. ಕಷ್ಟವಾದ ಪ್ರಶ್ನೆಗಳು ಇದ್ದರೂ 100 ಕ್ಕೆ 70–80 ಮಾರ್ಕ್ಸ್ ತೆಗೆಯುತ್ತಾನೆ. ಈ ಸರ್ಕಾರ ಹೋಗುವಂಥ ಮಾರ್ಗವನ್ನು ನಾವು ನೋಡಿದರೆ ಎಲ್ಲೋ ಒಂದು ಕಡೆ zero marks ಹೋಗುತ್ತಿದ್ದೇವೆ. ನಮ್ಮಲ್ಲಿ ಎಲ್ಲಾ ರೀತಿಯ

resources ಇದ್ದರೂ ಇವತ್ತು ಈ ರೀತಿ ಸರ್ಕಾರದ attitude ಏನಿದೆ, ಮಧ್ಯಮಾವಧಿ ವಿತ್ತೀಯ ಯೋಜನೆಯಲ್ಲಿ ಕೊಟ್ಟಿರುವಂತಹ ಮಾಹಿತಿ, ಇನ್ನೊಂದು ಮಾಹಿತಿ ಇದೆ. Growth Rate of Karnataka, ಈ ಯಾವ ಒಂದು capital investment ವಿಷಯದಲ್ಲಿ ಯಾವ growth ಅನ್ನು ನಾವು ಕಾಣಬೇಕಾಗುತ್ತದೆ, capital investment ಸರಿಯಾದ ರೀತಿಯಲ್ಲಿ ಸದ್ಬಳಕೆ ಆಗದೇ ಹೋದರೆ ಏನು ತೊಂದರೆಗೆ ಒಳಗಾಗುತ್ತೇವೆ ಎನ್ನುವುದಕ್ಕೆ ಸರ್ಕಾರವೇ ಇನ್ನೊಂದು ವಿಷಯವನ್ನು ಪ್ರಸ್ತಾಪ ಮಾಡಿದೆ. Committed expenditure as a percentage of revenue receipts, ಇಲ್ಲಿ capital expenditure ವಿಷಯ ಬಂದಾಗ, 130 ಮತ್ತು 131 para MTFB page ನಲ್ಲಿ ಈ revenue receipts expenditure side ನಲ್ಲಿ 83% ಇದ್ದಂತಹ expenditure ಅನ್ನು ಈ ಸರ್ಕಾರದಲ್ಲಿ 94% ಗೆ ತೆಗೆದುಕೊಂಡು ಹೋಗಿದ್ದೀರಿ. Capital investment ಏನಾಗಿದೆ ಎಂದರೆ expenditure ನಲ್ಲಿ 4% ಇದ್ದುದ್ದನ್ನು 3% ಗೆ ಇಳಿಕೆ ಮಾಡಿಕೊಂಡಿದ್ದಾರೆ. ಮಾನ್ಯ ಸಿದ್ದರಾಮಯ್ಯನವರಿಗೆ ಮನವಿ ಮಾಡುವುದೇನೆಂದರೆ, ಈ ಒಂದು committed expenditure ಏನಿದೆ, 94%ಗೆ ಏನು ತೆಗೆದುಕೊಂಡು ಹೋಗಿದ್ದೀರಿ, 100% ಗೆ ಹೋಗಿ ಸಂಪೂರ್ಣ ನಾಶ ಮಾಡುವಂತಹ ಕೆಲಸ ಮಾಡಬೇಡಿ. ಇದು ಮಾನ್ಯ ಸಿದ್ದರಾಮಯ್ಯನವರು ಅಧಿಕಾರಕ್ಕೆ ಬಂದ ಮೇಲೆ ಜನ ಹಿಂದೆ ಇದ್ದಂತಹ ಸರ್ಕಾರದ ಬಗ್ಗೆ ಬೇಸತ್ತು ಈ ಸರ್ಕಾರ ಒಳ್ಳೆಯ ಕೆಲಸ ಮಾಡುತ್ತದೆ ಎಂದು ಅಧಿಕಾರ ಕೊಟ್ಟಿರುವುದಕ್ಕೆ ಎರಡೇ ವರ್ಷದಲ್ಲಿ 83% revenue receipts expenditure ಅನ್ನು 94% ತೆಗೆದುಕೊಂಡು ಹೋಗಿ capital investment ಅನ್ನು 4% ನಿಂದ 3% ತೆಗೆದುಕೊಂಡು ಹೋಗುವುದರ ಮೂಲಕ ಇವತ್ತು ಈ ಸರ್ಕಾರ capital investment ಬಗ್ಗೆ ಗಮನ ಕೊಡುತ್ತಿಲ್ಲ. ಸರ್ಕಾರ ಸಾಲ ಮಾಡಿ ಯೋಜನೆಗಳನ್ನು ಅನುಷ್ಠಾನಕ್ಕೆ ತರಬೇಕಾದರೆ, ಯಾವ ಒಂದು asset ಅನ್ನು ಇವತ್ತು ನಿರ್ಮಾಣ ಮಾಡಬೇಕೆಂದು ಹೇಳುತ್ತಾರೆ, ಅಲ್ಲಿ ಬಾಯಿಯಲ್ಲಿ ಹೇಳುತ್ತಿರುವುದು ಒಂದು, ಬಜೆಟ್ ಪುಸ್ತಕದಲ್ಲಿ ಇಟ್ಟಿರುವುದು ಒಂದು, ನೀವು ಅನುಷ್ಠಾನಕ್ಕೆ ತರುತ್ತಿರುವುದು ಒಂದು. ಈ ರೀತಿ ಸರ್ಕಾರದ ಹಣವನ್ನು

ಸ್ವೇಚ್ಛಾಚಾರವಾಗಿ ಹಿಂದಿನ ಸರ್ಕಾರವನ್ನೂ ಮೀರಿಸಿ ಬಹಳ ದಾಪುಗಾಲು ಹಾಕಿ ಹೊರಟಿದ್ದೀರಿ ಅದರಿಂದ ಮುಂದೆ ಈ ರಾಜ್ಯದ ಪರಿಸ್ಥಿತಿ, ಖಜಾನೆಯ ಪರಿಸ್ಥಿತಿ ಎಲ್ಲಿಗೆ ತಂದು ನಿಲ್ಲಿಸಬಹುದು? ಇದು ಈ ಸರ್ಕಾರದ attitude ಏನಿದೆ, ಹೇಳುವುದೊಂದು, ಮಾಡುವುದೊಂದು ಎನ್ನುವುದಕ್ಕೆ ನಾವು ಅವರು ಕೊಟ್ಟಿರುವಂತಹ ಅಂಕಿ–ಅಂಶಗಳಿಂದಲೇ ಇವತ್ತು ಸರ್ಕಾರ ಯಾವ ದಿಕ್ಕಿನಲ್ಲಿ ಹೋಗುತ್ತಿದೆ ಎಂದು ಅರ್ಥೈಸಬಹುದು. Primary Sector and Secondary Sector ಏನಿದೆ, Agriculture and Industries, ಇವತ್ತು ಈ ರೀತಿಯ ಅನುತ್ಪಾದನ ವೆಚ್ಚಗಳಿಗೆ ಹಣವನ್ನು ಮೀಸಲಿಟ್ಟಿದ್ದರಿಂದ ಎರಡೂ sectorಗಳೂ ಸಂಪೂರ್ಣವಾಗಿ ಹಿನ್ನಡೆಯಾಗುವಂತಹ ವಾತಾವರಣವನ್ನು ಈಗಿನ ಬಜೆಟ್‌ನಲ್ಲಿ ಕಾಣಲು ಸಾಧ್ಯವಾಗುತ್ತದೆ. ಹಿಂದಿನ ಸರ್ಕಾರದ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರೇ ಹೇಳಿದ್ದಾರೆ ಏನೆಂದರೆ, 'ಐದು ವರ್ಷಗಳ ಕಾಲ ಅವರು ಅಪಾರ ನಿರೀಕ್ಷೆಯಿಂದ ಕಾಯ್ದರು. ಸರ್ಕಾರ ಅವರ ಕನಿಷ್ಠ ಅಗತ್ಯಗಳನ್ನೂ ಸಹ ಪೂರೈಸದಿದ್ದಾಗ ಸರ್ಕಾರದ ಮೇಲೆ ಅವರಿಟ್ಟಿದ್ದ ನಂಬಿಕೆ ಮತ್ತು ವಿಶ್ವಾಸಗಳು ಕರಗಿಹೋದವು. ಚುನಾವಣೆಯಲ್ಲಿ ಜಾಣ್ಮೆಯಿಂದ ಮತ ಚಲಾಯಿಸುವ ಮೂಲಕ ಅವರು ತಮ್ಮ ವಿವೇಚನೆಯನ್ನು ನಿಚ್ಚಳವಾಗಿ ಪ್ರದರ್ಶಿಸಿದ್ದಾರೆ.' ಎಂದು. ಇದು ಮಾನ್ಯ ಮುಖ್ಯಮಂತ್ರಿಯವರು ಹಿಂದಿನ ಸರ್ಕಾರದ ನಡವಳಿಕೆಯಿಂದ ಜನ ಬೇಸತ್ತು ಅವರಿಗೆ ಇವತ್ತು ಪಾಠ ಕಲಿಸಿ ನಮಗೆ ಅವಕಾಶ ಕೊಟ್ಟಿದ್ದಾರೆ ಎನ್ನುವುದಾಗಿದೆ. ಅದನ್ನು ಹೇಳಿದಂತಹವರು ಇವತ್ತು ಅವರು ಮಾಡಿದ mistake ನಲ್ಲಿಯೇ ಅವರೂ ಇವತ್ತು ಏನು ಹೊರಟಿದ್ದಾರೆ, ಅವರೇ ಹೇಳಿದಂತಹ ರೀತಿಯಲ್ಲಿ ಕರ್ನಾಟಕದ ಜನತೆ ಬಹಳ ಸಹೃದಯಿಗಳು, ಕರುಣಾಮಯಿಗಳು, ಸಂಯಮಶೀಲರು. ಆ ಕರುಣಾಮಯಿ, ಸಂಯಮಶೀಲ ಕರ್ನಾಟಕದ ಜನತೆ ಮತ್ತೆ ನಿಮಗೆ ಶಿಕ್ಷೆ ಕೊಡುವುದಕ್ಕೆ ಮುಂಚೆ ತಿದ್ದಿಕೊಳ್ಳುವಂತೆ ಕೆಲಸವನ್ನು ಮಾಡಬೇಕು. ಈಗ ನೀವು ಮಾಡಿರುವಂತಹ ಈ ಒಂದು ಬಜೆಟ್ ಏನಿದೆ, ಯಾವ ಆಧಾರದ ಮೇಲೆ ನಾವು ಈ ಬಜೆಟ್‌ಗೆ ಸದನದಲ್ಲಿ ಒಪ್ಪಿಗೆ ಕೊಡಬೇಕು? ಯಾವ ಪುರುಷಾರ್ಥಕ್ಕೆ ಸದನದ ಒಪ್ಪಿಗೆ ಕೊಡಬೇಕಾಗುತ್ತದೆ ಎಂದು ಕೇಳಲು ಬಯಸುತ್ತಿದ್ದೇನೆ.

ಪ್ರಮುಖವಾಗಿ irrigation ಬಗ್ಗೆ ನಾವು ಚರ್ಚೆ ಮಾಡುವುದಾದರೆ, ನಿನ್ನೆ ನಮ್ಮ ವಿರೋಧಪಕ್ಷದ ನಾಯಕರಾದ ಮಾನ್ಯ ಜಗದೀಶ್ . ಶೆಟ್ಟರ್‌ರವರು ಮಾತನಾಡುತ್ತಿದ್ದಾಗ, ಮುಂದಿನ ಐದು ವರ್ಷಗಳಲ್ಲಿ 50,000 ಕೋಟಿ ರೂ.ಗಳ ಹಣವನ್ನು ನೀರಾವರಿಗೆ ವೆಚ್ಚ ಮಾಡುವಂತಹ ನಿರ್ಧಾರ ಮಾಡಿದ್ದಾರೆ ಎಂದು ಸರ್ಕಾರ ಹೇಳಿದೆ. ಇವತ್ತು ನೀವು ಇಟ್ಟಿರುವಂತಹ ಹಣದ ಬಗ್ಗೆ 50,000 ಕೋಟಿ ರೂ.ಗಳ ಬಗ್ಗೆ ಹೇಳಿದಿರಿ. ಇವತ್ತು UKP ಗೆ ನೀವು ಅಷ್ಟು ಹಣವನ್ನು ಇಟ್ಟಿಲ್ಲ ಎಂದು ಹೇಳಿದರು. ಈ ರೀತಿ ಚರ್ಚೆ ಮಾಡುತ್ತಾ, ಅವರೇನೋ ಹೇಳಿದರು, ನೀವು ಸುಳ್ಳು ಹೇಳುತ್ತಿದ್ದೀರಿ ಎಂದು ಇವರ ಮೇಲೆ, ಇಲ್ಲ ಕಾಂಗ್ರೆಸ್ಸ್‌ನವರು ಸುಳ್ಳು ಹೇಳುತ್ತಿದ್ದೀರಿ ಎಂದು ಈ ಕಡೆಯಿಂದ ಈ ರೀತಿ ಸುಳ್ಳಿನ ಬಗ್ಗೆಯೇ ಚರ್ಚೆ ನಡೆಯುತ್ತಿತ್ತು. ಆದರೆ ಈ ಬಜೆಟ್ 'bundle of lies', 'ಸುಳ್ಳುಗಳ ಸರಮಾಲೆ' ಈ ಬಜೆಟ್‌ನಲ್ಲಿ ನಾವು ಕಾಣಲಿಕ್ಕೆ ಸಾಧ್ಯವಿದೆ. ಸುಳ್ಳುಗಳ ಸರಮಾಲೆ. ಇಲ್ಲಿ ಸುಳ್ಳಿನ ಬಗ್ಗೆ ಚರ್ಚೆ ನಡೆಯುತ್ತಿತ್ತು. ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ನಿನ್ನೆ ಮಾನ್ಯ ಮುಖ್ಯಮಂತ್ರಿಯವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ, ನೀರಿನ ಹಂಚಿಕೆ ವಿಷಯದಲ್ಲಿ 12 ಅಂಶಗಳ ಬಗ್ಗೆ ಸ್ಪಷ್ಟೀಕರಣಕ್ಕೆ ಸಂಬಂಧಿಸಿದಂತೆ ಬಿ–ಸ್ಕೀಮ್‌ನಲ್ಲಿ ಏನು ತೀರ್ಮಾನವನ್ನು ಕೊಟ್ಟಿದ್ದಾರೆ ಅದರ ಬಗ್ಗೆ ಸುಪ್ರೀಂಕೋರ್ಟ್‌ಗೆ SLP ಹಾಕುತ್ತೇವೆ ಎಂದು ಹೇಳಿದ್ದಾರೆ. ನಿನ್ನೆ ನಾನು ಸದನದಲ್ಲಿ ಇರಲಿಲ್ಲ. ಮಾಧ್ಯಮಗಳಲ್ಲಿ ಗಮನಿಸಿದ್ದೇನೆ. ಇವತ್ತು SLP ಹಾಕುವುದು ಒಂದು ಭಾಗ. ಆದರೆ ಇವತ್ತು ನಮಗೆ ಯಾವ ಒಂದು ಉರುಳನ್ನು ಹಾಕಿದ್ದಾರೆ ಆ ಉರುಳಿನಿಂದ ತಪ್ಪಿಸಿಕೊಳ್ಳುವುದಕ್ಕೆ ನಾವು ಯಾವ ರೀತಿ ಹಣವನ್ನು ಸದ್ಬಳಕೆ ಮಾಡಬೇಕಾಗಿದೆ, ನೀವು 10,000 ಕೋಟಿ ರೂ.ಗಳನ್ನು ಇಟ್ಟಿದ್ದೇವೆ ಎಂದು ಬೆನ್ನುತಟ್ಟಿಕೊಳ್ಳಬೇಕಾಗಿಲ್ಲ. ಇವತ್ತು ಯಾವ 10,000 ಕೋಟಿ ರೂ.ಗಳು ಎಂದು ಹೇಳುತ್ತೀರಿ, ಇವತ್ತಿನ ವೆಚ್ಚ ಏನು ಏರಿಕೆ ಆಗುತ್ತಿರುತ್ತದೆ, ಹಿಂದಿನ ಸರ್ಕಾರಗಳು irrigation ಗೆ ಏನು ಹಣವನ್ನು ಇಟ್ಟಿದ್ದಾರೆ, ಇವತ್ತು ನಮ್ಮ ರೈತನಿಗೆ ಬೇಕಾಗಿರುವಂಥದ್ದು ಉತ್ತಮವಾದಂತಹ ರೀತಿಯಲ್ಲಿ ನೀರಿನ ಸೌಲಭ್ಯ ಬೇಕು ಎನ್ನುವಂಥದ್ದು, ಉತ್ತರ ಕರ್ನಾಟಕದಲ್ಲಿ

ಅವನ ಬಯಕೆ ಏನಿದೆ, 12 ಸ್ಪಷ್ಟೀಕರಣ ಕೇಳುವ ಸಲುವಾಗಿ ನೀವೇ ಕೊಟ್ಟಿರುವಂತಹ ಮಾಹಿತಿ, ಸರ್ಕಾರವೇ ಕೊಟ್ಟಿರುವಂತಹ ಮಾಹಿತಿ. ಈ ವರ್ಷದಿಂದ CWC ಮುಂದೆ ಪ್ರತಿ ನೀವು ಎಷ್ಟು ನೀರನ್ನು ಉಪಯೋಗ ಮಾಡುತ್ತಿದ್ದೀರಿ ಎನ್ನುವ ಮಾಹಿತಿಯನ್ನು ಅಲ್ಲಿ ಕೊಡಬೇಕಾಗಿದೆ. Utilization Certificate ಕೊಡಬೇಕು. ಯಾವ ಒಂದು ಡ್ಯಾಂಗಳಿಂದ ರೈತರ ಹೊಲಕ್ಕೆ ನೀರನ್ನು ಬಿಡುತ್ತೀರಿ, ಕಾಲುವೆಗಳಲ್ಲಿ ನೀರನ್ನು ಹರಿಸುತ್ತಿದ್ದೀರಿ, ಎಷ್ಟು ಟಿ.ಎಂ.ಸಿ ನೀರನ್ನು ಉಪಯೋಗ ಮಾಡುತ್ತಿದ್ದೀರಿ ಇದನ್ನು ಪ್ರತಿವರ್ಷ ಅಲ್ಲಿ ಕೊಡಬೇಕಾಗುತ್ತದೆ. 10,000 ಕೋಟಿ ದುಡ್ಡ ಇಟ್ಟಿದರೆ ಸಾಲುವುದಿಲ್ಲ. 'ಕಾಂಗ್ರೆಸ್ ನಡಿಗೆ ಕೃಷ್ಣಾ ಕಡೆಗೆ' ಎಂದು ಹೇಳಿದ್ದೀರಿ. ಅದು ಕೃಷ್ಣಾ ನದಿಗೆ ಆಂಧ್ರದ ಕಡೆಗೆ ಹೋಗಬಾರದು ಎಂದು ಕಳೆದ ವಿಧಾನಸಭೆ ಕಲಾಪದಲ್ಲಿ ಹೇಳಿದ್ದೇನೆ. ಬಿ–ಸ್ಕೀಮ್‌ನಲ್ಲಿ 12 ಸ್ಪಷ್ಟೀಕರಣದಲ್ಲಿ ತೀರ್ಪು ಕೊಟ್ಟಿದ್ದಾರೆ. ಪ್ರತಿ ವರ್ಷ water utilization ಮಾಡಿಕೊಳ್ಳುವಂತಹ Audit-report ಅಲ್ಲಿ ಹೋಗಬೇಕಾಗುತ್ತದೆ. ಆದ್ದರಿಂದ 10,000 ಕೋಟಿ ರೂ.ಗಳು ಎಂದು ಕೇವಲ ಬಜೆಟ್ ಪುಸ್ತಕದಲ್ಲಿ ತೋರಿಸಿದರೆ ಆಗುವುದಿಲ್ಲ. ಕಳೆದ ವರ್ಷ 9,000 ಕೋಟಿ ರೂ.ಗಳು ಎಂದು ಹೇಳಿದಿರಿ. ಆದರೆ ಇಲ್ಲಿಯವರೆಗೂ 9,000 ಕೋಟಿ ರೂ.ಗಳಲ್ಲಿ ಎಷ್ಟು ಹಣವನ್ನು ಖರ್ಚು ಮಾಡಿದ್ದೀರಿ ಎಂದು ಇವತ್ತು ಹೇಳಬೇಕಾಗುತ್ತದೆ. ಎ–ಸ್ಕೀಮ್‌ನಲ್ಲಿ ಇನ್ನು ಎಷ್ಟು ನೀರನ್ನು ರೈತರ ಹೊಲಕ್ಕೆ ಉಪಯೋಗ ಮಾಡಿಕೊಳ್ಳಲು ಆಗಿಲ್ಲ, ಅದನ್ನು ನೀವು ಉಪಯೋಗ ಮಾಡಿಕೊಳ್ಳದೇ ಇದ್ದರೆ, utilization of water adudit ಏನು ನಡೆಯುತ್ತಿದೆ, ಆ report ಅಲ್ಲಿ ಹೋಗುತ್ತದೆ. ಇನ್ನೂ 70–80 ಟಿ.ಎಂ.ಸಿ ನೀರನ್ನು ಉಪಯೋಗ ಮಾಡಿಕೊಳ್ಳಬೇಕಾಗಿದೆ. ನಾವು ಉಪಯೋಗ ಮಾಡಿಕೊಂಡಿದ್ದೇವೆ ಎಂದು ಅಲ್ಲಿ ಹೇಳಿದ್ದೇವೆ. ಇಲ್ಲಿ ಯಾವ ಸರ್ಕಾರಗಳು, ಯಾವ ಪಕ್ಷಗಳು ನೀರಾವರಿಗೆ ಹೆಚ್ಚಿನ ಬದ್ಧತೆ ತೋರಿಸುತ್ತಿದ್ದಾರೆ ಎನ್ನುವುದು ಪ್ರಶ್ನೆ ಅಲ್ಲ. ನಮ್ಮ ಮಾನ್ಯ ಮುಖ್ಯಮಂತ್ರಿಯವರಿಗೆ ನೆನಪಿಸಿಕೊಳ್ಳಲು ಬಯಸುತ್ತೇನೆ. ಬಹುಶಃ ಮಾನ್ಯ ರಮೇಶ್‌ಕುಮಾರ್‌ರವರು 1995–96ನೇ ಸಾಲಿನಲ್ಲಿ ಅಲ್ಲಿ ಅಧ್ಯಕ್ಷರ ಸ್ಥಾನದಲ್ಲಿ ಕುಳಿತಿದ್ದರು. ಈ ನಾಡಿನ ನೀರಿನ ಒಂದು ಸೌಲಭ್ಯಗಳನ್ನು ಯಾವ ಒಂದು

ನ್ಯಾಯಾಧೀಕರಣವು ನಮಗೆ ನೀರಿನ ಹಂಚಿಕೆಯನ್ನು ಮಾಡಿದ್ದಾರೆ. ಆ ನೀರನ್ನು ನಮ್ಮ ನಾಡಿನ ಜನತೆಗೆ ಕೊಡಬೇಕು ಇದನ್ನು ಪಕ್ಕದ ರಾಜ್ಯದವರು ಕಬಳಿಸಬಾರದು ಎಂದು ಹೇಳಿ 1995–96ರಲ್ಲಿ ಹಲವಾರು ರೀತಿಯ ತೀರ್ಮಾನಗಳನ್ನು ಅವತ್ತಿನ ಆರ್ಥಿಕ ಸಚಿವರಾಗಿ ತೆಗೆದುಕೊಂಡಿರುವಂತಹ ದಿನಗಳು ಏನಿದೆ ಮಾನ್ಯ ಸಿದ್ದರಾಮಯ್ಯನವರೆ ನಿಮಗೆ ನೆನಪಿಸಿಕೊಡುವುದಕ್ಕೆ ನಾನು ಬಯಸುತ್ತೇನೆ. ಬಹುಶಃ 18% interestಗೆ ನೀವು ಸಾಲವನ್ನು ಎತ್ತಿದ್ದೀರಿ. ನೀವು ಬಾಂಡ್ ಯೋಜನೆಯನ್ನು ಜಾರಿಗೆ ತಂದಿರಿ. ಹಲವಾರು ನೀರಾವರಿ ನಿಗಮಗಳನ್ನು ಸ್ಥಾಪನೆ ಮಾಡಿದಿರಿ. ಆದರೆ ನಾವು ಇನ್ನು 'ಎ' ಸ್ಕೀಮ್‌ನ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕಾಗಲಿಲ್ಲ. ಇವತ್ತು ಒಂದು Audit Report ಮಾಡುತ್ತಾರೆ. ನಾವು ನೀರನ್ನು ಉಪಯೋಗ ಮಾಡತಕ್ಕಂತಹ ವಿಷಯದಲ್ಲಿ ಈ ಸತ್ಯಾಂಶ ಅಲ್ಲಿಗೆ ಹೋದರೆ ಅಲ್ಲಿ ಆಂಧ್ರಪ್ರದೇಶದವರು ಕಾಯುತ್ತಿದ್ದಾರೆ. ಆಂಧ್ರದವರಿಗೆ ಇನ್ನು ತೃಪ್ತಿ ಇರುವುದಿಲ್ಲ. ಅವರಿಗೆ ಎಲ್ಲಾ ರೀತಿಯ ಅನುಕೂಲಗಳು ದೊರಕಿದರೂ ಕೂಡ ಮತ್ತೇ Supreme Courtನ ಮುಂದೆ Review Petition ಹಾಕಿಕೊಂಡಿದ್ದಾರೆ. SLP ಹಾಕುವುದಕ್ಕೆ ಹೊರಟ್ಟಿದ್ದಾರೆ. ಯಾವ ಒಂದು ನೀರಿನ ವಿಷಯದಲ್ಲಿ ಕಾಲು ನಡಿಗೆಯನ್ನು ಮಾಡಿದ್ದೀರಿ. ದಯವಿಟ್ಟು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಕೇಳುವುದಕ್ಕೆ ಬಯಸುತ್ತೇನೆ. ಇವತ್ತಿನ ದಿವಸ ನೀರಾವರಿಯ ವಿಷಯದಲ್ಲಿ ಪಾದಯಾತ್ರೆಯನ್ನು ಮಾಡುವ ಮುಖಾಂತರ ನಾಡಿನ ಜನತೆಗೆ ಸ್ಪಷ್ಟವಾದಂತಹ ಸಂದೇಶವನ್ನು ಕೊಡುವುದಕ್ಕೆ ಹೋಗಿದ್ದೀರಿ. ಕಳೆದ ವರ್ಷ 18% ಬಜೆಟ್‌ನಲ್ಲಿ ನೀರಾವರಿ ಯೋಜನೆಗಾಗಿ ಹಣವನ್ನು ಮೀಸಲಿಟ್ಟಿದ್ದೀರಿ. ಈ ವರ್ಷದ ಬಜೆಟ್‌ನಲ್ಲಿ ಎಷ್ಟು percentage ಹಣವನ್ನಿಟ್ಟಿದ್ದೀರಿ. ನಾನು ಆ ಭಾಗದಲ್ಲಿ ಕುಳಿತಿದ್ದಾಗ ಇಲ್ಲಿ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಹಿರಿಯ ನಾಯಕರುಗಳು ಮಾತನಾಡಿರುವುದನ್ನು ನಾನು ಗಮನಿಸಿದ್ದೇನೆ. ಅವತ್ತು ನಮ್ಮ ಸರ್ಕಾರವು ಬಜೆಟ್‌ನಲ್ಲಿ ಹಣ ಇಟ್ಟಿರುವ ಬಗ್ಗೆ ಅವರುಗಳು ಇಲ್ಲಿ ಚರ್ಚೆ ಮಾಡುತ್ತಿದ್ದರು. ನೀರಾವರಿ ವಿಷಯದಲ್ಲಿ 2007–08ರಲ್ಲಿ 17.69% ನೀರಾವರಿ ಯೋಜನೆಗೆ ಇಟ್ಟಿದ್ದರು.

2008–09ರಲ್ಲಿ 13.37% ಇಟ್ಟಿದ್ದಾರೆ. 2009–10ರಲ್ಲಿ 14% ಇಟ್ಟಿದ್ದಾರೆ. 2010–11ರಲ್ಲಿ ನೀರಾವರಿಗೆ 14% ಇಟ್ಟಿದ್ದಾರೆ. 2011–12ಕ್ಕೆ 18% ನೀರಾವರಿಗೆ ಹಣವನ್ನು ಮೀಸಲಿಟ್ಟಿದ್ದರು, 2012–13ಕ್ಕೆ 18% ಏನಿತ್ತು ಈ ವರ್ಷ ಇಟ್ಟಿರುವುದು 2013–14ಕ್ಕೆ 17% ಇದೆ. ಈ ವರ್ಷ ನೀವು ಇಟ್ಟಿರುವುದು ಎಷ್ಟು, ಯಾವ ಒಂದು ನೀರಿನ ಬದ್ಧತೆ ಕೃಷ್ಣೆ ನೀರನ್ನು ಉಳಿಸುತ್ತೇವೆಂದು ಹೇಳಿದ್ದೀರಿ, ಇವತ್ತು ನಿಮ್ಮ ಬಜೆಟ್‌ನಲ್ಲಿ ಎಷ್ಟಿದ್ದೀರಿ ನೀವು 16% ಗೆ ತಂದಿಳಿಸಿದ್ದೀರಿ. ಇಲ್ಲಿ ಚರ್ಚೆ ನಡೆಸಿದರಲ್ಲಾ ಮಾನ್ಯ ವಿರೋಧಪಕ್ಷದ ನಾಯಕರಾದ ಶ್ರೀ ಜಗದೀಶ ಶೆಟ್ಟರ್‌ರವರು ಮಾತನಾಡಬೇಕಾದರೆ ಇವತ್ತು ಈ ಸದನಕ್ಕೆ Irrigation Minister ರವರು ಬರಲಿಲ್ಲ. ಇವತ್ತು ನೀರಿನ ಸದ್ಬಳಕೆ ಮಾಡಿಕೊಳ್ಳುವುದಕ್ಕೆ ನೀವು 10,000 ಕೋಟಿ ಎಂದು ತೋರಿಸಿದರೆ ಆಗುವುದಿಲ್ಲ. ಇವತ್ತು ತಾವು ಬೇರೆ ಕೆಲಸಗಳನ್ನು ಮಾಡುವುದನ್ನು ನಿಲ್ಲಿಸಿ ಅದಕ್ಕೆ ನನ್ನ ವಿರೋಧ ಇಲ್ಲ. ಇವತ್ತು ನಮಗೆ ಪ್ರಮುಖವಾಗಿ ಬೇಕಾಗಿರುವುದು ನಮ್ಮ ರೈತ ಉಳಿಯಬೇಕು. ನಮ್ಮ ರೈತನ ಹೊಲಕ್ಕೆ ನೀರನ್ನು ಹರಿಸಬೇಕಾಗಿದೆ. ಅದರ ದೃಷ್ಟಿಯಲ್ಲಿ ಅನುತ್ಪಾದಕ ವೆಚ್ಚಗಳನ್ನು ಕಡಿಮೆಗೊಳಿಸಿ ಇವತ್ತು ತಾವು ಏನು 16% ಬಜೆಟ್‌ನಲ್ಲಿಟ್ಟಿದ್ದೀರಿ ಅದನ್ನು ತಾವು 25% ತೆಗೆದುಕೊಂಡು ಹೋಗಿ. ಮಾನ್ಯ ರಾಯರೆಡ್ಡಿಯವರು ಸದನದಲ್ಲಿ ಯಾವಾಗಲೂ ಭಾಷಣವನ್ನು ಮಾಡುತ್ತಾರೆ. ಮಾಜಿ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎಸ್.ಎಂ. ಕೃಷ್ಣರವರ ಕಾಲದಲ್ಲಿ ನಾವು ನೀರಾವರಿಗೆ ಅತೀ ಹೆಚ್ಚಿನ ಹಣವನ್ನು ವೆಚ್ಚ ಮಾಡಿದ್ದೇವೆ ಎಂದು ಭಾಷಣ ಮಾಡಿರುವುದನ್ನು ನಾನು ಕೇಳಿದ್ದೇನೆ. ಇವತ್ತು ತಾವು ನೀರಾವರಿ ಯೋಜನೆಗೆ ಹಣವನ್ನು 16%ಗೆ ಇಳಿಸಿಕೊಂಡಿದ್ದೀರಿ. ಇವತ್ತು 18% ಅಥವಾ 25% ಗೆ ತೆಗೆದುಕೊಂಡು ಹೋಗಿ ಯಾವ ಒಂದು ಕಾಲಹರಣವನ್ನು ಮಾಡಬಾರದು. ಇವತ್ತು ಉತ್ತರಕರ್ನಾಟಕದ ನೀರಾವರಿ ಯೋಜನೆಗಳು ಸಂಪೂರ್ಣಗೊಳ್ಳಬೇಕಾಗಿದೆ. ನೀವು 'ಬಿ' ಸ್ಕೀಮ್‌ನಲ್ಲಿ 173 ಟಿಎಂಸಿ ನೀರನ್ನು ಉಪಯೋಗ ಮಾಡಿಕೊಳ್ಳಬೇಕಾಗಿದೆ. 'ಎ' ಸ್ಕೀಮ್‌ನಲ್ಲಿರುವಂತಹ ಕಾರ್ಯಕ್ರಮಗಳನ್ನು ಸಂಪೂರ್ಣಗೊಳಿಸಬೇಕಾಗಿದೆ. ನೀವು ಈ ಹಣದಿಂದ ಮುಂದಿನ 5

ವರ್ಷಗಳಲ್ಲಿ ಸಂಪೂರ್ಣಗೊಳಿಸುವುದಕ್ಕೆ ಸಾಧ್ಯವೇ? ನೀವು 50,000 ಕೋಟಿ ಎಂದು ಹೇಳಿರಬಹುದು ಇದು ಸಾಧ್ಯವಾಗುತ್ತದೆಯೇ. ಕಳೆದ ಬಾರಿ 9,000 ಕೋಟಿ ರೂಪಾಯಿಗಳನ್ನಿಟ್ಟು ಬಹುಶಃ 5 ರಿಂದ 6,000 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿರಬಹುದು. ಅದರಲ್ಲಿಯೂ ಸಹ ತಾವು ಉಳಿಕೆ ಮಾಡಿಕೊಂಡಿದ್ದೀರಿ. ಇವತ್ತು ಈ ರೀತಿಯ ಒಂದು ತೀರ್ಮಾನಗಳಿಂದ ಯಾವ ಒಂದು ಸಂಕಷ್ಟಕ್ಕೆ ಒಳಗಾಗುತ್ತಿದ್ದೇವೆ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಈ capital expendtureನಲ್ಲಿ ಅವರ ಗಮನಸೆಳೆಯುವುದಕ್ಕೆ ಬಯಸುತ್ತಿದ್ದೇನೆ. ನಾನು ನಿಮ್ಮಿಂದ ಈ ರೀತಿಯ ಒಂದು ಬಜೆಟ್ ಅನ್ನು ನಿರೀಕ್ಷೆ ಮಾಡಿರಲಿಲ್ಲ. ನಾನು ಈ ಬಗ್ಗೆ ಹೇಳಬೇಕಾದರೆ ಮಾನ್ಯ ಮುಖ್ಯಮಂತ್ರಿಗಳು ಇರಲಿಲ್ಲ. ಇವರು committed expenditure ಗೆ ಹಿಂದೆ ಇದ್ದಂತಹ ಸರ್ಕಾರಗಳು 83% ಎಂದು ಹೇಳಿದ್ದೆ, committed expenditure ಮಾನ್ಯ ಮುಖ್ಯಮಂತ್ರಿಗಳೆ ತಾವು 94% ಗೆ ಹೋಗಿದ್ದೀರಿ. ನೀವು capital expenditure ಅನ್ನು 4% ನಿಂದ 3% ಗೆ ತೆಗೆದುಕೊಂಡು ಹೋಗಿದ್ದೀರಿ. ಇವತ್ತು ಮನಃ ನೀವು capital expenditureಅನ್ನು 4.5% –5% ಗೆ ತೆಗೆದುಕೊಂಡು ಹೋಗದೆ ಹೋದರೆ ನೀವೇ ಹೇಳಿದಂತಹ ರೀತಿಯಲ್ಲಿ ಯಾವ asset ಅನ್ನು ನಿರ್ಮಾಣ ಮಾಡುತ್ತೀರಿ. ನೀವು ಯಾವ ನೀರಾವರಿ ಯೋಜನೆಗಳನ್ನು ಸಂಪೂರ್ಣಗೊಳಿಸುತ್ತೀರಿ ಎಂದು ನಾನು ಕೇಳುವುದಕ್ಕೆ ಬಯಸುತ್ತೇನೆ. ನೀವು ಯಾವ GIM ಮಾಡಿದರೆ ಏನು ಬಂತು? ನಿಮಗೆ GIM ನಿಂದ ಎಷ್ಟು ಕೋಟಿ ಹಣ ರಾಜ್ಯಕ್ಕೆ ಹರಿದುಬಂದಿದೆ. ನೀವು October ತಿಂಗಳಲ್ಲಿ GIM ಕಾರ್ಯಕ್ರಮ ಕೊಡುವುದಕ್ಕೆ ಹೊರಟಿದ್ದೀರಿ. ನೀವು ಅವರಿಗೆ ಯಾವ infrastructure ಅನ್ನು ಕೊಟ್ಟಿದ್ದೀರೆಂದು ಹೇಳಿ GIM ನ ಕಾರ್ಯಕ್ರಮದಲ್ಲಿ ಇವತ್ತು ಬಂಡವಾಳ ಹೂಡುವವರನ್ನು ಆಕರ್ಷಣೆ ಮಾಡುವುದಕ್ಕೆ ಹೊರಟಿದ್ದೀರಿ. ಇಲ್ಲಿ ಸರಿಯಾಗಿ ಒಂದು ವಿದ್ಯುಚ್ಛಕ್ತಿ ಇಲ್ಲ,

ಶ್ರೀ ಡಿ.ಕೆ. ಶಿವಕುಮಾರ್ (ಮಾನ್ಯ ಇಂಧನ ಸಚಿವರು):- ಅವರನ್ನು ಬರಬೇಡಿ ಎಂದು ಹೇಳಬೇಕೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ನಾನು ಅವರನ್ನು ಬರಬೇಡಿ ಎಂದು ಹೇಳಲಿಲ್ಲ.

ಶ್ರೀ ಡಿ.ಕೆ. ಶಿವಕುಮಾರ್:- ಸದ್ಯಕ್ಕೆ ಯಾರು ಬರಬೇಡಿ ಇಲ್ಲಿ ಏನು ಇಲ್ಲವೆಂದು ಹೇಳುತ್ತೀರಾ? Any state development ಆಗಬೇಕಾದರೆ ಒಂದು ಸರ್ಕಾರ confidence ಅನ್ನು create ಮಾಡಬೇಕಲ್ಲವೇ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಅದನ್ನು ಯಾವ ತರಹ ಮಾಡಬೇಕು.

ಶ್ರೀ ಡಿ.ಕೆ. ಶಿವಕುಮಾರ್:- ಯಾವ ತರಹ ಮಾಡಬೇಕೆಂದು ತಾವು ಹೇಳಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಸರ್ಕಾರದ ಹಣವನ್ನು ಪೋಲು ಮಾಡಿ ಬಣ್ಣ ಬಣ್ಣದ ಜಾಹೀರಾತನ್ನು ಕೊಟ್ಟರೆ ಆಗುವುದಿಲ್ಲ. ಇದರಿಂದ ರಾಜ್ಯಕ್ಕೆ ಬಂಡವಾಳವನ್ನು ತರುವುದಕ್ಕಾಗುವುದಿಲ್ಲ.

ಶ್ರೀ ವೈ.ಎನ್. ರುದ್ರೇಶ್‌ಗೌಡ:- ಬಜೆಟ್‌ನಲ್ಲಿ ಹೇಳಿದಂತೆ ನಾವು ನಡೆದುಕೊಳ್ಳುತ್ತೇವೆ. ಯಾವ ಕಾರಣಕ್ಕೂ ಸಹ ಅದು ತಪ್ಪುವುದಿಲ್ಲ. ಬಜೆಟ್‌ನಲ್ಲಿ ಹೇಳಿದ ಹಾಗೆ ನಾವು 100% ನಡೆದುಕೊಳ್ಳುತ್ತೇವೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ನೀವು ನಡೆದುಕೊಳ್ಳುತ್ತೀರಾ? ನೀವು ಎತ್ತಿನಹೊಳೆ ಬೇಲೂರಿಗೆ ನೀರು ಕೊಡಿ ಎಂದು ಕೇಳುತ್ತೀರಿ. ನಾನು ಏತಕ್ಕಾಗಿ ಹೇಳುತ್ತಿದ್ದೇನೆಂದರೆ, ಮಾನ್ಯ ಮುಖ್ಯಮಂತ್ರಿಗಳು ಕಳೆದ ಬಜೆಟ್‌ನಲ್ಲಿ ಪ್ರಸ್ತಾಪ ಮಾಡಿದ್ದರು. ಹಿಂದಿನ ಸರ್ಕಾರದ ವೈಫಲ್ಯಗಳನ್ನು ತಂದಿದ್ದಾರೆ. ಅದೇ ದಾರಿಯಲ್ಲಿ ಇವರು ಮತ್ತೆ ಏತಕ್ಕೆ ಹೋಗುತ್ತಿದ್ದಾರೆ ಈ ಬಗ್ಗೆ ನಾನು ಸರ್ಕಾರಕ್ಕೆ ಕೇಳುತ್ತಿದ್ದೇನೆ. ನಾನು ಸರ್ಕಾರವು ತಿದ್ದಿಕೊಳ್ಳುವುದಕ್ಕೆ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಹಲವಾರು ಬಾರಿ

ಹೇಳಿರುವುದನ್ನು ನಾನು ಗಮನಿಸಿದ್ದೇನೆ. Non-targeted subsidies ಗೆ ಕಡಿತ ಮಾಡಬೇಕೆಂಬುದನ್ನು ಹಲವಾರು ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸದನದ ಒಳಗೆ ಮತ್ತು ಹೊರಗಡೆ ಹೇಳಿದ್ದಾರೆ. ಆದರೆ ಇವತ್ತು ಏನು ಮಾಡುತ್ತಿದ್ದಾರೆ? Subsidy burden is expected to go up from Rs. 13,175/- crores in 2012-13 to Rs. 18,500/- crores in 2014-15. 18,500 ಕೋಟಿ ರೂಪಾಯಿಗಳು ಇವತ್ತು ಮುಖ್ಯಮಂತ್ರಿಗಳು ಈ ಸರ್ಕಾರ ಯಾವ ಒಂದು ಲೋಕಸಭೆ ಚುನಾವಣೆ ಬರುತ್ತದೆನ್ನುವಂತಹ ದೃಷ್ಟಿಯಿಂದ ಮಾಡಿದ್ದೀರೋ ಇನ್ನಾವ ದೃಷ್ಟಿಯಿಂದ ಜನರಿಗೆ ಹಸಿದ ಹೊಟ್ಟೆಗೆ ಅನ್ನ ಕೊಡುವುದಕ್ಕೆ ಮಾಡಿಕೊಂಡಿದ್ದೀರೊ, ಇವತ್ತು 18,500 ಕೋಟಿ ರೂಪಾಯಿಗಳ ಸಬ್ಸಿಡಿಯನ್ನು ಕೊಡುವಂತಹ commitment ಅನ್ನು ನೀವುಗಳೇ ಮಾಡಿಕೊಂಡಿದ್ದೀರಿ. ಇವತ್ತು ತಾವು ಹಲವಾರು ಸಭೆಗಳಲ್ಲಿ ಯಾವ ಒಂದು Non-target subsidy ಅನ್ನು cut-off ಮಾಡುವ ಬಗ್ಗೆ ವಿರೋಧವನ್ನು ವ್ಯಕ್ತಪಡಿಸುತ್ತೀರಿ. ಇವತ್ತು ತಾವು ರೀತಿಯಾಗಿ fiscal discipline ಮಾಡುವುದಕ್ಕೆ ಹೊರಟಿದ್ದೀರಿ. ನೀವು ಆರ್ಥಿಕ ನಿರ್ವಹಣೆಯನ್ನು ಈ ರಾಜ್ಯದಲ್ಲಿ ಪ್ರಾಮಾಣಿಕವಾಗಿ ತಾವೇ ಹೇಳಿದಂತಹ ರೀತಿಯಲ್ಲಿ ಇವತ್ತು ಹಿಂದಿನ ಸರ್ಕಾರಗಳು ದಾರಿತಪ್ಪಿರುವಂತಹ ಸರಿಪಡಿಸುವಂತಹ ನಿಟ್ಟಿನಲ್ಲಿ ಯಾವ discipline ಅನ್ನು ಈ ರೀತಿಯ subsidy ಯ ರೂಪದಲ್ಲಿ ತರುವುದಕ್ಕೆ ಹೊರಟ್ಟಿದ್ದೀರಿ ಅದನ್ನು ನಾನು ಕೇಳುವುದಕ್ಕೆ ಬಯಸುತ್ತಿದ್ದೇನೆ. ನಾನು ಪುನಃ ಸರ್ಕಾರಕ್ಕೆ ಹೇಳುವುದಕ್ಕೆ ಬಯಸುತ್ತೇನೆ. ಕಳೆದ ವರ್ಷ 18% ನಿಂದ ಮತ್ತು ಅದರ ಹಿಂದಿನ ವರ್ಷ ಹಿಂದಿನ ಸರ್ಕಾರಗಳಲ್ಲಿ ನೀರಾವರಿ ಯೋಜನೆಗಳಿಗೆ 18% ಏನಿಟ್ಟಿದ್ದೀರಿ ಇವತ್ತು 16% ಗೆ ಇಳಿಸುವುದರ ಮುಖಾಂತರ ಯಾವ ಒಂದು ತೂಗುಗತ್ತಿ ನಮ್ಮ ಮೇಲೆ ಇದೆ ಇವತ್ತು 16%ಗೆ ಇಳಿಕೆ ಮಾಡುವುದರ ಮುಖಾಂತರ ಇವತ್ತು ಯೋಜನೆಗಳನ್ನು ಸಂಪೂರ್ಣಗೊಳಿಸುವುದಕ್ಕೆ ಸಾಧ್ಯ. ಇವತ್ತು ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಗಮನಹರಿಸದೆ ಇದ್ದರೆ ಯಾವ ಒಂದು ಕರುಣಾಮಯಿ ಎಂದು ಈ ರಾಜ್ಯದ ಜನರಿಗೆ certificate ಅನ್ನು ಕೊಟ್ಟಿದ್ದೀರಿ. ತಾವು ಹೃದಯಶೀಲರು ಎಂದು certificate ಅನ್ನು ಕೊಟ್ಟಿದ್ದೀರಿ.

ಅದೇ ಕರುಣಾಮಯಿ ಜನಗಳು ನಿಮ್ಮ ಈ ರೀತಿಯ ಒಂದು ಬಜೆಟ್ ಅನ್ನು ಮುಂದಿನ ದಿನಗಳಲ್ಲಿ ವಿರೋಧ ವ್ಯಕ್ತಪಡಿಸುವಂತಹ ದಿನಗಳು ಪ್ರಾರಂಭವಾಗುವುದು ದೂರವಿಲ್ಲ ಈ ಮಾತನ್ನು ನಾನು ಅತ್ಯಂತ ನೋವಿನಿಂದ ಹೇಳಿ ಸರ್ಕಾರದ ಗಮನ ಸೆಳೆಯುವುದಕ್ಕೆ ಬಯಸುತ್ತೇನೆ. ಯಾವ ಒಂದು power sector ನಲ್ಲಿ ನಾವು ಉತ್ಪಾದನೆಯನ್ನು ಮಾಡಬೇಕಾಗಿದೆ. ಇವತ್ತು surplus current ಅನ್ನು ಉತ್ಪಾದನೆ ಮಾಡುವಂತಹ ಪರಿಸ್ಥಿತಿಯಲ್ಲಿ ಯಾವ ರೈತನಿಗೆ ವಿಶೇಷವಾಗಿ ಯಾವ ಒಂದು industrial sectorಗೆ ವಿದ್ಯುಚ್ಛಕ್ತಿಯ ಅವಶ್ಯಕತೆ ಇದೆ. GIM ಕಾರ್ಯಕ್ರಮ ಮಾಡಿದರೆ ಸಾಲದು, ಇವತ್ತು ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡಲಿಕ್ಕೆ ಯಾವರೀತಿಯಾಗಿ ಕ್ರಮ ತೆಗೆದುಕೊಳ್ಳುತ್ತಿದ್ದೀರಿ. ನಮ್ಮ ಮಾನ್ಯ ಮುಖ್ಯಮಂತ್ರಿಗಳು ಭಾಷಣ ಮಾಡಿದ್ದನ್ನು ನಾನು ಕೇಳಿದೆ. On 8th January, 2014 while inaugurating an exhibition Hon'ble Chief Minister of Karnataka has said that energy deficit Karnataka, which has initiated projects to produce 18,000 MW has targeted to be a power surplus State by 2017. He has also said that the State had initiated several reforms in the transmission and distribution sector that would help reduce inefficiencies in the system. ಈ ರೀತಿ ಹೇಳಿದ್ದಾರೆ. ಅದಕ್ಕೆ ನಮ್ಮ KERC Chairman ಹೇಳಿದ್ದಾರೆ ಅದನ್ನು ನಮ್ಮ ಮುಖ್ಯಮಂತ್ರಿಗಳು ನೋಡಿದರೋ ಇಲ್ಲವೋ ಗೊತ್ತಿಲ್ಲ. 2017 ಗೆ ನೀವು power surplus ಗೆ ಹೋಗುತ್ತೇವೆಂದು ಭಾಷಣವನ್ನೇನು ಮಾಡಿದ್ದೀರಿ. ಅದಕ್ಕೆ KERC Chairman ಹೇಳುತ್ತಾರೆ, "Power surplus in 2017, a Big joke," KERC Chief. ಸಾಮಾನ್ಯ ಪ್ರಜೆಯೊಬ್ಬರು ಇದನ್ನು ಹೇಳುತ್ತಿಲ್ಲ, KERC Chairman ನಿಮ್ಮ surplus ಬಗ್ಗೆ "big joke" ಎಂದು ಹೇಳಿದ್ದಾರೆ. ಇವತ್ತು ನಮ್ಮ ರಾಜ್ಯದಲ್ಲಿ ಉದಾಹರಣೆಗೆ ರಾಯಚೂರು ಥರ್ಮಲ್ ಪ್ಲಾಂಟ್ ಇರಬಹುದು.. ಪೇಪರ್‌ನವರು ಅಲ್ಲ, ಅವರು ಆ ರೀತಿ ಹೇಳಿದ್ದಾರೆ.

ಶ್ರೀ ಡಿ.ಕೆ. ಶಿವಕುಮಾರ್:- ಅವರು ಏನು ಹೇಳಿದ್ದಾರೆ ಅದನ್ನು ಪೂರ್ಣವಾಗಿ ಹೇಳಿಬಿಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- "Karnataka Electricity Regulatory Commission Chairman Sri M.R. Srinivasa Murthy on Friday cautioned the State Government against becoming complacent in the field of energy generation by terming recent reports that said the State would have a power surplus by 2017 as a joke." ನಿಮಗೆ ಹಣ ಜಾಸ್ತಿ ಕೊಡಿಸಲಿಕ್ಕೆ ನಾವು ನಿಮ್ಮ ಸಹಾಯಕ್ಕೆ ಬರುತ್ತಿದ್ದೇವೆ, ನಿಮಗೆ power generation ಮಾಡಲಿಕ್ಕೆ ನಿಮ್ಮ ಸಹಾಯಕ್ಕೆ ಬರುತ್ತಿದ್ದೇನೆ. ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಇವತ್ತು ನೀವು ಅರ್ಧರಾತ್ರಿಯಲ್ಲಿ ಕರೆಂಟ್ ಕೊಡುತ್ತೀರಿ, ರೈತ ನಿದ್ದೆಗೆಟ್ಟು ಕಾಯುತ್ತಾ ಕುಳಿತುಕೊಳ್ಳಬೇಕು. ಒಂದು ಕಡೆ ಬರಗಾಲ, ಹಲವಾರು ಕಡೆ ಕುಡಿಯಲಿಕ್ಕೆ ನೀರು ಕೊಡಲು ಕರೆಂಟ್ ಕೊಡುತ್ತಿಲ್ಲ. ಈ ಪರಿಸ್ಥಿತಿ ಇದೆ, ನಮ್ಮ ಮುಖ್ಯಮಂತ್ರಿಗಳು 44 ನೇ ಸಂಸ್ಥಾಪನಾ ದಿನಾಚರಣೆಯನ್ನು ಮಾಡಿದರು. ಅಲ್ಲಿ ಅವರು ಒಂದು ಭಾಷಣವನ್ನು ಮಾಡಿದರು. ಇದನ್ನೆಲ್ಲಾ ನೋಡಿದಾಗ ನಮ್ಮ ಮುಖ್ಯಮಂತ್ರಿಗಳಿಗೆ ಪವರ್ ವಿಷಯದಲ್ಲಿ ಎಲ್ಲಾ ರೀತಿಯ ಮಾಹಿತಿಗಳನ್ನು ಇಟ್ಟುಕೊಂಡಿರುತ್ತಾರೆಂಬ ನಮ್ಮ ಅಭಿಪ್ರಾಯವಿತ್ತು. ಈ ಬಜೆಟ್‌ನಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆಗೆ ಹೆಚ್ಚಿನ ಹಣವನ್ನು ಮೀಸಲಿಡುತ್ತೀರಿ ಎಂದು ನಾನು ಅಂದುಕೊಂಡಿದ್ದೆನು. ನೀವು ಅಲ್ಲಿ ಹೇಳುತ್ತೀರಿ, "while speaking at the 44th foundation day celebrations of Karnataka Power Corporation Limited in Bangalore he pointed out that the actual generation of KPCL is much below its installed capacity. In response to the Chief Minister's observations, KPCL official said that actual generation was only about 3,600 MW though its installed capacity had touched 6,499 MW." ನಿಮಗೆ 6,499 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನೆ ಮಾಡತಕ್ಕಂಥ capacity ಇದ್ದರೂ ನಿಮ್ಮ

achievement 3600 ಮೆಗಾವ್ಯಾಟ್ ಪ್ರಮಾಣಕ್ಕೆ ಏಕೆ ಕುಸಿತವಾಗಿದೆ. ನಾವು ಪ್ರತಿನಿತ್ಯ ಮಾಧ್ಯಮಗಳ ಗಮನಕ್ಕೆ ತರುವಂಥದ್ದು. ರಾಜ್ಯದಲ್ಲಿ ಥರ್ಮಲ್ ಪ್ಲಾಂಟ್‌ನ 8 ಘಟಕಗಳಿವೆ. ಪ್ರತಿನಿತ್ಯ ಎರಡು ಮೂರು ಘಟಕಗಳಿಗೆ ಇವತ್ತು ಉತ್ಪಾದನೆಯನ್ನು ಮಾಡದೆ ಸ್ಥಗಿತಗೊಳಿಸತಕ್ಕಂಥದ್ದು ಏನಿದೆ? ಇವತ್ತು ಇರುವ ಯುನಿಟ್‌ಗಳು ಹಳೆಯದಾಗಿವೆ, ಹೊಸ ಯುನಿಟ್‌ಗಳನ್ನು ತರದೆಹೋದರೆ ಈ ಪರಿಸ್ಥಿತಿ ಮುಂದುವರೆದುಕೊಂಡು ಹೋಗುತ್ತದೆ. ಹಾಗಾಗಿ ಅಧ್ಯಕ್ಷರೆ, ಇವತ್ತು ನಿಮ್ಮ ಗಮನಕ್ಕೆ ಇವೆಲ್ಲಾ ಬಂದಿದೆ, ಈಗ KPCL ನವರು ಅವರ ಹಣವನ್ನು investment ಮಾಡಲಿಕ್ಕೆ ಅವರ debt equity ratio ಅನ್ನು ನೀವು ಸರಿಪಡಿಸದೆ ಹೋದರೆ ಅವರು ಸಾಲವನ್ನು ಎಲ್ಲಿಂದ ತರುತ್ತಾರೆ? ಇಂಥ ಒಂದು ಪರಿಸ್ಥಿತಿಯಲ್ಲಿ ಇವತ್ತು ನಿಮ್ಮ ಬಜೆಟ್‌ನಲ್ಲಿ ಏನು ಮಾಡಿದ್ದೀರಿ? ಇಂಧನ ಇಲಾಖೆಗೆ ಎಷ್ಟು ಹಣವನ್ನು ಇಟ್ಟು ವೆಚ್ಚ ಮಾಡುವ ಬಗ್ಗೆ ತೀರ್ಮಾನಿಸಿದ್ದೀರಿ? ಇವತ್ತು ಹತ್ತು ಸಾವಿರ ಕೋಟಿರೂಪಾಯಿಗಳನ್ನು ಇಟ್ಟಿದ್ದರು, ಅದರಲ್ಲಿ ನೀವು 6,500 ಸಾವಿರ ಕೋಟಿ ರೂಪಾಯಿಗಳನ್ನು ಸಬ್ಸಿಡಿಗೆ ಕೊಟ್ಟಿದ್ದಾರೆ. ಇಲ್ಲಿ 2013–14 ರಲ್ಲಿ Energy sector ಗೆ 11% ಇತ್ತು, 2012–13 ರಲ್ಲಿ 11% ಇತ್ತು, 2011–12 ರಲ್ಲಿ 12% ಇತ್ತು.

ಶ್ರೀ ಕೆ.ಆರ್. ರಮೇಶ್‌ಕುಮಾರ್ (ಶ್ರೀನಿವಾಸಪುರ):- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಕುಮಾರಸ್ವಾಮಿಯವರು information collect ಮಾಡಲಿಕ್ಕೆ ಬಹಳ ಪ್ರಯಾಸಪಟ್ಟಿರಬೇಕೆಂದು ಕಾಣುತ್ತದೆ. ಬಹಳ ಒಳ್ಳೆಯ suggestions ಕೊಡುತ್ತಿದ್ದಾರೆ. Really they are good. ನಮಗೇನಾಗಿದೆ ಈ ಸದನದಲ್ಲಿ ನಾವು ಕೆಲವು ಬಾರಿ ಆ ಕಡೆ ಬಂದಿದ್ದೇವೆ, ಕೆಲವು ಬಾರಿ ಈ ಕಡೆ ಬಂದಿದ್ದೇವೆ. ಇದು repetition ಆಗುತ್ತಿದೆ. ಆ ಕಡೆ ಕುಳಿತವರು ಅವರ ಸರದಿ ಬಂದಾಗ ಈ ರೀತಿ ಹೇಳುವುದು, ಈ ಕಡೆ ಕುಳಿತವರು ಇವರದು ಇನ್ನೊಂದು ರಾಗ ಇರುತ್ತದೆ. ಈಗ ಸಬ್ಸಿಡಿ ಬಗ್ಗೆ ತಾವು ಹೇಳಿದಿರಿ, ಅನುತ್ಪಾದಕ ವೆಚ್ಚ ಕಡಿಮೆಯಾಗಬೇಕು. ರಾಜ್ಯದ ಅಭಿವೃದ್ಧಿ ಕಡೆಗೆ ನಮ್ಮ ಗಮನ ಹರಿಸಬೇಕು. Capital expenditure ಕಡಿಮೆ ಆಗಬೇಕು. Committed expenditure ಹೆಚ್ಚಾಗುತ್ತಿದೆ, wonderful, ನಾವು ಈ level ಗೆ debate ಅನ್ನು

ತೆಗೆದುಕೊಂಡು ಹೋಗಬೇಕು. ಮಾನ್ಯ ಮುಖ್ಯಮಂತ್ರಿಗಳು ಅವರನ್ನು ಅವರು ಸಮರ್ಥನೆ ಮಾಡಿಕೊಳ್ಳಲಿ, ನಾನೇನು ಆ ಸಾಹಸಕ್ಕೆ ಹೋಗುವುದಿಲ್ಲ. ಆದರೆ ನಾನು ತಮಗೆ ಜಗದೀಶ್ ಶೆಟ್ಟರ್‌ರವರಿಗೆ ಎಲ್ಲರಿಗೂ ಏನು ಅಪೀಲ್ ಮಾಡಿಕೊಳ್ಳುತ್ತೇನೆಂದರೆ ನಮ್ಮ political one up man ship ನಲ್ಲಿ ಚುನಾವಣೆಗಳಲ್ಲಿ ನಾವು ತೇರ್ಗಡೆಯಾಗಬೇಕೆನ್ನುವ ಕಾರಣಕ್ಕೆ ಅನೇಕ programmes ಅನ್ನು ನಾವು announce ಮಾಡುತ್ತೇವೆ. ಅವುಗಳನ್ನು generally populist programmes ಎಂದು ಹೇಳುತ್ತೇವೆ. They are not popular programmes, they are populist programmmes. ಅವುಗಳಿಂದ ನಾವು ಹೊಡತೆ ತಿಂದುಬಿಡುತ್ತೇವೆ. At least ನಮ್ಮ State ನಲ್ಲಿ all the political parties and important leaders ಮತ್ತೆ ಬೇರೆ ಬೇರೆ ಕ್ಷೇತ್ರಗಳಲ್ಲಿರುವಂಥ ಪರಿಣಿತರು ಬಜೆಟ್ prepare ಆಗುವುದಕ್ಕೆ ಮೊದಲು ಒಂದೆರಡು ತಿಂಗಳು, ಮೂರು ತಿಂಗಳು ಒಂದು ಕಡೆ ಸೇರಿ State policy ಎಂದು ಹೇಳಿ core sectors ಬಗ್ಗೆ power ಆಗಬಹುದು, roads ಆಗಬಹುದು, Primary Education, Primary Health ಆಗಬಹುದು, Core sectors ಯಾವುದಿವೆ ಇವುಗಳ ಬಗ್ಗೆ ನಾವೆಲ್ಲರೂ ಸೇರಿ ಒಂದು ತೀರ್ಮಾನಕ್ಕೆ ಬರಬೇಕು. ಯಾರೇ ಅಧಿಕಾರಕ್ಕೆ ಬಂದರೂ ಕೂಡ ಆ ಪಾಲಿಸಿ it should remain in force as the policy of the State. ಹೊರಗಡೆ ಜಗತ್ತಿಗೆ, ಕರ್ನಾಟಕದ ಹೊರಗೆ, ಭಾರತ ದೇಶದ ಹೊರಗೆ, ಇಲ್ಲಿಗೆ ಬರುವವರಿಗೆ ಕರ್ನಾಟಕದ ಪಾಲಿಸಿ ಇದು. This is a permanent policy ಎಂದು message ಹೋಗಬೇಕು. Investors ಬರುವುದಕ್ಕೆ, ಮತ್ತೊಂದಕ್ಕೆ ಯಾವುದೇ ವಿಚಾರಕ್ಕೆ ಇರಬಹುದು. ಈಗೇನಾಗುತ್ತಿದೆ ಎಂದರೆ ಒಬ್ಬರು ಹೋದ ಮೇಲೆ ಆ ಪಾಲಿಸಿ consistent ಆಗಿ ಇರುತ್ತದೆ ಎನ್ನುವ ಧೈರ್ಯವೇ ಬೇರೆಯವರಿಗೆ ಇರುವುದಿಲ್ಲ. ನಾವೆಲ್ಲೋ ಈ ಅಧಿಕಾರಕ್ಕೆ ಬರುವಂಥ ಅವಾಂತರದಲ್ಲಿ ಒಬ್ಬರ ಮೇಲೆ ಒಬ್ಬರು ಸ್ಪರ್ಧೆ ಮಾಡುವುದರಲ್ಲಿ ಇರುತ್ತೇವೆ. ಒಬ್ಬರು ಎಂದಲ್ಲ, ನಾವೆಲ್ಲರೂ ಕೂಡ ಪರಸ್ಪರವಾಗಿ ಆ ರೀತಿ ನಡೆದುಕೊಳ್ಳುತ್ತೇವೆ. ಆದ್ದರಿಂದ ನಾವೆಲ್ಲೋ ಒಂದು ಕಡೆ at least ಈಗ ನಾವು rock bottomಗೆ reach ಆಗಿಬಿಟ್ಟಿದ್ದೇವೆ. 36 ಜನ

Chief Engineers, 100 ಜನ Superintendent Engineers, 1000 ಜನ Assistant Executive Engineers ಇಟ್ಟುಕೊಳ್ಳುತ್ತೇವೆ. ಇವರೆಲ್ಲರೂ ಸೇರಿ ನೋಡುವುದು ಎಷ್ಟು ಎಂದರೆ ಕೇವಲ 100 ಕಿ.ಮೀ. ಅಷ್ಟೆ. ಸಂಗೀತಗಾರ ರಾಗ ಪ್ರಾರಂಭ ಮಾಡುವಾಗ ಬೆಟ್ಟದಷ್ಟು ರಾಗ ತೆಗೆದುಬಿಡುತ್ತಾನೆ, ಕೊನೆಗೆ ಅವನು ಹಾಡಿದ್ದು ನೋಡಿದರೆ ಇಲಿ ಬಾಲದಷ್ಟು ಆಗುತ್ತದೆ. ನಾವು ಆ ರೀತಿ ಆಗುತ್ತಿದ್ದೇವೆ. ಇಡೀ ರಾಜ್ಯದಲ್ಲಿ ಎಲ್ಲಾ ವೃಂದಗಳಲ್ಲಿರುವ ಸರ್ಕಾರಿ ನೌಕರರ ಸಂಖ್ಯೆ 6,96,000 ಇದೆ. ಅದರಲ್ಲಿ highest Education, Health ನಲ್ಲಿದ್ದಾರೆ. What is the amount we are spending on them? Is this required? ನಾನು ಬಹಳ ಹೊತ್ತಿನಿಂದ ಸುಮ್ಮನೆ ಕುಳಿತುಕೊಂಡು ಕೇಳುತ್ತಿದ್ದೇನೆ, ನಿಮ್ಮನ್ನು disturb ಮಾಡಬೇಕೆಂದಲ್ಲ, ಏಕೆಂದರೆ ನಿಮ್ಮ ಆಲೋಚನೆ ಸರಪಳಿ ಮುರಿಯಬಾರದು, ನಿಜವಾಗಲೂ ಕೂಡ ನಮಗೆ ಹೆಮ್ಮೆಯಾಗುತ್ತಿದೆ. ಬಹಳ ಜವಾಬ್ದಾರಿಯುತವಾಗಿ ತಾವು ಮಾತನಾಡುತ್ತಿದ್ದೀರಿ. ಇದನ್ನೇ ಆ ಸಾಲಿನಲ್ಲಿ ಕುಳಿತವರು ಮಾಡಬೇಕಾಗಿರುವುದು, ಇದರ ಬಗ್ಗೆ ಜಗದೀಶ್ ಶೆಟ್ಟರ್ ನೀವು ಎಲ್ಲಾ ಮಾತನಾಡಿ, ಈ ಬಾರಿ we will come to one decision that may help the State ಎಂಬುದು ನನ್ನ ಅಭಿಪ್ರಾಯವಾಗಿದೆ. Thank you for yielding.

ಶ್ರೀ ಅಶೋಕ್ ಖೇಣಿ (ಬೀದರ್ ದಕ್ಷಿಣ):- ಮಾನ್ಯ ರಮೇಶ್ ಕುಮಾರ್‌ರವರು ಹೇಳಿದ್ದು correct ಇದೆ. 19th February, 1995 ರಂದು ನಮ್ಮ ಬೆಂಗಳೂರು – ಮೈಸೂರು projectಗೆ signature ಮಾಡಿ present ಮಾಡಲಾಯಿತು.19 years have passed, 10 Chief Ministers ಬಂದು ಹೋದರು. Every time when there is change in the Ministry ಅವರಿಗೆ ಎಷ್ಟು ಕೊಟ್ಟಿರಿ ಎಂದು ಕೇಳುತ್ತಾರೆ. How much have you given ಎಂದು ಕೇಳುತ್ತಾರೆ. I can't understand this philosophy. When I am putting my own money at risk why would I be giving money to somebody? ಆದರೆ Philosophy ಅವರು ದುಡ್ಡು ಮಾಡಿದರು ಎಂದು ಆಗುತ್ತದೆ. This is continuously going on. ಅದರಿಂದ ಏನಾಗುತ್ತಿದೆ ಎಂದರೆ, lot of

investment which would have come to Karnataka, I Know for a matter of fact, is going to Gujarat, Tamil Nadu and Maharastra. State is a victim of this Kind of thinking. ಇದರಿಂದ ಏನಾಗುತ್ತದೆ ಎಂದರೆ, especially when you are dealing with the land...

ಶ್ರೀ ಡಿ.ಕೆ. ಶಿವಕುಮಾರ್:- ತಾವು ಬಜೆಟ್ ಮೇಲೆ ಚರ್ಚೆ ಮಾಡುವಾಗ ಮಾತನಾಡಿ.

ಶ್ರೀ ಅಶೋಕ್ ಖೇಣಿ:- ಆಯಿತು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಮಾನ್ಯ ಉಪಾಧ್ಯಕ್ಷರೆ, ಇಂದು ಈ ವಿಷಯಗಳನ್ನು ಪ್ರಸ್ತಾಪ ಮಾಡುತ್ತಿದ್ದೇನೆ, ಮಾನ್ಯ ಮುಖ್ಯಮಂತ್ರಿಗಳಿಗೆ ಎಲ್ಲಾ ವಿಷಯ ಗೊತ್ತಿದೆ. ಕಳೆದ ಸರ್ಕಾರದಲ್ಲಿ ಜನಪ್ರಿಯ ಕಾರ್ಯಕ್ರಮಗಳು, ಯೋಜನೆಗಳೆಂದು ಹೇಳಿ ಅನುತ್ಪಾದನ ವೆಚ್ಚಕ್ಕೆ ಹೆಚ್ಚಿನ ಹಣ ಹೋಗುವಂತಹ ನಿಟ್ಟಿನಲ್ಲಿ ಆಗಿರುವ ಘಟನೆಗಳ ಬಗ್ಗೆ ನಿಮ್ಮ ಮೊದಲನೇ ಬಜೆಟ್‌ನಲ್ಲಿ ಹೇಳಿದ್ದೀರಿ. ನಿಮ್ಮ ಗಮನದಲ್ಲಿ ಎಲ್ಲಾ ಇದೆ. ನಿಮಗೆ ಅನುಭವವಿದೆ. ಒಂಭತ್ತು ಅವಧಿಗೆ ಹಣಕಾಸು ಇಲಾಖೆಯನ್ನು ನಿರ್ವಹಣೆ ಮಾಡುತ್ತಿದ್ದೀರಿ. ನಾನು ನಿಮ್ಮಿಂದ ಈ ರೀತಿ ಬಜೆಟ್ ಅನ್ನು ನಿರೀಕ್ಷೆ ಮಾಡಿರಲಿಲ್ಲ. ಈ ಬಜೆಟ್ ಅನ್ನು ಸದನದಲ್ಲಿ ಓದಬೇಕಾದರೆ ನಿಮ್ಮ ಆತ್ಮಸಾಕ್ಷಿಗೆ ಪೂರಕವಾದ ರೀತಿಯಲ್ಲಿ ಬಜೆಟ್ ಅನ್ನು ಮಾಡಿಕೊಂಡಿದ್ದೀರಿ ಇದಕ್ಕೆ ನಿಮ್ಮ ಆತ್ಮ ಸಾಕ್ಷಿ ಒಪ್ಪಿದೆಯೇ ಇದನ್ನು ಮಾನ್ಯ ಮುಖ್ಯಮಂತ್ರಿಗಳು ಸದನದ ಗಮನಕ್ಕೆ ತರಬೇಕೆಂದು ನಾನು ಆಗಲೇ ಹೇಳಿದೆ, ಆಗ ಸದನದಲ್ಲಿ ನೀವು ಇರಲಿಲ್ಲ. ಇವತ್ತು ಏಳು ಲಕ್ಷ ಅಧಿಕಾರಿಗಳಿದ್ದಾರೆ. ತುಂಬಾ urgent ಇದೆ ದೇಶ ಮುಳುಗಿ ಹೋಗಿಬಿಡುತ್ತದೆಂದು 43 ಜನ Superintendent Engineers ಗೆ ಶ್ರೀ ರೇವಣ್ಣ ನವರು 12 ಗಂಟೆ ರಾತ್ರಿಯಲ್ಲಿ ಒಂದು ರುಜು ಹಾಕಿಸಿದರು. ನಾನು ಯಾರ ಮುಖವನ್ನು ನೋಡಲಿಲ್ಲ. ಯಾವ ಜಾತಿಯನ್ನು ನೋಡಲಿಲ್ಲ. 43 ಜನರಿಗೆ ಸಹಿ ಹಾಕಿ ಕಳುಹಿಸಿದೆ ಇವತ್ತು ಇವರೆಲ್ಲರೂ ಏನು ಮಾಡುತ್ತಿದ್ದಾರೆ. ಇವರುಗಳನ್ನು ಕೃಷ್ಣಾ ಮೇಲ್ದಂಡೆ ಯೋಜನಾ ಕಾರ್ಯಕ್ರಮಗಳಿಗೆ ಕಳುಹಿಸಿ.

Air condition room ಗಳಲ್ಲಿ ಕುಳಿತು ಕೆಲಸ ಮಾಡುವುದಲ್ಲ. ಇವರನ್ನು field work ಗೆ ಕಳುಹಿಸಿ. ರಸ್ತೆಗಳಿಗೆ ಗುಂಡಿ ಮುಚ್ಚುವ ಯೋಜನೆಗಳನ್ನು ಎರಡು ವರ್ಷ ಮುಂದಕ್ಕೆ ಹಾಕಿ. Power and Irrigation sector ಗಳನ್ನು top priority ಮೇಲೆ ತೆಗೆದುಕೊಳ್ಳಿ. ಬಹುಶಃ ಇದಕ್ಕೆ ಸದನದಲ್ಲಿರುವ ಎಲ್ಲಾ ಸದಸ್ಯರು ಒಪ್ಪಿಗೆ ಕೊಡಬಹುದು. ರೈತರಿಗೆ small scale industries ಗೆ ...

ಶ್ರೀ ಗೋವಿಂದ ಎಂ. ಕಾರಜೋಳ:- ಮಾನ್ಯ ಉಪಾಧ್ಯಕ್ಷರೆ, ಮಹಾರಾಷ್ಟ್ರದಲ್ಲಿ power and irrigation project ತೆಗೆದುಕೊಳ್ಳಬೇಕಾದರೆ ಐದು ವರ್ಷಗಳ ಕಾಲ ಸರ್ಕಾರಿ ಕಟ್ಟಡಗಳಿಗೆ ಸುಣ್ಣ ಬಣ್ಣ ಬಳಿಯುವುದಿಲ್ಲ. ರಸ್ತೆಗಳಿಗೆ ಗುಂಡಿ ಮುಚ್ಚುವುದಿಲ್ಲ. ಎಲ್ಲಾ ಹಣವನ್ನು ಅಲ್ಲಿಗೆ divert ಮಾಡಿ power and irrigation ಆದ್ಯತೆಯನ್ನು ಕೊಟ್ಟಿದ್ದರು. ಆ ರೀತಿ ನಮ್ಮ ಸರ್ಕಾರವೂ ಕೂಡ ಮಾಡಬೇಕು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಹಾಗೆ ಪಕ್ಕದ ರಾಜ್ಯದಲ್ಲಿ ಯಾವ ರೀತಿ ಯಾವ್ಯಾವ sector ಗಳಿಗೆ ಅವರು ಆದ್ಯತೆ ಕೊಟ್ಟಿದ್ದಾರೆಂಬ ಅಂಕಿ ಅಂಶಗಳಿವೆ. ಆಂಧ್ರಪ್ರದೇಶವಿರಬಹುದು ಅಥವಾ ಮಹಾರಾಷ್ಟ್ರವಿರಬಹುದು. ಮಹಾರಾಷ್ಟ್ರದವರು power sector ನಲ್ಲಿ ಹಿಂದೆ ಬಿದ್ದಿಲ್ಲ. ಆ ಕಾರಣದಿಂದ ಇವತ್ತು industry ಗಳು ಅಲ್ಲಿಗೆ ಹೋಗುತ್ತವೆ. Global Investors Meetಅನ್ನು ಕರೆಯಲೇಬಾರದೆ, ಬಂಡವಾಳಕ್ಕೆ ಆಹ್ವಾನ ಕೊಡಲೇಬಾರದೆ ಎಂದು ಹೇಳಿದರು. ಇದಕ್ಕೆ ನನ್ನ objection ಏನಿಲ್ಲ. ಅವರಿಗೆ ಪ್ರೋತ್ಸಾಹ ಕೊಡಿ. ಆದರೆ ನೀವು ಅವರನ್ನು ಕರೆದಾಗ, industry ಗಳಾಗುವುದಕ್ಕೆ ನೀವು ಅವರಿಗೆ ಯಾವ ರೀತಿ ವೇದಿಕೆಯನ್ನು ಸೃಷ್ಟಿ ಮಾಡಿಕೊಟ್ಟಿದ್ದೀರಿ. ಯಾವ infrastructure ಗಳನ್ನು ಇಲ್ಲಿ create ಮಾಡಿಟ್ಟಿದ್ದೀರಿ. ಹಿಂದಿನ ಸರ್ಕಾರ ಎರಡು Global Investors Meet ನಡೆಸಿವೆ. ಮಾನ್ಯ ಮುಖ್ಯಮಂತ್ರಿಗಳು ವಿರೋಧ ಪಕ್ಷದ ನಾಯಕರಾಗಿದ್ದಾಗ ಇದು ಲೂಟಿ ಹೊಡೆಯುವ ಕಾರ್ಯಕ್ರಮವೆಂದು ಹೇಳಿದ್ದರು. ಇವತ್ತು Global Investors meet ಕರೆಯುವ

ಕೆಲಸವನ್ನು ನೀವುಗಳೇ ಮಾಡಿಕೊಂಡಿದ್ದೀರಿ. 50,000 ಕೋಟಿ ಹರಿದು ಬಂತೆಂದು ಹೇಳಿ Agriculture ಸಂಬಂಧಿಸಿದಂತೆ ಒಂದು Global Investors Meet ನಡೆಸಿದರು, ಕೊನೆಗೆ ರೈತರ ಭೂಮಿಯನ್ನು industryಗಳ ಮತ್ತು infrastructure ಹೆಸರಿನಲ್ಲಿ ಲೂಟಿ ಹೊಡೆದಿರುವುದು ಅಂತಿಮವಾಗಿ ನಮಗೆ ಸಿಕ್ಕಿರುವ result ಆಗಿದೆ. ಇವತ್ತು industry ಮತ್ತು agriculture sector ಎರಡು ಕೂಡ Improve ಆಗಬೇಕಾದರೆ irrigation and power sector ಗಳಿಗೆ ಹೆಚ್ಚಿನ ಆದ್ಯತೆ ಕೊಡುವ ಮುಖಾಂತರ ನಮ್ಮ ರಾಜ್ಯದ ಆರ್ಥಿಕ ಬೆಳವಣಿಗೆ ಕುಸಿತವಾಗಿದೆ ಒಂದು ಕಾಲದಲ್ಲಿ ಕೇಂದ್ರ ಸರ್ಕಾರದ ಆರ್ಥಿಕ ಬೆಳವಣಿಗೆಗಿಂತ ಒಂದು ಹೆಜ್ಜೆ ಮುಂದೆ ಹೋಗಿದ್ದೆವು ಇವತ್ತು ಅದಕ್ಕಿಂತ decline ಆಗಿದ್ದೇವೆ. ಇದನ್ನು ಸರಿಪಡಿಸಬೇಕಾದರೆ manufacturing sector ಗೆ ಯಾವ ರೀತಿ ಶಕ್ತಿಯನ್ನು ತುಂಬಬೇಕು. ಶ್ರೀ ಅಜೀಂ ಪ್ರೇಮ್‌ಜಿ ಇರಬಹುದು ಶ್ರೀ ನಾರಾಯಣ ಮೂರ್ತಿಯವರಿರಬಹುದು ಅವರ ಬಗ್ಗೆ ಚರ್ಚೆ ಮಾಡುವುದಕ್ಕೆ ನಾನು ತಯಾರಿಲ್ಲ. ನಮ್ಮ ರೈತರ growth ಆಗಬೇಕಾಗಿದೆ. ಪೀಣ್ಯದಲ್ಲಿ ಸಣ್ಣಪುಟ್ಟ manufacturing Industryಗಳನ್ನೇನು ಇಟ್ಟುಕೊಂಡಿದ್ದಾರೆ ಅವರಿಗೆ ಸರ್ಕಾರ ಇವತ್ತು ಶಕ್ತಿ ತುಂಬಬೇಕಾಗಿದೆ. ಇವತ್ತು ಸರ್ಕಾರಕ್ಕೆ revenue generate ಮಾಡಿಕೊಡುವವರು ಅವರು. ಆ ದೃಷ್ಟಿಯಿಂದ ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ. ಇವತ್ತು ಯಾವ ತೀರ್ಮಾನಗಳನ್ನು ಮಾಡಿಕೊಂಡಿದ್ದೀರಿ ಅದರಲ್ಲಿ ಬದಲಾವಣೆಯನ್ನು ತನ್ನಿ. Power and irrigation sector ಗೆ ಹೆಚ್ಚಿನ ಅನುದಾನವನ್ನು ಕೊಡುವ ನಿರ್ಧಾರವನ್ನು ಮಾಡಿ ಅನುತ್ಪಾದಕ ವೆಚ್ಚಗಳನ್ನು ಕಡಿತಗೊಳಿಸುವುದಕ್ಕೆ ತೀರ್ಮಾನ ಮಾಡಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ. Power sector ವಿಷಯದಲ್ಲಿ ಹೇಳುವುದಾದರೆ, allocation ಅನ್ನು ಶೇ.12 ರಿಂದ ಶೇ. 8ಕ್ಕೆ ಇಳಿಸಿಕೊಂಡಿದದ್ದೀರಿ. ಆದರೆ ನೀವು ಎಲ್ಲಿಂದ ನೀವು ಎಲ್ಲಿಂದ Power generate ಮಾಡಿಸುತ್ತೀರಿ? KERC ಛೇರ್‌ಮನ್ ರವರು ಸುಮ್ಮನೆ ಜೋಕ್ ಎಂದು ಹೇಳಿರುವುದಿಲ್ಲ. ಮುಖ್ಯಮಂತ್ರಿಗಳ ಭಾಷಣವನ್ನು ನೋಡಿದಾಗ, ಬಹುಶಃ ಇಂಧನ ಇಲಾಖೆಯಲ್ಲಿ ಪವರ್ ಜನರೇಷನ್ ಮಾಡುವುದಕ್ಕೆ ದೊಡ್ಡ

ಮಟ್ಟದಲ್ಲಿ ಕ್ರಾಂತಿಯ ಬದಲಾವಣೆ ತರಬಹುದೆಂದು ಅಂದುಕೊಂಡಿದ್ದೆ. ಆದರೆ ಇಲ್ಲಿ ಏನಾಗಿದೆಯೆಂದರೆ ಕಳೆದ ನಾಲ್ಕು ವರ್ಷಗಳಲ್ಲಿ, ಹಿಂದಿನ ಸರ್ಕಾರದಲ್ಲಿಯೂ ಕೂಡ ಛತ್ತೀಸ್‌ಗಡದಲ್ಲಿ 5,000 ಮೆಗಾವ್ಯಾಟ್, ಬಿಜಾಪುರದ ಕೂಡಿಗಿಯಲ್ಲಿ 5,000 ಮೆಗಾವ್ಯಾಟ್ ತರುತ್ತೇವೆಂದು ಹೇಳಿದ್ದರು. ಹಿಂದಿನ ಕೆಲವು ಅವಧಿಯಲ್ಲಿ ಪವರ್‌ಅನ್ನು ಪರ್ಚೆಸ್ ಮಾಡುವುದಕ್ಕೆ ಟೆಂಡರ್ ಆಹ್ವಾನಿಸಿದರು. ಆ ಟೆಂಡರ್‌ನಲ್ಲಿ lowest rate ಗೆ ಟೆಂಡರ್ ಕೋಟ್ ಮಾಡಿದ್ದಾರೆ. ಆದರೆ ಸ್ವಲ್ಪ ದಿನಗಳ ನಂತರ 4.50 ರೂ.ಗೆ ಟೆಂಡರ್ ಹಾಕಿರುವುದನ್ನು ರಿಜೆಕ್ಟ್ ಮಾಡಿ, ಮುಂದೆ 6.50 ರೂ.ಗಳಿಗೆ enhance ಮಾಡಿಕೊಳ್ಳುತ್ತಾರೆ. ಈ ರೀತಿಯ ವಿಷಯಗಳ ಬಗ್ಗೆ ಸರ್ಕಾರ ತನಿಖೆ ನಡೆಸಬೇಕು. ರಾಜ್ಯದ 6 ಕೋಟಿ ಜನರು ಕಟ್ಟುವಂತಹ ತೆರಿಗೆ ಹಣವನ್ನು ಲೂಟಿ ಹೊಡೆಯುವುದಕ್ಕೆ ಅವಕಾಶ ಕೊಡಬೇಡಿ. ಈ ನಾಡಿನಲ್ಲಿರುವಂತಹ ಭೂಮಿಯಲ್ಲಿ ಗಣಿಗೆ ಸಂಬಂಧಿಸಿದ ಹಾಗೆ, ಇಂದು ಯಾರೇ ತಪ್ಪನ್ನು ಮಾಡಿರಲಿ, ಕಠಿಣವಾದಂತಹ ನಿರ್ಧಾರವನ್ನು ಮಾಡಿ ಖಜಾನೆಗೆ ಹಣ ತುಂಬಿಸುವಂತಹ ಕೆಲಸ ಮಾಡುತ್ತೇನೆಂಬ ಮಾತನ್ನು ಹೇಳಿದಿರಿ. ಆದರೆ ಈ ಸರ್ಕಾರದಲ್ಲಿ ಆ ರೀತಿ ಕಾಣುತ್ತಿಲ್ಲ. 3,270 ಕೋಟಿ ರೂ.ಗಳ ಖೋತಾ ಬಜೆಟ್‌ಅನ್ನು ನೀವೇ ಕೊಟ್ಟಿದ್ದೀರಿ. ರಾಜಸ್ವ ತೆರಿಗೆಯನ್ನು ಸಂಗ್ರಹ ಮಾಡುವುದರಲ್ಲಿ ದೊಡ್ಡ ಮಟ್ಟದ ಬದಲಾವಣೆ ತರುತ್ತೇನೆಂದು ಹೇಳಿದಿರಿ. ಆದರೆ ಬದಲಾವಣೆ ಈ ರೀತಿ ಇದೆ. ಇಂದು 8% ಗೆ ಏನು ಮಾಡಿದ್ದೀರಿ . .

ಉಪಾಧ್ಯಕ್ಷರು:- ಕುಮಾರಸ್ವಾಮಿಯವರೆ, ಇನ್ನು ಎಷ್ಟು ಹೊತ್ತು ಮಾತನಾಡುತ್ತೀರಿ, ಎಷ್ಟು ಕಾಲಾವಕಾಶ ಬೇಕು?

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಮಾನ್ಯ ಅಧ್ಯಕ್ಷರೆ, ಹಲವಾರು ವಿಷಯಗಳಿರುವ ಕಾರಣದಿಂದ ನನಗೆ ಇನ್ನು 2-3 ಗಂಟೆಗಳ ಕಾಲಾವಕಾಶ ಬೇಕು. ನಾನು ಇಂದು ಸದನದ ಗಮನವನ್ನು ಸೆಳೆಯುವುದೇನೆಂದರೆ ಅಂಕಿ ಅಂಶಗಳಲ್ಲಿ ಸರ್ಕಾರ ಯಾವ ರೀತಿ ತಿದ್ದಿಕೊಳ್ಳಬೇಕು, ಬಹುಶಃ ಈ ಬಜೆಟ್ಟಿನ ಬಗ್ಗೆ ನಿನ್ನೆ ಮಾನ್ಯ ಸದಸ್ಯರಾದ ಶ್ರೀ ಶಿವಲಿಂಗೇಗೌಡರು ಮಾತನಾಡಿರುವ

ಬಗ್ಗೆ ನನಗೆ ಗೊತ್ತಾಯಿತು. ಅವರು ಬೆಂಗಳೂರು ಬಜೆಟ್ ಬಗ್ಗೆ ಮಾತನಾಡಿರುವ ಬಗ್ಗೆ ನನಗೆ ಗೊತ್ತಾಯಿತು. ಅವರು ಬೆಂಗಳೂರು ಬಜೆಟ್ ಬಗ್ಗೆ ಮಾತನಾಡಲು ಪ್ರಾರಂಭ ಮಾಡಿ, ಆ ಬಜೆಟ್ಟಿನಲ್ಲಿ ಅರಸೀಕೆರೆಗೆ ಹೋಗುತ್ತಾರೆ. ಅವರ ಮತಕ್ಷೇತ್ರಕ್ಕೆ ಸಂಬಂಧಿಸಿದ ತೆಂಗು, ಕೆರೆ ತುಂಬಿಸುವ ವಿಚಾರದ ಬಗ್ಗೆ ಮಾತನಾಡುತ್ತಾರೆ. ನಮ್ಮ ಮಾನ್ಯ ಸದಸ್ಯರುಗಳಿಗೆ ಬಜೆಟ್ ಎಂದರೆ ಅವರ ಕ್ಷೇತ್ರಕ್ಕೆ ಸಂಬಂಧಿಸಿದ ಸಣ್ಣ ರಸ್ತೆ, ಸುವರ್ಣ ಗ್ರಾಮೋದಯದ ಯೋಜನೆಯಡಿ ಇರುವ ಕೆಲಸಗಳ ಬಗ್ಗೆ ಮಾತನಾಡುವುದನ್ನು ನಾವು ನೋಡುತ್ತಿದ್ದೇವೆ. ಹಲವಾರು ವಿಷಯಗಳನ್ನು ಒಳಗೊಂಡ ಇವತ್ತಿನ ಬಜೆಟ್ ಏನಿದೆ ಅದನ್ನು ನಾನು ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯರವರಿಂದ ನಾನು ನಿರೀಕ್ಷೆ ಮಾಡಿರಲಿಲ್ಲ. ಹಲವಾರು ವಿಷಯಗಳ ಅಂಕಿ ಅಂಶಗಳ ಮೇಲೆ ನಾನು ಸದನದ ಗಮನವನ್ನು ಸೆಳೆಯಬೇಕಾಗಿದೆ. ಸರ್ಕಾರ ಅದನ್ನು ಬದಲಾವಣೆ ಮಾಡಿಕೊಳ್ಳುವ ನಿಟ್ಟಿನಲ್ಲಿ, ಅವರನ್ನು ಮನವೊಲಿಸಬೇಕೆನ್ನುವ ದೃಷ್ಟಿಯಿಂದ ನನಗೆ ಕಾಲಾವಕಾಶ ಬೇಕು. ಸಮಯದ ಅಭಾವವಿರುವುದರಿಂದ, ನಿನ್ನೆ ಶಿವಮೊಗ್ಗಕ್ಕೆ ಹೋಗಿ ರಾತ್ರಿ 11.00 ಗಂಟೆಗೆ ಬಂದರೂ, ಹಲವಾರು ವಿಷಯಗಳ ಬಗ್ಗೆ ನನ್ನದೇ ಆದಂತಹ ಮಾಹಿತಿಗಳನ್ನು ಕ್ರೋಢೀಕರಿಸಿದ್ದು, ಸದನದಲ್ಲಿ ಅವುಗಳ ಗಮನ ಸೆಳೆಯಲು ಇನ್ನೂ 2–3 ಗಂಟೆಗಳ ಕಾಲಾವಕಾಶ ಕೊಟ್ಟರೆ ಸರ್ಕಾರಕ್ಕೆ ಉತ್ತಮವಾದ ಸಲಹೆಗಳನ್ನು ಕೊಡುತ್ತೇನೆ.

ಉಪಾಧ್ಯಕ್ಷರು:– ಈಗ ಬಿ.ಎ.ಸಿ. ಮೀಟಿಂಗ್ ಇರುವುದರಿಂದ Break ತೆಗೆದುಕೊಳ್ಳೋಣ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಮಾನ್ಯ ಅಧ್ಯಕ್ಷರೆ, ಇಂಧನ ಇಲಾಖೆ ಬಗ್ಗೆ ನನ್ನ ಮಾತುಗಳನ್ನು ಮುಗಿಸಿ, ಉಳಿದುದನ್ನು ಭೋಜನ ವಿರಾಮದ ನಂತರ ಮುಂದುವರೆಸುತ್ತೇನೆ. ಮಾನ್ಯ ಅಧ್ಯಕ್ಷರೆ, ಈ ಸದನದ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದೇನೆಂದರೆ, ಸರ್ಕಾರದಿಂದ ಕೊಡುತ್ತಿರುವ ಕರೆಂಟ್‌ನಿಂದ ರೈತರ ಪರಿಸ್ಥಿತಿ ಎಲ್ಲಿಗೆ ಹೋಗುತ್ತಿದೆ ಎಂಬ

ಬಗ್ಗೆ ತಮಗೆ ಒಂದು ಫೋಟೋವನ್ನು ಕಳುಹಿಸಿಕೊಡುತ್ತೇನೆ. ರಾತ್ರಿ ಎರಡು ಗಂಟೆಯ ಸಮಯದಲ್ಲಿ ಕರೆಂಟ್‌ಅನ್ನು ಕೊಡುತ್ತೀರಿ. ಒಬ್ಬ ಹೆಣ್ಣು ಮಗಳು ರಾತ್ರಿ ಸಮಯದಲ್ಲಿ ನೀರು ಬಿಡುವುದಕ್ಕೆ ಹೋದಾಗ ಕರಡಿ ಬಂದು ಆ ಹೆಣ್ಣು ಮಗಳ ಮುಖವನ್ನು ಗಾಯಮಾಡಿದೆ. ಆತನ ಪತಿಯು ಆ ರಾತ್ರಿಯಲ್ಲೇ ಹೋರಾಟ ಮಾಡಿ, ಧೈರ್ಯಮಾಡಿ ಆಕೆಯನ್ನು ಎತ್ತಿಕೊಂಡು ಬಂದರು. ರಾತ್ರಿ ಎರಡು ಗಂಟೆಯ ಸಮಯದಲ್ಲಿ ನೀವು ಕರೆಂಟ್ ಕೊಡುತ್ತಿರುವುದರಿಂದ ರೈತರ ಪರಿಸ್ಥಿತಿ ಏನಾಗಿದೆ ಎಂಬುದನ್ನು ಯೋಚನೆ ಮಾಡಬೇಕು. ಗಾಯಗೊಂಡಿರುವ ಆ ಹೆಂಗಸು ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಒಳಗಾಗಿದ್ದು, ಚಿಕಿತ್ಸೆಗೆ ಸುಮಾರು 5–6 ಲಕ್ಷ ರೂ.ಗಳು ಖರ್ಚಾಗುತ್ತದೆಂದು ವೈದ್ಯರು ತಿಳಿಸಿರುತ್ತಾರೆ. ನಾನೂ ಸಹ ಆಸ್ಪತ್ರೆಗೆ ಭೇಟಿ ನೀಡಿದ್ದೆ.ಇದನ್ನು ನೋಡಿದರೆ ಇಂಧನ ಇಲಾಖೆ ಎಷ್ಟು ಸಾಮರ್ಥ್ಯದಿಂದ ಕೆಲಸ ಮಾಡುತಿದ್ದಾರೆ, ನಮ್ಮ ರೈತರನ್ನು ಯಾವ ರೀತಿ ರಕ್ಷಣೆ ಮಾಡುತ್ತಿದ್ದಾರೆ ಎಂಬುದು ಕರೆಂಟ್ ಕೊಡುವುದರಿಂದ ತಿಳಿಯುತ್ತದೆ. ರಾತ್ರಿ ಎರಡು ಗಂಟೆಯ ಸಮಯದಲ್ಲಿ ನೀರು ಬಿಡುವುದಕ್ಕೆ ಹೋಗಿ ಇಷ್ಟೆಲ್ಲಾ ಅನಾಹುತಗಳು ಆಗಿವೆ. ಕರಡಿ ದಾಳಿ ಮಾಡಿರುವುದನ್ನು ನೋಡುವುದಕ್ಕೆ ಆಗುವುದಿಲ್ಲ. ಇಂತಹ ಪರಿಸ್ಥಿತಿಯಿರುವುದರಿಂದ ಎರಡೇ ಗಂಟೆಗಳ ಕಾಲ ಕರೆಂಟ್ ಕೊಟ್ಟರೂ ಬೆಳಿಗ್ಗೆ ಸಮಯದಲ್ಲಿ ಕರೆಂಟ್‌ಅನ್ನು ಕೊಡಿ. ನಿದ್ದೆಗೆಟ್ಟು ಅರ್ಧರಾತ್ರಿಯಲ್ಲಿ ನೀರು ಬಿಡುವುದಕ್ಕೆ ಹೋದಾಗ ಹಳ್ಳಿಗಳಲ್ಲಿ ರಕ್ಷಣೆ ಸಿಗುವುದಿಲ್ಲ. ಕೆಲವು ಕಡೆ ಹಾವು ಕಚ್ಚಿ ಸತ್ತು ಹೋಗುತ್ತಾರೆ. ಚಿರತೆಗಳು ಕಾಡಿನಿಂದ ನುಗ್ಗುತ್ತಿವೆ. ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳ ಸಭೆ ಕರೆಯುವಂತೆ ನಿನ್ನೆ ಮಾನ್ಯ ಸಭಾಧ್ಯಕ್ಷರಿಗೆ ತಿಳಿಸಿದ್ದೆ. ಅರಣ್ಯ ಕಾಯಿದೆ ಜಾರಿಗೆ ತಂದು ಆನೆಗಳು, ಹುಲಿಗಳು, ಚಿರತೆಗಳು ಮನುಷ್ಯರನ್ನು ತಿನ್ನುವುದಕ್ಕೆ ಬರುತ್ತಿವೆ. ಇವುಗಳು ನಗರ ಪ್ರದೇಶಕ್ಕೆ, ಹಳ್ಳಿಗಳಿಗೆ ನುಗ್ಗಿ ಜನ ಸಾಯುವಂತಹ ಪರಿಸ್ಥಿತಿಯುಂಟಾಗಿದೆ. ಈ ರೀತಿ ಇರುವಾಗ ನಮ್ಮ ರೈತರನ್ನು ಯಾವ ರೀತಿ ಒಕ್ಕೆಲೆಬ್ಬಿಸುತ್ತಾರೆ? ಆದ್ದರಿಂದ ಒಂದು ಸಬೆ ಕರೆಯುವಂತೆ ತಿಳಿಸಲಾಗಿತ್ತು. ನಾಲ್ಕು ಲಕ್ಷ ರೂ.ಗಳ ವೆಚ್ಚವನ್ನು ಭರಿಸುವುದಕ್ಕೆ ಆ ಹೆಂಗಸು ಎಲ್ಲಿಂದ ದುಡ್ಡು

ತರುವುದು? ಯಾರ ತಪ್ಪಿಗೆ ಈ ಕುಟುಂಬ ಬೀದಿ ಪಾಲಾಗಬೇಕು? ಒಂದು ವೇಳೆ ಮಾನ್ಯ ಮುಖ್ಯಮಂತ್ರಿಗಳು ಪರಿಹಾರ ಕೊಡದಿದ್ದರೆ ಕುಟುಂಬ ಬೀದಿ ಪಾಲಾಗುತ್ತದೆ. ಇಂತಹ ಪರಿಸ್ಥಿತಿಗಳನ್ನು ಕಾಣುವಂತಹ ಸಂದರ್ಭದಲ್ಲಿ, ವಿದ್ಯುಚ್ಛಕ್ತಿ ಇಲಾಖೆಗೆ ಸಂಬಂಧಿಸಿದಂತೆ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆದು, ಹೆಚ್ಚಿನ ರೀತಿಯಲ್ಲಿ ಅನುದಾನ ನೀಡಿ 2017 ರ ಹೊತ್ತಿಗೆ surplus ಕರೆಂಟ್ ಅನ್ನು ನಮ್ಮ ರಾಜ್ಯ ಕಾಣುತ್ತದೆಂದು ಏನು ಹೇಳಿದ್ದಾರೆ, ಆ ಮಾತನ್ನು ಉಳಿಸಿಕೊಳ್ಳುವಂತಹ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ಕೊಡಬೇಕೆಂದು ನಾನು ಈ ಸದನದ ಮುಖಾಂತರ ಹೇಳುತ್ತಿದ್ದೇನೆ. ಉಳಿದ ವಿಷಯಗಳನ್ನು ಭೋಜನದ ನಂತರ ಪ್ರಸ್ತಾಪ ಮಾಡುತ್ತೇನೆ.

ಉಪಾಧ್ಯಕ್ಷರು:- ಈಗ ಸದನವನ್ನು ಮತ್ತೆ 3.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಭೋಜನ ವಿರಾಮಕ್ಕೆ ಮಧ್ಯಾಹ್ನ 2 ಗಂಟೆ 3 ನಿಮಿಷಕ್ಕೆ ಮುಂದೂಡಿ, ಪುನಃ 3.00 ಗಂಟೆಗೆ ಸೇರುವಂತೆ ನಿರ್ಣಯಿಸಿತು.)

(ಸದನವು ಮಧ್ಯಾಹ್ನ 3 ಗಂಟೆ 24 ನಿಮಿಷಕ್ಕೆ ಪ್ರಾರಂಭಗೊಂಡಾಗ ಸನ್ಮಾನ್ಯ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು)

ವಿತ್ತೀಯ ಕಾರ್ಯಕ್ರಮ

ಉಪಾಧ್ಯಕ್ಷರು:- ತಾವು ಮುಂದುವರಿಸಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ರಾಮನಗರ):- ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ನಾನು ರಾಜ್ಯದ ಅಭಿವೃದ್ಧಿಗೆ ಪೂರಕವಾದ ರೀತಿಯಲ್ಲಿ ಪ್ರಮುಖವಾಗಿ ನೀರಾವರಿ ಹಾಗೂ ವಿದ್ಯುಚ್ಛಕ್ತಿ ಇಲಾಖೆಗಳಿಗೆ ಅನುದಾನವನ್ನು ಕಡಿತಗೊಳಿಸಿರತಕ್ಕಂಥದ್ದರ ಬಗ್ಗೆ ಗಮನ ಸೆಳೆದಿದ್ದೇನೆ. ಕೃಷಿ ಕ್ಷೇತ್ರಕ್ಕೆ ನಾವು ಬರುವುದಾದರೆ, ಕೃಷಿ ಕ್ಷೇತ್ರದಲ್ಲಿ ಕಳೆದ ಬಾರಿ ಹನ್ನೆರಡೂವರೆ ಪರ್ಸೆಂಟ್ ಇದ್ದಂಥ ಅನುದಾನವನ್ನು ಈ ಬಾರಿ ಹತ್ತು ಪರ್ಸೆಂಟ್‌ಗೆ ಇಳಿಸಿದ್ದಾರೆ. ಕೃಷಿ ಭಾಗ್ಯ ಎನ್ನುವ ಹೆಸರನ್ನು ಕೊಟ್ಟು 53 ಲಕ್ಷ ರೈತ ಕುಟುಂಬಗಳಿಗೆ, 45 ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ 23 ಜಿಲ್ಲೆಗಳಲ್ಲಿ 5 ಮುಖ್ಯ ಒಣ ಭೂಮಿ ವಲಯಗಳಲ್ಲಿ ಜಾರಿಗೆ ತಂದಿರುವುದು ಒಂದು ಭಾಗ. ಇದಕ್ಕೆ ಮುಂಚೆ ಸರ್ಕಾರದವರು ಸರ್ವಜ್ಞನ ಪದ ಏನು ಹೇಳಿದ್ದಾರೆಂದರೆ, "ಒಕ್ಕಲಿಗ ಒಕ್ಕದಿದ್ದರೆ ಬಿಕ್ಕುವುದು ಜಗವೆಲ್ಲಾ" ಎಂದು ಹೇಳಿ, ರಾಜ್ಯದ ರೈತಾಪಿ ಜನರ ಬವಣೆಯನ್ನು ನೀಗಿಸುವುದು ನಮ್ಮ ಸರ್ಕಾರದ ಪ್ರಥಮ ಆದ್ಯತೆಯಾಗಿದೆ. ರೈತರ ಬದುಕು ಹಸನಾಗದ ಹೊತರು ನಮ್ಮ ಸಮಾಜದ ಸ್ವಾಸ್ಥ್ಯ ಸುಧಾರಿಸುವುದಿಲ್ಲ. ಈ ಹಿನ್ನೆಲೆಯಲ್ಲಿ ನಮ್ಮ ಸರ್ಕಾರವು ರೈತರ ಹಿತಾಸಕ್ತಿಯನ್ನು ಕಾಪಾಡುವಲ್ಲಿ ಸದಾ ಮುಂದಿರುತ್ತದೆ. ಅಲ್ಪ ಬಡ್ಡಿ ದರದಲ್ಲಿ ಕೃಷಿ ಸಾಲ, ಸಹಾಯಧನ ಯುಕ್ತ ಬೀಜ, ರಸಗೊಬ್ಬರ, ಪೋಷಕಾಂಶ, ಕೃಷಿ ಉಪಕರಣಗಳು, ಭೂಸಂರಕ್ಷಣೆ, ಮಾರುಕಟ್ಟೆ ಸುಧಾರಣೆ, ಕನಿಷ್ಠ ಬೆಂಬಲ ಬೆಲೆ, ಬೆಳೆ ನಷ್ಟ ಪರಿಹಾರ, ಬೆಳೆ ವಿಮೆ ಮುಂತಾದ ಕಾರ್ಯಕ್ರಮಗಳಿಂದ ಎಲ್ಲಾ ಹಂತದಲ್ಲೂ ರೈತರ ನೆರವಿಗೆ ಸರ್ಕಾರ ಧಾವಿಸುತ್ತಿದೆ. ನೀರಾವರಿಯ ಭದ್ರತೆ, ಉಚಿತ ವಿದ್ಯುಚ್ಛಕ್ತಿಯ ಸರಬರಾಜು, ಸಾಲ ಮನ್ನಾ ಯೋಜನೆಯಿಂದ ಸಾಲ ಮುಕ್ತತೆ ಒದಗಿಸಲಾಗುತ್ತಿದೆ. ಎಂತಹ ಸಂದರ್ಭದಲ್ಲಿಯೂ ನಮ್ಮ ಅನ್ನದಾತ ಎದೆಗುಂದಬಾರದು ಮತ್ತು ಹತಾಶನಾಗಬಾರದು. ನಿಮ್ಮೊಂದಿಗೆ ಯಾವಾಗಲೂ ನಾವಿದ್ದೇವೆ ಎಂಬ ಭರವಸೆಯನ್ನು ನಾನು ಇಲ್ಲಿ ಮತ್ತೊಮ್ಮೆ

ನೀಡುತ್ತೇನೆಂದು ತಮ್ಮ ಆಯವ್ಯಯದಲ್ಲಿ ಹೇಳಿದ್ದಾರೆ. ಕೃಷಿ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ಕೊಡಬೇಕಾಗಿದೆ. ಈ ಬಜೆಟ್‌ನಲ್ಲಿ ಈ ಒಂದು ಕೃಷಿ ಕ್ಷೇತ್ರಕ್ಕೆ ಈ ರೀತಿಯ ಅನುದಾನ ಕಡಿತಗೊಳಿಸುವುದರಿಂದ, ಅರಾಜಕತೆಯನ್ನು ನಾವು ಕಾಣುತ್ತಿದ್ದೇವೆಂದು ಹೇಳಲಿಕ್ಕೆ ಬಯಸುತ್ತೇನೆ. ರೈತರಿಗೆ ಕ್ವಾಲಿಟಿ ವಿದ್ಯುತ್‌ನ್ನು ಕೊಡಬೇಕಾಗುತ್ತದೆ. ಆ ರೈತನಿಗೆ ವಿದ್ಯುತ್‌ನ್ನೇ ಸರಿಯಾಗಿ ಕೊಡುತ್ತಿಲ್ಲ. ಇವತ್ತು ಹಲವಾರು ಪ್ರದೇಶಗಳಲ್ಲಿ ನೀರಾವರಿ ಸೌಲಭ್ಯಗಳಿಲ್ಲ. ನಿಮ್ಮ ಕೋಲಾರ ಜಿಲ್ಲೆ, ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಶಾಶ್ವತವಾದ ನೀರಾವರಿ ಯೋಜನೆಗಳಾಗಬೇಕೆಂದು ನೀವು ಹಲವಾರು ವರ್ಷಗಳಿಂದ ಹೋರಾಟ ಮಾಡಿಕೊಂಡು ಬರುತ್ತಿದ್ದೀರಿ. ಒಂದು ಕಡೆ ಅಂತರಜಲದ ಕುಸಿತದಿಂದಾಗಿ 1500 ಅಡಿ ಬೋರ್ ಕೊರೆದರೂ ನೀರು ಸಿಗುವುದಿಲ್ಲ. ಇಂಥ ಒಂದು ಪರಿಸ್ಥಿತಿಯಲ್ಲಿ ನಿಮಗೆ ಸಿಕ್ಕುವ ಅಲ್ಪ ನೀರಿನಲ್ಲಿಯೇ ತೋಟಗಾರಿಕೆ ಕೃಷಿಯನ್ನು ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಮಾಡಿಕೊಂಡಿರುವುದನ್ನು ನಾವಿಂದು ನೋಡುತ್ತಿದ್ದೇವೆ. ಬೆಂಗಳೂರು ಗ್ರಾಮಾಂತರ, ರಾಮನಗರ ಜಿಲ್ಲೆಗಳಲ್ಲಿ ಇವತ್ತು ಬೋರ್‌ವೆಲ್‌ಗಳ ಮೂಲಕವೇ ಕೃಷಿಯನ್ನು ನಾವು ಮಾಡಬೇಕಾಗಿದೆ. ನಾನು ಈಗಾಗಲೇ ಒಂದು ಪ್ರಕರಣ ನಿಮ್ಮ ಮುಂದೆ ಇಟ್ಟೆ, ಈ ಸರ್ಕಾರದಲ್ಲಿ ಮಧ್ಯ ರಾತ್ರಿಯಲ್ಲಿ ವಿದ್ಯುತ್ ಕೊಡುವ ವ್ಯವಸ್ಥೆಗಳೇನು ಇಟ್ಟುಕೊಂಡಿದ್ದಾರೆ, ಮಧ್ಯ ರಾತ್ರಿ ಎರಡು ಗಂಟೆಯಲ್ಲಿ ವಿದ್ಯುತ್ ಕೊಟ್ಟಾಗ ಮಹಿಳೆಯೊಬ್ಬಳು ಹೋಗಿ ಅಲ್ಲಿ ಆದ ಅನಾಹುತದ ಪರಿಣಾಮವಾಗಿ ಆ ಹೆಣ್ಣು ಮಗಳು ಇಂದು ಆಸ್ಪತ್ರೆಯಲ್ಲಿ ಮಲಗಿದ್ದಾಳೆ. ಇದು ಒಂದು ಪ್ರಕರಣ ನಮ್ಮ ಮುಂದೆ ಕಾಣುತ್ತಿರುವುದು. ಇದು ಪ್ರತಿ ನಿತ್ಯ ನಡೆಯುತ್ತಿದೆ. ಹಾವು ಕಚ್ಚಿರತಕ್ಕಂಥ ಪ್ರಕರಣ ಇರಬಹುದು, ಮತ್ತೊಂದು ಪ್ರಕರಣ ಇರಬಹುದು. ಈಗ ಕೃಷಿ ಭಾಗ್ಯ ಎನ್ನತಕ್ಕಂಥ ಯೋಜನೆ ಈಗ ಮತ್ತೊಂದು ಹೊಸದಾಗಿ ಕೃಷಿ ಭಾಗ್ಯ ಎಂದು ತಂದಿದ್ದೀರಿ. ಸರಿಯಾದ ರೀತಿಯ ವಿದ್ಯುತ್ ಅನ್ನು ನಮ್ಮ ರೈತ ಕುಟುಂಬಗಳಿಗೆ ಕೊಡುವವರೆಗೆ, ಸರ್ಕಾರ ಒಂದು petro max ಭಾಗ್ಯ ತಂದು ಬಿಡಲಿ. ಆ ರೈತ ಕುಟುಂಬಗಳಿಗೆ ಮಧ್ಯರಾತ್ರಿಯ ಕತ್ತಲಲ್ಲಿ ತಮ್ಮ ಹೊಲಗಳಿಗೆ ಹೋಗುವುದಕ್ಕೆ ಒಂದು petro max ದೀಪ ಉಚಿತವಾಗಿ ಕೊಡಿ. ಆ ರೀತಿಯ

ಒಂದು petro max ಭಾಗ್ಯ ಯೋಜನೆಯನ್ನು ತಂದು ಬಿಟ್ಟರೆ ಬಹುಶಃ ಆ ರೈತರುಗಳು ಕಾಡುಪ್ರಾಣಿಗಳ ದಾಳಿಗೆ ಒಳಗಾಗುವುದನ್ನು ತಪ್ಪಿಸಬಹುದು. ಇದೊಂದು ಭಾಗ್ಯ ಯೋಜನೆಯನ್ನು ತಂದು ಬಿಡಲಿ ಎಂದು ನಾನು ಸರ್ಕಾರಕ್ಕೆ ಹೇಳಬಯಸುತ್ತೇನೆ. ಕಳೆದ ಸರ್ಕಾರದವರು ಕೃಷಿ ಬಜೆಟ್‌ನ್ನೇ ಬೇರೆ ರೀತಿಯಲ್ಲಿ ಮಂಡನೆ ಮಾಡುವುದಕ್ಕೆ ಹೋದರು. ಪ್ರತ್ಯೇಕವಾಗಿ ಕೃಷಿ ಬಜೆಟ್ ಮಂಡಿಸಿ ರೈತರಿಗೆ ಆತ್ಮಸ್ಥೈರ್ಯ ತುಂಬುತ್ತೇವೆ, ಕೃಷಿಗೆ ಹೆಚ್ಚು ಒತ್ತು ಕೊಡುತ್ತೇವೆಂದರು, ಹಿಂದಿನ ಸರ್ಕಾರದಲ್ಲಿ ಅವರು ಕೊಟ್ಟಂಥ ಪ್ರತ್ಯೇಕ ಕೃಷಿ ಬಜೆಟ್‌ನಿಂದ ನಾವು GDP growth ಅನ್ನು Agriculture sector ನಲ್ಲಿ ನೋಡುವುದಕ್ಕೆ ಸಾಧ್ಯವಾಗಲಿಲ್ಲ. ನಾನು ಮುಖ್ಯಮಂತ್ರಿಯಾದ ಸಂದರ್ಭದಲ್ಲಿ ದೆಹಲಿಗೆ ಹೋದಾಗ ಕೇಂದ್ರದ ನಮ್ಮ ಕೃಷಿ ಸಚಿವರು ಹೇಳುತ್ತಿದ್ದರು. ಕೃಷಿ ಕ್ಷೇತ್ರದಲ್ಲಿ ಕನಿಷ್ಟ 8–9 ಪರ್ಸೆಂಟ್ GDP growth ಅನ್ನು ಈ ದೇಶದಲ್ಲಿ ನಾವು ಕಾಣದಿದ್ದರೆ, ಈ ದೇಶಕ್ಕೆ ಭವಿಷ್ಯವಿಲ್ಲ ಎನ್ನುವ ಮಾತನ್ನು ನಾವು ಕೇಂದ್ರದಲ್ಲಿ ಚರ್ಚೆಗೆ ಹೋದಂಥ ಸಂದರ್ಭದಲ್ಲಿ ಹೇಳಿರುವಂಥ ಪರಿಸ್ಥಿತಿಯನ್ನು ನಾವು ಇವತ್ತು ಸ್ಮರಿಸಿಕೊಳ್ಳುವುದಕ್ಕೆ ಬಯಸುತ್ತೇನೆ. ಬಿಜೆಪಿ ಸರ್ಕಾರದಲ್ಲಿ, ಬಿಜೆಪಿ ಸರ್ಕಾರ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ, ಹಿಂದಿನ ಸರ್ಕಾರ ಎನ್ನುವ ಪದ ಬಳಕೆ ಮಾಡುವುದಕ್ಕೆ ಬಯಸುತ್ತೇನೆ. ಹಿಂದೆ ಅಭಿವೃದ್ಧಿ ಅಭಿವೃದ್ಧಿ ಎಂದು ಹೇಳಿದರು. ರೈತರಿಗೆ ಹಲವಾರು ರೀತಿಯ ಯೋಜನೆ ಕೊಟ್ಟಿದ್ದೇವೆ, ಸಾವಯವ ಕೃಷಿಗೆ ಉತ್ತೇಜನ ಕೊಟ್ಟಿದ್ದೇವೆ. ಅದಕ್ಕೆ ನೂರಾರು ಕೋಟಿ ಹಣ ಇಟ್ಟಿದ್ದೇವೆ, ಇವತ್ತು ರೈತರಿಗೆ ಹತ್ತುಸಾವಿರ ರೂಪಾಯಿಯವರೆಗೆ ಸಹಾಯಧನ ಕೊಡುವ ಬಿತ್ತನೆ ಬೀಜ, ಗೊಬ್ಬರ ಖರೀದಿಗೆಂದು ಅವರು ಮಾಡಿದಂಥ ಘೋಷಣೆಗಳು. ಇದೆಲ್ಲವನ್ನೂ ನಾನು ಏತಕ್ಕೆ ಹೇಳುತ್ತೇನೆಂದರೆ, ಇಷ್ಟೆಲ್ಲಾ ಇದ್ದರು ರೈತ ಇವತ್ತು ಯಾವೊಂದು ಜಿಡಿಪಿ ಗ್ರೋತ್‌ಅನ್ನು ದೇಶಕ್ಕೆ ಕಾಂಟ್ರಿಬ್ಯೂಟ್ ಮಾಡಬೇಕೆನ್ನುವುದನ್ನು ಹೇಳಿದ್ದಾರೆ. ನಮ್ಮ ರಾಜ್ಯದ 75 ಲಕ್ಷ ರೈತ ಕುಟುಂಬಗಳು ಕೃಷಿ ಆಧಾರದ ಮೇಲೆ ಏನು ಜೀವನ ಮಾಡುತ್ತಾರೆ, 2.9 ಜಿಡಿಪಿ ಗ್ರೋತ್ ಅನ್ನು ನಾವು ಸಮಯದಲ್ಲಿ ಕಂಡೆವು, ಕೃಷಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟಿದ್ದೇವೆಂದು ಹಿಂದಿನ ಸರ್ಕಾರ ಹೇಳಿದರೂ ನೆಗೆಟಿವ್

ಟ್ರೆಂಡ್ ಹೋದಂಥ ದಿನಗಳನ್ನು ನಾವು ಕಂಡೆವು. ಈ ವರ್ಷ ಸುಮಾರು 131 ಲಕ್ಷ ಮೆ.ಟನ್ ಆಹಾರ ಉತ್ಪಾದನೆಯನ್ನು ನಾವು ಕಾಣುತ್ತೇವೆನ್ನುವ ಮಾತನ್ನು ಹೇಳಿದ್ದಾರೆ, ನಾನು ಆಗಲೇ ಹೇಳಿದೆ, ಪ್ರಕೃತಿಯ ಸಹಕಾರದಿಂದ ನಮ್ಮ ರೈತ ಆ ಮಟ್ಟವನ್ನು ಮುಟ್ಟಿದ್ದಾನೆ. ಇವತ್ತು ಪ್ರಕೃತಿ ಸಹಕಾರ ಇಲ್ಲದಿದ್ದರೆ ನಮ್ಮ ರೈತರು ಆ ಮಟ್ಟಕ್ಕೆ ಅಚೀವ್‌ಮೆಂಟ್‌ಅನ್ನು ಕಾಣುವುದಕ್ಕೆ ಸಾಧ್ಯವಿರಲಿಲ್ಲ. ಇತ್ತೀಚಿನ ದಿನಗಳಲ್ಲಿ ಬಜೆಟ್ ಮಾಡಬೇಕಾದರೆ, ಅದರಲ್ಲೂ ವಿಶೇಷವಾಗಿ ಕೃಷಿ ಕ್ಷೇತ್ರಕ್ಕೆ ಅನುದಾನವನ್ನು ಕೊಡಬೇಕಾದರೆ ಎಲ್ಲಾ ಸರ್ಕಾರಗಳು ಒಂದು ಹವ್ಯಾಸವನ್ನು ಬೆಳೆಸಿಕೊಂಡುಬಿಟ್ಟರು. ಕೇಂದ್ರ ಸರ್ಕಾರ 25–90%ವರೆಗೆ ಸಬ್ಸಿಡಿ ರೂಪದಲ್ಲಿ ಹಣವನ್ನು ಕೊಡುತ್ತಾರೆ. ಅದಕ್ಕೆ ರಾಜ್ಯ ಸರ್ಕಾರ ಒಂದು ಮ್ಯಾಚಿಂಗ್ ಗ್ರಾಂಟ್ ಅನ್ನು ನಾವು ಇವತ್ತು ಅನುದಾನವನ್ನು ಇಡಬೇಕು. ಈ ರೀತಿಯ ಒಂದು ಯೋಜನೆಗಳಿಂದ ಕೇಂದ್ರ ಸರ್ಕಾರದ ಹಣವನ್ನು ಪಡೆಯುವುದಕ್ಕೆ ನಾವು ಮ್ಯಾಚಿಂಗ್ ಗ್ರಾಂಟನ್ನು ಇಡತಕ್ಕಂಥ ಹವ್ಯಾಸವನ್ನು ಬೆಳೆಸಿಕೊಂಡಿದ್ದೇವೆ. ಇವತ್ತು ಕೇಂದ್ರ ಸರ್ಕಾರದಿಂದ ಬರುವ ಅಲ್ಲಿಯ ಕಾರ್ಯಕ್ರಮಗಳಿಗೆ ನಾವು ಮ್ಯಾಚಿಂಗ್ ಗ್ರಾಂಟ್ ಇಡುವಂಥ ಒಂದು ವ್ಯವಸ್ಥೆಗಳೇನು ತಂದಿದ್ದೇವೆ, ಅದನ್ನೂ ಮೀರಿ ಇವತ್ತು ಕೃಷಿ ಕ್ಷೇತ್ರಕ್ಕೆ ಹೋಗಬೇಕಾದ ಅನಿವಾರ್ಯವಿದೆ. ಇವತ್ತು ಕೇಂದ್ರ ಸರ್ಕಾರದಿಂದ ಕೊಡುವ ಹನಿ ನೀರಾವರಿ ಇರಬಹುದು, ಕೃಷಿ ಉಪಕರಣಗಳನ್ನು ಖರೀದಿ ಮಾಡುವುದಕ್ಕೆ ಕೇಂದ್ರ ಸರ್ಕಾರ ಕೊಡುವ ಸಬ್ಸಿಡಿ ಹಣಕ್ಕೋಸ್ಕರವಾಗಿ ನಾವು ಮ್ಯಾಚಿಂಗ್ ಗ್ರಾಂಟ್ ಇಡುವುದು ಈ ಒಂದು ಹವ್ಯಾಸವನ್ನೇನು ಬೆಳೆಸಿಕೊಂಡು ಬಂದಿದ್ದೇವೆ ಇದನ್ನು ಇವತ್ತು ಬೇರೆ ರೀತಿಯಲ್ಲಿ ಪರಿವರ್ತನೆ ಮಾಡಬೇಕು, ಆ ನಿರೀಕ್ಷೆಯನ್ನು ಸರ್ಕಾರದ ಮೇಲೆ ಇಟ್ಟಿದೆ. ಇವತ್ತು ಯಾವ ಒಂದು ಕೃಷಿಗೆ ಹೆಚ್ಚಿನ ಆದ್ಯತೆಯನ್ನು ಕೊಡುತ್ತೇವೆನ್ನುವ ಮಾತನ್ನು ಹೇಳಿದ್ದಾರೆ. ನಮ್ಮ ರೈತರಿಗೆ ಹಲವಾರು ಯೋಜನೆಗಳನ್ನು ಈಗಾಗಲೇ ಅನುಷ್ಠಾನಕ್ಕೆ ತಂದಿದ್ದೇವೆಂದು ಹೇಳಿದ್ದಾರೆ, ಕೃಷಿ ಬೆಲೆ ಆಯೋಗದ ಬೆಲೆ ಆಯೋಗದ ಬಗ್ಗೆ ನಾನು ಬೆಳಿಗ್ಗೆ ಪ್ರಸ್ತಾಪ ಮಾಡಿದೆ, ಇಲ್ಲಿ ಮತ್ತೊಂದು ಪ್ರಮುಖವಾದ ಕಾರ್ಯಕ್ರಮವನ್ನು ತರುವುದಕ್ಕೆ ಹೊರಟಿದ್ದೀರಿ. ಇವತ್ತು

ಯಾವ ಒಂದು ಕೃಷಿ ಯಂತ್ರೋಪಕರಣಗಳು ಸಕಾಲದಲ್ಲಿ ರೈತರಿಗೆ ಬಾಡಿಗೆಗೆ ದೊರೆಯುವಂತಾಗಲು ಬಾಡಿಗೆ ಆಧಾರಿತ ಸೇವಾ ಕೇಂದ್ರ, ನೋಂದಾಯಿತ ಚಾರಿಟೇಬಲ್ ಟ್ರಸ್ಟ್, ಸಂಘಸಂಸ್ಥೆಗಳು, ಸ್ವಸಹಾಯ ಗುಂಪುಗಳು ಹಾಗೂ ಸರ್ಕಾರೇತರ ಸಂಸ್ಥೆಗಳ ಮೂಲಕ ಸ್ಥಾಪನೆ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು. ಅದಕ್ಕೆ ಕಾರಣ ಹೇಳಿದ್ದೀರಿ, ಇವತ್ತು ಕೂಲಿಗಾರರ ಸಮಸ್ಯೆ ಇದೆ, ಅದರ ಹಿನ್ನೆಲೆಯಲ್ಲಿ ಸಣ್ಣ ರೈತರು, ಮಧ್ಯಮ ರೈತರು ಇವರೆಲ್ಲರಿಗೂ ಕೃಷಿ ಯಂತ್ರೋಪಕರಣಗಳನ್ನು ಬಾಡಿಗೆ ಪಡೆಯತಕ್ಕಂಥ ಒಂದು ಹೊಸ ಯೋಜನೆ ಹಲವಾರು ಸಂಘ-ಸಂಸ್ಥೆಗಳು, ಎನ್ ಜಿ ಒ ಸಂಸ್ಥೆಗಳನ್ನು ಮಾಡಿಕೊಂಡು ತರುತ್ತೇವೆಂದು ಹೇಳಿದ್ದೀರಿ. ನಾನು ನೆನಪಿಸಿಕೊಳ್ಳುವುದಕ್ಕೆ ಬಯಸುತ್ತೇನೆ, ಬಹುಶಃ ನಾವೆಲ್ಲರೂ ಸಣ್ಣ ಹುಡುಗರು, ಯಾವೊಂದು Karnataka Agro Industries Corporation ಇತ್ತು, ಆ ಸಂಸ್ಥೆಯನ್ನು ಏತಕ್ಕೆ ಮುಚ್ಚಿದಿರಿ? ನಾವು ಚಿಕ್ಕ ಹುಡುಗರಾಗಿದ್ದಾಗ ಹೊಳೆನರಸೀಪುರದ ಹಳ್ಳಿಯಲ್ಲೇ ಇದ್ದಾಗ, ಚಾಕೇನಹಳ್ಳಿ ಎನ್ನುವ ಒಂದು ಹಳ್ಳಿಯಲ್ಲಿ ನಮ್ಮ ತಂದೆಯವರೇನು ಕೃಷಿಕರಾಗಿ ಭೂಮಿಯನ್ನು ಅವತ್ತು ಪಡುವಲಹಿಪ್ಪೆಯಲ್ಲಿ ಭೂಮಿಯನ್ನು ಉಳುಮೆ ಮಾಡುತ್ತಿದ್ದರು. ಆಗಲೂ ಈ ರೀತಿಯ ಒಂದು ವ್ಯವಸ್ಥೆ ನಮ್ಮ Agro Industries Corporationನಲ್ಲಿ ಇತ್ತು. ಯಂತ್ರೋಪಕರಣಗಳನ್ನು ಅಲ್ಲಿಂದ ಸರಬರಾಜು ಮಾಡುತ್ತಿದ್ದರು, ಬಾಡಿಗೆ ರೂಪದಲ್ಲೂ ಕೊಡುತ್ತಿದ್ದರು, ಹನಿ ನೀರಾವರಿಗೂ ಬಾಡಿಗೆ ರೂಪದಲ್ಲಿ ಕೊಡುತಿದ್ದಂಥ ಒಂದು ಪರಿಸ್ಥಿತಿಯನ್ನು ನಾವು ಚಿಕ್ಕ ಹುಡುಗರಾಗಿದ್ದಾಗ ಕಂಡಿದ್ದೇವೆ. ಇವತ್ತು Agro Industries Corporation ಅನ್ನು, ಬಹುಶಃ ಭೂಮಿ, ಬೆಲೆ ಬಾಳುವಂಥ ಭೂಮಿ ರೈತರ ಕೃಷಿ ಚಟುವಟಿಕೆಗೆ ಇಟ್ಟುಕೊಟ್ಟಂಥ ಭೂಮಿ, ಇವತ್ತು Agro Industries Corporation ಅನ್ನು ಮುಚ್ಚಿದ್ದೇವೆನ್ನುವ ಕಾರಣಕ್ಕೋಸ್ಕರ ನ್ಯಾಯದೇಗುಲದ ನಿವಾಸಗಳನ್ನು ಮಾಡಿದ್ದೇವೆ. ಬಹಳ ಕಷ್ಟಪಡುತ್ತಾರೆಂದು ನ್ಯಾಯದೇಗುಲದ ನಿವಾಸಗಳನ್ನಾಗಿ, ಮಾಡಿ ಇವತ್ತು Agro Industries Corporationನ ಜಾಗಗಳನ್ನು ನಿವಾಸ ಕಟ್ಟಿದ್ದೇವೆ, ಈಗ ನಾವು ಖಾಸಗಿ ವಲಯದಿಂದ ಈ ಯಂತ್ರೋಪಕರಣಗಳನ್ನು

ರೈತರಿಗೆ ಬಾಡಿಗೆಗೆ ಕೊಡಿಸತಕ್ಕಂಥ ವ್ಯವಸ್ಥೆ ಏನಿದೆ, ಎಷ್ಟರಮಟ್ಟಿಗೆ ಕಾರ್ಯಸಾಧುವಾಗಿರುವುದು, ಈ ವಿಷಯದಲ್ಲೂ ಯಾರು ಇದನ್ನು ಜಾರಿಗೊಳಿಸುವುದಕ್ಕೆ ಯಾವರೀತಿ ಸಾಧ್ಯವೆನ್ನುವ ವರದಿ ಸರ್ಕಾರಕ್ಕೆ ಕೊಟ್ಟಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಇದನ್ನು ಎಷ್ಟರಮಟ್ಟಿಗೆ ಸದುಪಯೋಗಪಡಿಸಿಕೊಳ್ಳುವುದಕ್ಕೆ ನಮ್ಮ ರೈತರಿಗೆ ಸಾಧ್ಯವಾಗುತ್ತದೆನ್ನುವುದನ್ನು ಮುಂದಿನ ದಿನಗಳಲ್ಲಿ ಕಾದುನೋಡಬೇಕಾಗುತ್ತದೆ. ಇವತ್ತು ಯಾವೊಂದು ಕೃಷಿಗೆ ಸಂಬಂಧಿಸಿದಂತೆ ನಮ್ಮ ಸರ್ಕಾರ ಬದ್ಧವಾಗಿದೆ ಎನ್ನುವ ಮಾತನ್ನೇನು ಹೇಳುತ್ತಿದ್ದೀರಿ, ಹಲವಾರು ಯೋಜನೆಗಳನ್ನು ಇವತ್ತು ಪ್ರಕಟ ಮಾಡಿದ್ದೀರಿ, ಇಲ್ಲಿ ಮುಖ್ಯಮಂತ್ರಿಗಳಿಗೆ ಕೇಳುವುದು, ಕಳೆದ ಎರಡೂ ಸದನಗಳಲ್ಲಿ ಕೃಷಿ ಕ್ಷೇತ್ರದಲ್ಲಿ ಇವತ್ತು ನಮ್ಮ ರೈತರು ಯಾವೊಂದು ಕಷ್ಟವನ್ನು ಅನುಭವಿಸುತ್ತಿದ್ದಾರೆ ಎನ್ನುವ ಬಗ್ಗೆ ಪ್ರತಿ ಸದನದಲ್ಲೂ ಎರಡೂ ಭಾಗದ ಸದಸ್ಯರು ಚರ್ಚೆ ಮಾಡಿದ್ದಾರೆ. ನಿನ್ನೆ ದಿವಸ ನಮ್ಮ ಶಿವಲಿಂಗೇಗೌಡರು ತೆಂಗು ಬೆಳೆಗಾರರ ಸಮಸ್ಯೆ ಬಗ್ಗೆ ಚರ್ಚೆ ಮಾಡಿದ್ದನ್ನು ನನ್ನ ಕೆಲವು ಸ್ನೇಹಿತರು ಹೇಳಿದರು. ಇವತ್ತು ಪತ್ರಿಕೆಯಲ್ಲಿ ಒಂದು ಸಂಪಾದಕೀಯ ಬರೆದಿದ್ದಾರೆ. ಸರ್ಕಾರಕ್ಕೆ ಯಾವೊಂದು ಗೋರಖ್ ಸಿಂಗ್ ಸಮಿತಿ ವರದಿಯನ್ನು ಕೊಟ್ಟು ಹೋದರು, ಇಲ್ಲಿ ಏನು ಹೇಳುತ್ತಾರೆಂದರೆ, ಕಳೆದ ಒಂದುವರೆ ದಶಕದಿಂದ ರಾಜ್ಯದ ತೆಂಗು ಬೆಳೆಗಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ, ನುಸಿಪೀಡೆ, ಕೆಂದು, ಹುಳು ಕಾಟ, ರಸಸೋರುವುದು ಮತ್ತಿತರ ರೋಗದಿಂದ ತೆಂಗು ಬೆಳೆ ತೀವ್ರ ಹಿನ್ನೆಡೆ ಕಂಡಿದೆ. ಮೂರು ವರ್ಷದಿಂದ ಕಾಡುತ್ತಿರುವ ಬರ ರೈತರನ್ನು ಐರಾಣ ಮಾಡಿದೆ. ಬರದಿಂದ ಒಣಗಿರುವ ತೆಂಗಿಗೆ ಪರಿಹಾರ ಕಲ್ಪಿಸುವ ಸಲುವಾಗಿ ಕೇಂದ್ರ ಸರ್ಕಾರ ಗೋರಖ್ ಸಿಂಗ್ ಸಮಿತಿ ರಚಿಸಿತ್ತು, ಈ ಸಮಿತಿ ನೀಡಿದ ವರದಿಯ ಆಧಾರದ ಮೇಲೆ ಕೇಂದ್ರ ಸರ್ಕಾರ ರೂಪಿಸಿರುವ ಪರಿಹಾರ ಸೂತ್ರ ರೈತರ ಮೂಗಿಗೆ ತುಪ್ಪ ಹಚ್ಚುವಂತಿದೆ. ಒಣಗಿರುವ ತೆಂಗಿನ ಮರಕ್ಕೆ ಪರಿಹಾರ ನೀಡುವ ಬದಲಿಗೆ ಅಂಥ ಮರ ಬದಲಿಸಿ ಪರ್ಯಾಯ ತೋಟಗಾರಿಕೆ ಗಿಡ ಬೆಳೆಸಲು ನೆರವು ನೀಡಲಾಗುತ್ತಿದೆ. ಹೆಕ್ಟೇರ್ ತೋಟದಲ್ಲಿ ಕನಿಷ್ಟ 40 ತೆಂಗಿನ ಗಿಡಗಳಿಗೆ ಮಿತಿಗೊಳಿಸಿಡಿ ರೂ12,000 ಪರಿಹಾರ ನೀಡುವ ಯೋಜನೆಯನ್ನು

ರೂಪಿಸಿದೆ ಸಮಿತಿಯ ವರದಿಯಂತೆ ಲೆಕ್ಕಾ ಹಾಕಿದರೆ ಪ್ರತಿ ಗಿಡಕ್ಕೆ 90.75 ರೂಪಾಯಿ ಪರಿಹಾರ ನೀಡಬಹುದು ಎನ್ನುವುದು ತೋಟಗಾರಿಕೆ ಇಲಾಖೆ ಅಧಿಕಾರಿಗಳ ಮಾತು. ಇದೊಂದು ಅವೈಜ್ಞಾನಿಕವಾದ ಪರಿಹಾರ ಯೋಜನೆ. ಇವತ್ತು ಒಂದು ತೆಂಗಿನ ಗಿಡವನ್ನು ಕಿತ್ತು ನಡೆಬೇಕಾದರೆ ಕನಿಷ್ಟ ₹ 500 ಬೇಕಾಗುತ್ತದೆ. ಇವರು ರೂ 90 ಕೊಡುವ recommendation ಏನಿದೆ, ಈ ರೀತಿಯ ಸರ್ಕಾರಗಳ ತೀರ್ಮಾನಗಳಿಂದ ಎಲ್ಲಿಂದ ಕೃಷಿಕನಿಗೆ ಶಕ್ತಿಯನ್ನು ಇವತ್ತು ತುಂಬುತ್ತೀರಿ? ಇವತ್ತು ಅವನಿಗೆ ಆತ್ಮಸ್ಥೈರ್ಯ ತುಂಬಿ ಕೃಷಿಕ ಆ ಭೂಮಿಯಲ್ಲಿ ನಮಗೆ ಅನ್ನ ಕೊಡುವಂಥ ಕೆಲಸ ಮಾಡುವುದಕ್ಕೆ ನಿಜಕ್ಕೂ ನಮ್ಮ ಕಾರ್ಯಕ್ರಮಗಳು ಸದುಪಯೋಗವಾಗುತ್ತಿದೆಯೇ ಎಂದು ನಾನು ಕೇಳಬಯಸುತ್ತಿದ್ದೇನೆ. ಈ ವರ್ಷವೂ ಈ ಬಜೆಟ್‌ನಲ್ಲಿ, ನಾನು ಬೆಳಿಗ್ಗೆಯಿಂದ ಹೇಳಿದ್ದೇನೆ, ಇವತ್ತು resource ನಲ್ಲಿ imbalance allocation ಏನು ಮಾಡಿಕೊಂಡಿದ್ದಾರೆ, ಇವತ್ತು ಈ planning resource ನಲ್ಲಿ imbalance ಏನಿದೆ ಬಹುಶಃ ಈ ಬಗ್ಗೆ ಸರ್ಕಾರ ಮರುಚಿಂತನೆ ಮಾಡದಿದ್ದರೆ ಕೆಲವರು ಯಾವರೀತಿಯಾಗಿ ಹೇಳಿದ್ದಾರೆ, ಒಬ್ಬರು ಹೇಳುತ್ತಾರೆ, ನಿಜಕ್ಕೂ ಆಶ್ಚರ್ಯ ಮೂಡಿರುವಂಥದ್ದು ಏನೂ ಇಲ್ಲ ಎಲ್ಲರನ್ನೂ ಸಂತುಷ್ಟಗೊಳಿಸುವ ಮತ್ತು ಸಿಕ್ಕಷ್ಟು ಬಾಚಿಕೊಳ್ಳುವ ಎಂಬ ಧೋರಣೆ ಮುಂದುವರೆದ ಭಾಗಗಳಾಗಿವೆ ಎಂದು ಈ ಒಂದು ಬಜೆಟ್ ಬಗ್ಗೆ ಹೇಳಿದ್ದಾರೆ. ಆಸಕ್ತಿಯನ್ನು ಸುಸ್ಥಿರ ಬೆಳವಣಿಗೆ ಪ್ರಮಾಣ ಕಾಯ್ದುಕೊಳ್ಳುವುದನ್ನು ತೋರಿಸಿಲ್ಲ. ಇಲ್ಲಿ ಏನು ಹೇಳುತ್ತಾರೆಂದರೆ, ಸಾಧ್ಯವಾದಷ್ಟು ಹೆಚ್ಚಿನ ಕೊಡುಗೆ ಘೋಷಿಸುವ ಮೂಲಕ ಕೊಡುಗೈ ದೊರೆ ಎನಿಸಿಕೊಂಡ ಮುಖ್ಯಮಂತ್ರಿಗಳು ರಿಯಾಯಿತಿ ಮತ್ತು ಕೊಡುಗೆಯಲ್ಲಿ ತೋರಿಸಿದ ಆಸಕ್ತಿಯನ್ನು ಸುಸ್ಥಿರ ಪ್ರಮಾಣ ಕಾಯ್ದುಕೊಳ್ಳುವತ್ತ ತೋರಿಸಿಲ್ಲ. ಸಿದ್ದರಾಮಯ್ಯನವರು ಈ ದಿಸೆಯಲ್ಲಿ ಕಠಿಣ ನಿರ್ಧಾರ ಕೈಗೊಳ್ಳಬೇಕಾಗಿತ್ತು. ಆ ತಜ್ಞರು ಹೇಳುತ್ತಾರೆ, ನಿರೀಕ್ಷಿತ ವರಮಾನಕ್ಕಿಂತ ನೈಜ ವರಮಾನದಲ್ಲಿ ಕಂಡುಬರುವ ಅಂದಾಜು ಶೇ.30% ಕೊರತೆ ನಿಜವಾದ ಆತಂಕಕ್ಕೆ ಕಾರಣವಾಗಿದೆ. ಪ್ರಸ್ತುತ ಹಣಕಾಸು ವರ್ಷದಲ್ಲಿ ವರಮಾನ ಸಂಗ್ರಹ ನಿರೀಕ್ಷೆಗಿಂತ ತುಂಬಾ ಕಡಿಮೆ ಪ್ರಮಾಣದಲ್ಲಿದೆ, ಇದೆಲ್ಲಾ

ಹೇಳುತ್ತಾರೆ. ಇವತ್ತು ಚುನಾವಣೆಗೋಸ್ಕರವಾಗಿ ಬಜೆಟ್‌ಅನ್ನು ಕೊಡಬೇಕೆನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ನಾವಿದ್ದರೂ ಅದನ್ನೇ ಮಾಡುತ್ತೇವೆ, ರಮೇಶ್ ಕುಮಾರ್ ಅವರು, ಹಿಂದೆ ಇದ್ದ ಸರ್ಕಾರಗಳು ಜನಪ್ರಿಯ ಯೋಜನೆಗಳನ್ನು ಅನುಷ್ಠಾನಕ್ಕೆ ತರುವುದಕ್ಕೆ ಹೋದರು ಎಂದು ಹೇಳಿದರು. ಸಮಿಶ್ರ ಸರ್ಕಾರದಲ್ಲಿ ನನಗೂ ಅನುಭವವಾಗಿದೆ, ನಾವು ಹಲವಾರು ಜನಪ್ರಿಯ ಕಾರ್ಯಕ್ರಮಗಳನ್ನು ತಂದೇವು. ಯಡಿಯೂರಪ್ಪನವರು ಸದನದಲ್ಲಿ ಇಲ್ಲ ನಾನು ತರಬೇಕಾದರೆ, ಉಪ ಮುಖ್ಯಮಂತ್ರಿಗಳು ಆಗ ಆರ್ಥಿಕ ಸಚಿವರಾಗಿದ್ದರು. ನಾವು ಸೈಕಲ್ ಕೊಡುವ ಯೋಜನೆ, ಭಾಗ್ಯಲಕ್ಷ್ಮಿ ಯೋಜನೆ, ಇದೆಲ್ಲಾ ತರಬೇಕಾದರೆ ಅವರು ಒಂದು ಮಾತನ್ನು ಹೇಳುತ್ತಿದ್ದರು, ಈ ಯೋಜನೆಯಿಂದ ಇಷ್ಟು ಲಕ್ಷ ಕುಟುಂಬಗಳಿಗೆ ಅನುಕೂಲವಾಗುತ್ತದೆ, ಇಷ್ಟು ಕುಟುಂಬಗಳು ನಮ್ಮ ಪಕ್ಷದ ಮತದಾರರಾಗಬಹುದಲ್ಲವೇ ಎಂದು ನನ್ನ ಜೊತೆ ಚರ್ಚೆ ಮಾಡುತ್ತಿದ್ದರು. ಅವರು ನನ್ನ ಜೊತೆ ಚರ್ಚೆ ಮಾಡುವರು, ನಾವು ಆ ಸಂದರ್ಭದಲ್ಲಿ ಸಮಾಜದಲ್ಲಿರತಕ್ಕಂತಹ ಕೆಲವು ಪರಿಸ್ಥಿತಿಗಳನ್ನು ಗಮನಹರಿಸಿ ಕೆಲವು ಜನಪ್ರಿಯ ಯೋಜನೆಗಳನ್ನು ತರುವುದಕ್ಕೆ ಪ್ರಯತ್ನ ಪಟ್ಟೆವು. ಆದರೆ ನಮ್ಮ ಕಾಲದಲ್ಲಿ ನಾವು ಸರ್ಕಾರದ ಅನುತ್ಪಾದನಾ ವೆಚ್ಚವನ್ನು ಇತಿಮಿತಿಯಲ್ಲಿಟ್ಟುಕೊಂಡು ಸರ್ಕಾರದ ಆಸ್ತಿಯನ್ನು ದೊಡ್ಡ ಮಟ್ಟದಲ್ಲಿ ನಾವು create ಮಾಡುತಕ್ಕಂಥದ್ದರಲ್ಲಿ ಶ್ರಮ ಪಟ್ಟಿದ್ದೇವೆ. ಅದು ಯಾರ್‍ಯಾರ ಕೊಡುಗೆ ಏನೆಂದು ನಾನು ಇಲ್ಲಿ ನನ್ನ ಬೆನ್ನು ನಾನು ತಟ್ಟಿಕೊಳ್ಳುವುದಕ್ಕೆ ಹೋಗುವುದಿಲ್ಲ. ನಾನು ಆಗಲೇ ಹೇಳಿದೆ, ನಮ್ಮ GDP growth ನಾನು ಮುಖ್ಯ ಮಂತ್ರಿಯಾಗಿದ್ದಾಗ 12.5ಗೆ ನಾವು ಹೋದಂತಹ ಘಟನೆಗಳು ಏನು ಆಗಿವೆ highest reach point ಅದೇ ನಮ್ಮಲ್ಲಿ ಆಗಿರುವುದು ಅವತ್ತಿನ ದಿನಗಳಲ್ಲಿ. ಈಗ ಅದೆಲ್ಲಾ decrease ಆಗಿದೆ. ಅವತ್ತು ನಾವು 39,000 ಕೋಟಿ ರೂ. ಬಜೆಟ್ ಕೊಟ್ಟಿದ್ದೆವು. 1,36,000 ಕೋಟಿ ರೂಪಾಯಿ ಬಜೆಟ್‌ಗೆ ಹೋಗಿದ್ದೇವೆ. ಆದರೆ ಇವತ್ತು ಬಜೆಟ್ ಗಾತ್ರವನ್ನು ನಾವು ಬೃಹದೀಕರಿಸಿದ ತಕ್ಷಣ ಆಗಿರತಕ್ಕಂತಹ ಪರಿಣಾಮಗಳು ಏನು? ಇದನ್ನು ಸರ್ಕಾರ ಯೋಚನೆ ಮಾಡಬೇಕು. ನಮ್ಮ

ಕಾಲದಲ್ಲಿ ಅವತ್ತು ನಾವು ತೆಗೆದುಕೊಂಡ ತೀರ್ಮಾನಗಳು, ಒಂದೇ ವರ್ಷ 1400 ಹೈಸ್ಕೂಲ್‌ಗಳು, 189 ಪ್ರಥಮ ದರ್ಜೆ ಕಾಲೇಜುಗಳು, 500 ಜೂನಿಯರ್ ಕಾಲೇಜುಗಳನ್ನು ತರೆದಿದ್ದೇವೆ. ಬರೀ ಕಾಲೇಜ್ ತೆರೆಯದೆ 50,000 ಶಿಕ್ಷಕರನ್ನು ಹಾಗೂ ಅಧ್ಯಾಪಕರನ್ನು ನೇಮಕ ಮಾಡಿದ್ದೇವೆ. ಇದ್ದಂತಹ 39,000 ಕೋಟಿ ಬಜೆಟ್‌ನಲ್ಲಿ ಒಂದೊಂದು ಕಾಲೇಜಿಗೆ ಎರಡು ಕೋಟಿ ರೂಪಾಯಿಗಳ ಅನುದಾನ ಕೊಟ್ಟೆವು. ಇವತ್ತು ನಾವು ಒಂದು ಲಕ್ಷ ಕೋಟಿ ಮೀರಿದ್ದೇವೆ, ಎಷ್ಟೆಷ್ಟು ವರ್ಷದಲ್ಲಿ ಎಷ್ಟೆಷ್ಟು ಕಾಲೇಜುಗಳನ್ನು ಪ್ರಾರಂಭ ಮಾಡಿದ್ದಾರೆ, ಎಷ್ಟೆಷ್ಟು ಹೈಸ್ಕೂಲ್‌ಗಳನ್ನು ಪ್ರಾರಂಭ ಮಾಡಿದ್ದಾರೆ, ಎಷ್ಟು ಶಿಕ್ಷಕರನ್ನು ನೇಮಕ ಮಾಡಿಕೊಂಡಿದ್ದಾರೆ, ಈಗ ಏನೋ ಹೇಳಿದ್ದಾರೆ 11,000, 12,000 ಶಿಕ್ಷಕರನ್ನು ನೇಮಕ ಮಾಡುತ್ತೇವೆಂದು ಹೇಳಿದ್ದೀರಿ, ಸಂತೋಷ ಅದಕ್ಕೆ ಅಭಿನಂದಿಸುತ್ತೇನೆ. ಯೋಜನಾ ಗಾತ್ರ ನಾವು ಬೃಹದೀಕರಿಸಿ ದೊಡ್ಡ ಮಟ್ಟದಲ್ಲಿ ತೆಗೆದುಕೊಂಡು ಹೋದ ತಕ್ಷಣ ನಾವು ಇಲ್ಲಿ ಅಭಿವೃದ್ಧಿಯನ್ನು ಕಾಣುತ್ತಿಲ್ಲ. ಎಲ್ಲೋ ಒಂದು ಕಡೆ ನಾವು ಎಡವುತ್ತಿದ್ದೇವೆ. ಆ ದೃಷ್ಟಿಯಿಂದ ಇವತ್ತು ಯಾವ ಒಂದು ಕೃಷಿ ಕ್ಷೇತ್ರದಲ್ಲೂ ಈ ಸರ್ಕಾರ ಎಲ್ಲೋ ಒಂದು ಕಡೆ ರೈತರನ್ನು ಕಡೆಗಣಿಸತಕ್ಕಂತಹ ಕೆಲಸಕ್ಕೆ ಏನು ಹೊರಟಿದ್ದಾರೆ, ನಾನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತರುವಂಥದ್ದು ಇವತ್ತು ನೀರಾವರಿ ಮತ್ತು ನಮ್ಮ ಇಂಧನ ಇಲಾಖೆಯಲ್ಲಿ ಹೆಚ್ಚಿನ ಹಣವನ್ನು ವಿನಿಯೋಗ ಮಾಡುವುದರ ಮುಖಾಂತರ, ಒಂದು ಕಡೆ ರೈತರಿಗೆ ನೀರಿನ ಅವಶ್ಯಕತೆ ಇದೆ, ಎತ್ತಿನ ಹೊಳೆ ಯೋಜನೆ ಮಾಡಿ ಏನೋ ಒಂದು ಘೋಷಣೆ ಮಾಡಿದ್ದೀರಿ. ಈ ವರ್ಷ ಎಷ್ಟು ಹಣ ಇಟ್ಟಿದ್ದೀರಿ ಎಂದು ಹೇಳಲಿಲ್ಲ. ಹೊಸ ಕ್ರಿಯಾ ಯೋಜನೆ ಮಾಡಿಕೊಂಡಿದ್ದೇವೆಂದು ಹೇಳಿದ್ದಾರೆ. 8,453 ಕೋಟಿಯಿಂದ 12,900 ಕೋಟಿಗೆ ಏರಿಕೆ ಮಾಡಿಕೊಂಡಿದ್ದಾರೆ. ಕೆಲಸವೇ ಪ್ರಾರಂಭವಾಗಿಲ್ಲ. ಇನ್ನು DPR ಆಗಿಲ್ಲ, ಇನ್ನು ಕೆಲಸ ಪ್ರಾರಂಭಮಾಡಿ ಅದನ್ನು ಎಲ್ಲಿಗೆ ತೆಗೆದುಕೊಂಡು ಹೋಗುತ್ತಾರೋ ನನಗೆ ಗೊತ್ತಿಲ್ಲ. ಇವತ್ತು ಈ ಸರ್ಕಾರಕ್ಕೆ ನಾನು ಈಗಲೂ ಹೇಳತಕ್ಕಂಥದ್ದು ಏನು 18,500 ಸಾವಿರ ಕೋಟಿ ರೂ. ಸಬ್ಸಿಡಿಯನ್ನು ಇವತ್ತು ಈ ಸರ್ಕಾರ

ಕೊಡುವುದಕ್ಕೆ ಏನು ಹೊರಟಿದೆ, ಸುಮ್ಮನೆ ನಾವು ಕಾಮನ್ ಆಗಿ ಯೋಚನೆ ಮಾಡ್ಡೋಣ. ನಾವು ಶೃಂಗೇರಿ ಶಾರದಾಂಬೆ ದೇವರನ್ನು ನೋಡುವುದಕ್ಕೆ ಹೋಗುತ್ತೇವೆ ಅಲ್ಲಿ ಆ ಕೊಳದಲ್ಲಿ ಮೀನುಗಳಿವೆ. ಅಲ್ಲಿಗೆ ಹೋದಂತಹ ಜನ ಖುಷಿಗೆ 5 ರೂ. 10 ರೂ. ಪುರಿ ತೆಗೆದುಕೊಂಡು ನೀರಿಗೆ ಹಾಕಿದ ತಕ್ಷಣ ಮೀನುಗಳು ಒಂದು ಖುಷಿಯಾಗಿ ತಿನ್ನುತ್ತವೆ. ಒಂದು ಐದು ನಿಮಿಷ ನಮಗೂ ಸಂತೋಷವಾಗುತ್ತದೆ. ಇಲ್ಲಿ ನೀವು ಕೊಡತಕ್ಕಂತಹ ಸಬ್ಸಿಡಿ ಹಣ ಅದೇ ಆಗಿದೆ. ತಾತ್ಕಾಲಿಕವಾಗಿ ನಾವು ಈ ರಾಜ್ಯದ ಜನ ಕಷ್ಟದಲ್ಲಿರುವವರು ಹಾಗೂ ಹಸಿದ ಜನತೆಗೆ ಇವತ್ತು ಏನು ಈ ಕಾರ್ಯಕ್ರಮಗಳನ್ನು ಕೊಡುತ್ತಿದ್ದೇವೆ ಮಾನ್ಯ ರಮೇಶ್ ಕುಮಾರ್‌ರವರು ಬೆಳಿಗ್ಗೆ ಹೇಳಿದರು ಈ ಕಾರ್ಯಕ್ರಮಗಳು ಶಾಶ್ವತವಾಗಿ ಇರುತ್ತವೆಯೇ, ಮುಂದೆ ಬರತಕ್ಕಂತಹವರು ಮತ್ತೇ ಇನ್ನೇನೋ ಬದಲಾವಣೆ ಮಾಡಬಹುದು, ಅವರು ವಿಷಯವನ್ನು ಸೂಕ್ಷ್ಮವಾಗಿ ಹೇಳಿದ್ದಾರೆ, ಹೌದು ಸರ್ಕಾರದ ಜವಾಬ್ದಾರಿ ಇದೆ ಯಾವುದೇ ರೀತಿಯ ದುಡಿಮೆ ಇಲ್ಲದೆ ಇರತಕ್ಕಂತಹ, ದುಡಿಮೆ ಇಲ್ಲದೆ ಇರುವವರು ಆ ಕುಟುಂಬವನ್ನು ನಿರ್ವಹಣೆ ಮಾಡುವುದಕ್ಕೆ ಸಾಧ್ಯವಾಗದೆ ಇರತಕ್ಕಂತಹ ಬಡ ವರ್ಗದ ಜನತೆ ಏನಿದ್ದಾರೆ ಅವರಿಗೆ ಕೆಲವು ಕಾರ್ಯಕ್ರಮಗಳನ್ನು ಕೊಡಬೇಕು ಅದು ಸರ್ಕಾರದ ಕರ್ತವ್ಯ. ಅದರ ಜೊತೆಯಲ್ಲಿಯೇ ನಾವು ಪ್ಯಾರಲಲಿ ಶಾಶ್ವತವಾದ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತಂದು ಯಾರು ಎರಡು ಹೊತ್ತಿನ ಅನ್ನಕ್ಕೆ ಗತಿ ಇಲ್ಲದೇ ಇರುವ ಜನ ಎಂದು ಹೇಳಿ ನಾವು ಹಸಿದ ಹೊಟ್ಟೆಗೆ ಅನ್ನ ಕೊಡಬೇಕೆಂದು ಹೇಳುತ್ತೇವೆ ಇದು ಬಹಳ ದಿವಸಗಳವರೆಗೆ ನೀವು ಮುಂದುವರೆಸುವುದಿಲ್ಲ. ಆ ಎರಡು ಹೊತ್ತಿನ ಊಟಕ್ಕೆ ಪರಿತಪಿಸತಕ್ಕಂತಹ ಕುಟುಂಬಗಳು ಆರ್ಥಿಕವಾಗಿ ಇವತ್ತು ಯಾವ ರೀತಿ ಅವರನ್ನು ಸಧೃಡವಾಗಿ ಬೆಳೆಸಬೇಕು, ಅವರಿಗೆ ಯಾವುದಾದರೂ ಒಂದು ಉದ್ಯೋಗ ಕೊಡಬೇಕು. ಇದರ ಬಗ್ಗೆ ನಾವು ಏನು ಇಲ್ಲಿ ಶಾಶ್ವತವಾದ ಕಾರ್ಯಕ್ರಮಗಳನ್ನು ಕೊಡುತ್ತಿದ್ದೇವೆ? ಇದರ ಬಗ್ಗೆ ಸದನ ಚಿಂತನೆ ಮಾಡಬೇಕು. ಟೀಕೆ ಮಾಡಬೇಕು ಎನ್ನುವುದಕ್ಕೆ ನಾನು ಇಲ್ಲಿ ನಿಂತು ಈ ವಿಷಯಗಳನ್ನು ಪ್ರಸ್ತಾಪ ಮಾಡುತ್ತಿಲ್ಲ. ನಾವೆಲ್ಲರೂ ಯೋಚನೆ ಮಾಡಬೇಕಾದ

ಪರಿಸ್ಥಿತಿ ಬಂದಿದೆ. ಅನಿವಾರ್ಯ ಇದು. ಸ್ವಾತಂತ್ರ್ಯ ಬಂದು 67 ವರ್ಷಗಳಾಗಿವೆ. ಇವತ್ತೂ ನಾವು ಜನಗಳನ್ನು ಈ ರೀತಿಯ ಕಾರ್ಯಕ್ರಮಗಳ ಮುಖಾಂತರ ಅವರನ್ನು ಭಿಕಾರಿಗಳಾಗಿ ಇಡುತ್ತೇವೋ, ಇಲ್ಲ ಅವರನ್ನೇನಾದ್ರೂ ಆರ್ಥಿಕವಾಗಿ ಶಕ್ತಿಯನ್ನು ತುಂಬತಕ್ಕಂತಹ ಯೋಜನೆಗಳನ್ನು ರೂಪಿಸಿ ಪ್ರತಿ ಕುಟುಂಬಕ್ಕೆ ಕೊಡತಕ್ಕಂತಹ ಕಾರ್ಯಕ್ರಮಗಳನ್ನು ತರಬೇಕು. ಮಾನ್ಯ ಸಿದ್ದರಾಮಯ್ಯನವರಿಂದ ನಾನು ಇಂತಹ ಬಜೆಟ್ ಅನ್ನು ನಿರೀಕ್ಷೆ ಮಾಡಿರಲಿಲ್ಲವೆಂದು ಹೇಳಿದೆ. ಅವರಿಗೆ ನಮ್ಮೆಲ್ಲರಿಗಿಂತ ಅನುಭವ ಇದೆ. ಅನುಭವ ಇರತಕ್ಕಂತಹ ಈ ರಾಜ್ಯದ ಹಲವಾರು ನಾಯಕರ ಜೊತೆ ಅವರು ಕೆಲಸ ಮಾಡಿದ್ದಾರೆ. ನಾನು ಬೆಳಿಗ್ಗೆ ಹೇಳಿದೆ, ನೀರಾವರಿ ಯೋಜನೆಗೆ ಐದು ವರ್ಷಗಳಲ್ಲಿ ನಮ್ಮ ರೈತರಿಗೆ ಕೃಷ್ಣ ನೀರಿನ ಬಳಕೆ ಮಾಡಿಕೊಳ್ಳಬೇಕಾಗಿತ್ತು ಅವತ್ತು ಯಾವ ರೀತಿಯಲ್ಲಿ ಸಮಯ ವ್ಯರ್ಥ ಮಾಡದೆ ಯುದ್ಧೋಪಾದಿಯಲ್ಲಿ 136 ಹಳ್ಳಿಗಳನ್ನು ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಒಳಪಡಿಸಿ ಆ ಭೂಮಿಗಳನ್ನು ವಶಪಡಿಸಿಕೊಂಡು ನಾವೇನು ಕಾಲುವೆಗಳನ್ನು ನಿರ್ಮಾಣ ಮಾಡಬೇಕಾಗಿತ್ತು, ಅವತ್ತು ತೆಗೆದುಕೊಂಡಂತಹ ನಿದರ್ಶನಗಳು ನಮ್ಮ ಮುಂದಿವೆ. ನಾನು ಮಾನ್ಯ ದೇವೇಗೌಡರಿಗೆ certificate ಕೊಡಬೇಕೆಂದು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಅವತ್ತು ಅವರು ತೆಗೆದುಕೊಂಡಂತಹ ನಿರ್ಧಾರಗಳಲ್ಲಿ ಮಾನ್ಯ ಸಿದ್ದರಾಮಯ್ಯನವರ ಪಾತ್ರ ಇದೆ. ಅವರಿಗೆ ಅನುಭವ ಇದೆ. ಇವತ್ತು ನೀರಾವರಿ ವಿಷಯದಲ್ಲಿ ನಾವೇನಾದರೂ ನಿರ್ಲಕ್ಷ್ಯತನದಿಂದ ಹೋದರೆ ಕಳೆದು ಹೋದದ್ದನ್ನು ನಾವು ಮತ್ತೆ ಪಡೆಯುವುದಕ್ಕೆ ಸಾಧ್ಯವಿಲ್ಲ. ಅದರ ದೃಷ್ಟಿಯಿಂದಲೇ ನಾನು ಇವತ್ತು ಸರ್ಕಾರಕ್ಕೆ ಅನುತ್ಪಾದನ ವೆಚ್ಚಗಳನ್ನು ಸ್ವಲ್ಪ ಕಡಿಮೆ ಮಾಡಿ. ಅನ್ನ ಭಾಗ್ಯ ಕೊಡತಕ್ಕಂತಹ ವಿಷಯದಲ್ಲಿ ನಮ್ಮದು ವಿರೋಧ ಇಲ್ಲ. 30 ಕೆ.ಜಿ. ಅಕ್ಕಿ ಯಾರು ಕೇಳಿದ್ದರು? 10 ರಿಂದ 15 ಕೆ.ಜಿ. ಅಕ್ಕಿ ಕೊಟ್ಟಿದ್ದರೆ ಸಾಕಿತ್ತು. ಇವತ್ತು 30 ಕೆ.ಜಿ. ಅಕ್ಕಿ ನೀವೇನು ಕೊಟ್ಟಿದ್ದೀರಿ ಮಾಹಿತಿಗಳು ನಿಮಗೂ ಗೊತ್ತಿರುತ್ತವೆ. 30 ಕೆ.ಜಿ. ಅಕ್ಕಿಯನ್ನು ಎಲ್ಲ ಕುಟುಂಬಗಳು ಉಪಯೋಗ ಮಾಡುತ್ತಿಲ್ಲ. ಅದನ್ನು ಯಾವುದೇ ಹೋಟೆಲ್ ಮಾಲೀಕರುಗಳಿಗೆ ಹಾಗೂ

ಕಾಳಸಂತೆಕೋರರಿಗೆ ನ್ಯಾಯ ಬೆಲೆ ಅಂಗಡಿಯಿಂದ 20 ಕೆ.ಜಿ. ಅಕ್ಕಿ ಹೋಗುತ್ತಿದೆ. ನಾನು ಕಳೆದ ಸಲ ಭಾಷಣ ಮಾಡುವಾಗ ಮಾನ್ಯ ಸಿದ್ದರಾಮಯ್ಯನವರು ಹೇಳಿದರು. ತಲಾವಾರು 4 ಕೆ.ಜಿ. ಅಕ್ಕಿ ಕೊಡುವ ತೀರ್ಮಾನವನ್ನು ನೀವು ಸಮ್ಮಿಶ್ರ ಸರ್ಕಾರದಲ್ಲಿ ಮಾಡಿದಿರಿ ಎಂದು ಹೇಳಿದರು. ಅದು ನಾನು ಮಾಡಲಿಲ್ಲ. ನನಗಿಂತ ಮುಂಚೆ ಅವರೇ ಉಪ ಮುಖ್ಯ ಮಂತ್ರಿಗಳಾಗಿದ್ದರು. ಮಾನ್ಯ ಮಹಾದೇವಪ್ರಸಾದ್‌ರವರು ಆಹಾರ ಸಚಿವರಾಗಿದ್ದರು. ಮಾನ್ಯ ಧರ್ಮ್‌ಸಿಂಗ್‌ರವರು ಮುಖ್ಯ ಮಂತ್ರಿಗಳಾಗಿದ್ದರು. ಆ ಪ್ರಪೋಸಲ್ ಆಗ ಅವರೇ ತಂದಂಥದ್ದು. 2005–06ರ ಬಜೆಟ್‌ನಲ್ಲಿ ಅವರೇ ಹೇಳಿದ್ದಾರೆ. ಅದನ್ನು ಓದಿದರೆ ಗೊತ್ತಾಗುತ್ತದೆ. ತಲಾವಾರು ಅಕ್ಕಿ ವಿತರಣೆ ಮಾಡಬೇಕಾಗುತ್ತದೆ ಇದು ಜಾಸ್ತಿಯಾಯಿತು ಎಂದು ಹೇಳಿದ್ದಾರೆ. ಈಗ 30 ಕೆ.ಜಿ. ಅಕ್ಕಿ ಕೊಟ್ಟು ಬಿಟ್ಟಿರಿ. ಅದು ಹಿಂದಕ್ಕೆ ಪಡೆಯುವುದಕ್ಕೆ ನಿಮಗೆ ಕಷ್ಟ ಇದೆ ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಇಂತಹ ಪರಿಸ್ಥಿತಿಯಲ್ಲಿ ಜನರಿಗೆ ತೊಂದರೆಯಾಗದ ರೀತಿಯಲ್ಲಿ ಬಡವರ ಬಗ್ಗೆ ಒಳ್ಳೆಯ ಉದ್ದೇಶ ಇಟ್ಟುಕೊಂಡು ನೀವು ಮಾಡಿದ್ದೀರಿ ಅವರಿಗೆ ತೊಂದರೆಯಾಗದೆ ಇರತಕ್ಕಂತಹ ರೀತಿಯಲ್ಲಿ ಮಾಡಿ. ಇವತ್ತೇನು 4800 ರಿಂದ 4900 ಕೋಟಿ ರೂ. ಸರ್ಕಾರದ ಮೇಲೆ ಹೊರೆಯನ್ನು ಹೊತ್ತುಕೊಂಡಿದ್ದೀರಿ, ನಿಜವಾಗಿಯೂ ಅವರಿಗೆ 30 ಕೆ.ಜಿ. ಅಕ್ಕಿ ಬೇಕಿದೆಯೇ ಎಂದು ವಾಸ್ತವಾಂಶಕ್ಕೆ ಒಂದು ವರದಿ ತೆಗೆದುಕೊಳ್ಳಿ, ಅದನ್ನು ಕಡಿತ ಮಾಡಿ. ನಾವು ಅದಕ್ಕೆ ಬೆಂಬಲ ಕೊಡುತ್ತೇವೆ. ನಾವು ಅದನ್ನು ಟೀಕೆ ಮಾಡುವುದಕ್ಕೆ ಹೋಗುವುದಿಲ್ಲ. ಅಲ್ಲಿ ಬಂದಂತಹ ಹಣವನ್ನು ನೀರಾವರಿ ಯೋಜನೆಗಳಿಗೆ ಉಪಯೋಗ ಮಾಡಿಕೊಳ್ಳಿ. ಆಂಧ್ರದವರು ಹಾಗೂ ಮಹಾರಾಷ್ಟ್ರದವರು ನೀರಾವರಿ ಇಲಾಖೆ ಹಾಗೂ ಇಂಧನ ಇಲಾಖೆ ವಿಷಯದಲ್ಲಿ ಯಾವ ರೀತಿಯಲ್ಲಿ ಅವರು ದಾಪುಗಾಲು ಹಾಕಿ ಹೋಗಿದ್ದಾರೆ, ನಮ್ಮಲ್ಲಿ ಎಲ್ಲಾ ರೀತಿಯ resources ಇದೆ. ಆದರೆ ನಮಗೆ ಬದ್ಧತೆ ಬೇಕಿದೆ. ಆ ಕಮಿಟ್‌ಮೆಂಟ್ ಅನ್ನು ಇವತ್ತು ಸರ್ಕಾರ ತೋರಿಸಬೇಕು ಎನ್ನುವುದನ್ನು ನಾನು ಇವತ್ತು ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳುವುದಕ್ಕೆ ಬಯಸುತ್ತೇನೆ. ತೆಂಗಿನ ವಿಷಯದಲ್ಲಿ ಹಲವಾರು ಚರ್ಚೆಗಳನ್ನು

ನಮ್ಮ ಸದಸ್ಯರುಗಳು ಸದನದಲ್ಲಿ ಮಾಡಿದ್ದಾರೆ. ಮಾನ್ಯ ಜಯಚಂದ್ರರವರು ನೀವು ಕೃಷಿಕರ ಬಗ್ಗೆ ಬಹಳ ಅಭಿಮಾನ ಇಟ್ಟುಕೊಂಡಿರುವವರು. ಗೌರವ ಇಟ್ಟುಕೊಂಡಿರುವವರು. ನೀವೆಲ್ಲಾ ಅಲ್ಲಿದ್ದು ಹಲವಾರು ಉಪಸಮಿತಿಗಳಲ್ಲಿ ನೀವೇ chairman ಇದ್ದೀರಿ. ಯಾವ್ಯಾವ ವಿಷಯಗಳನ್ನು ನಾವು ಇಲ್ಲಿ ಪ್ರಸ್ತಾಪ ಮಾಡಿದ್ದೇವೆ, ದಯವಿಟ್ಟು ಎಷ್ಟರ ಮಟ್ಟಿಗೆ ಇವತ್ತು ಆ ಕೃಷಿಕರನ್ನು ನಂಬಿಕೊಂಡಿದ್ದೀರಿ ಅವನಿಗೆ ಇವತ್ತು ಸ್ಥೈರ್ಯ ತುಂಬುತ್ತಿದ್ದೀರಿ, ನಾನು ಬೆಳಗಾವಿ ಅಧಿವೇಶನದಲ್ಲಿ ಪ್ರತಿಯೊಂದು ವಿಷಯ ಪ್ರಸ್ತಾಪ ಮಾಡಿದ್ದೇನೆ. ದಾಳಿಂಬೆ ಬೆಳೆಗಾರರು, ದ್ರಾಕ್ಷಿ ಬೆಳೆಗಾರರು, ತೆಂಗು ಬೆಳೆಗಾರರು, ಅಡಿಕೆ ಬೆಳೆಗಾರರು ಇವರಿಗೆ ಪ್ರತಿಯೊಂದಕ್ಕೂ ಕೇಂದ್ರ ಸರ್ಕಾರದ ಕಡೆ ಕೈ ತೋರಿಸಿಕೊಂಡು ಕುಳಿತುಕೊಂಡರೆ ಎಷ್ಟು ವರ್ಷ ನಮ್ಮ ರೈತರು ಕಾಯಬೇಕು, ನೀವು ಎಷ್ಟು ವರ್ಷ ಕಾಯುತ್ತೀರಿ? ಅಡಿಕೆ ಬೆಳೆಗೆ ಹಳದಿ ರೋಗಕ್ಕೆ ತುತ್ತಾದವರಿಗೆ ಗೋರಖ್ ಸಿಂಗ್‌ರವರು ವರದಿ ಕೊಟ್ಟು ನಾಲ್ಕು ವರ್ಷಗಳಾಗಿವೆ. ರೈತರು ಇನ್ನೂ ಅಲ್ಲಿ ಬೀದಿಯಲ್ಲಿ ಪ್ರತಿಭಟನೆ ಮಾಡುತ್ತಲೇ ಇದ್ದಾರೆ. ಗೋರಾಖ್ ಸಿಂಗ್‌ರವರು ಕೊಟ್ಟಿರತಕ್ಕಂತಹ ವರದಿ ಆಧಾರದ ಮೇಲೆ ಹೋದರೆ 300 ರಿಂದ 400 ಕೋಟಿ ರೂಪಾಯಿ ವೆಚ್ಚವಾಗಬಹುದು. 1,36,000 ಕೋಟಿ ರೂ. ಬಜೆಟ್ ಎಂದು ನಾವು ಇಲ್ಲಿ ಹೇಳುತ್ತೇವೆ. ಆ ರೈತನಿಗೆ 300 ಕೋಟಿ ರೂ. ಕೊಡತಕ್ಕಂತಹ ಸಾಮರ್ಥ್ಯ ರಾಜ್ಯಸರ್ಕಾರಕ್ಕೆ ಇಲ್ಲವೇ? ನಾವು ನಮ್ಮ ಕಾಲದಲ್ಲಿ 39,000 ಕೋಟಿಯಲ್ಲಿ 2,500 ರೂ.ಗಳನ್ನು ರೈತರ ಸಾಲ ಮನ್ನಾ ಮಾಡಿದೆವು. ನಾವು ಸಾಲ ಮನ್ನಾ ಎಂದು ಘೋಷಣೆ ಮಾಡಿದ್ದಷ್ಟೇ ಅಲ್ಲ, ಅದೇ ವರ್ಷ ಇಂಪ್ಲಿಮೆಂಟ್ ಮಾಡಿ ಅದೇ ವರ್ಷ ಹಣವನ್ನು ರೈತರ ಪರವಾಗಿ ಸಹಕಾರಿ ಬ್ಯಾಂಕ್‌ಗಳಿಗೆ ಕಟ್ಟಿದೆವು. ಕಬ್ಬು ಬೆಳೆದಂಥ ರೈತರು ಮಾರಾಟ ಮಾಡುವುದಕ್ಕೆ ಆಗಲಿಲ್ಲ. 39 ಸಾವಿರ ಕೋಟಿ ರೂ.ಗಳ ಬಜೆಟ್‌ನಲ್ಲಿ ಅವತ್ತು ಕಬ್ಬು ಬೆಳೆದು ಮಾರಾಟ ಮಾಡುವುದಕ್ಕೆ ಹೋಗದೇ ಇದ್ದಂಥ ರೈತರಿಗೆ 238 ಕೋಟಿ ರೂ.ಗಳ ಹಣವನ್ನು ಕೊಟ್ಟಿದ್ದೇವೆ. ಇವತ್ತು ನೀವು 1 ಲಕ್ಷದ 36 ಸಾವಿರ ಕೋಟಿ ರೂ.ಗಳ ಬಜೆಟ್ ಅನ್ನು ಕೊಡುತ್ತಿರುವ ನಿಮಗೆ ಏಕೆ ಕಷ್ಟವಾಗುತ್ತಿದೆ? ದ್ರಾಕ್ಷಿ ಬೆಳೆಗಾರರು 500

ಕೋಟಿ ರೂ.ಗಳ ಸಾಲವನ್ನು ಮಾಡಿಕೊಂಡಿದ್ದಾರೆ. ನಾನು ಬೆಳಗಾವಿ ಅಧಿವೇಶನದಲ್ಲಿ ಸರ್ಕಾರಕ್ಕೆ ರಿಕ್ವೆಸ್ಟ್ ಮಾಡಿ, ಒಂದೆರಡ್ನೂರು ಸಾವಿರ ಕೋಟಿ ರೂ.ಗಳನ್ನು ರೈತರಿಗೋಸ್ಕರ ಕೊಡಿ ಎಂದು ಕೇಳಿದೆ. ಇವತ್ತು ಆ ರೈತರು ದ್ರಾಕ್ಷಿ ಬೆಳೆಯುವ ಪರಿಸ್ಥಿತಿಯಲ್ಲಿಲ್ಲ. ಸಂಪೂರ್ಣವಾಗಿ ದ್ರಾಕ್ಷಿ ಬೆಳೆ ಹೊರಟುಹೋಗಿದೆ. ಅವರು ಮಾಡಿರುವ ಸಾಲಕ್ಕೆ ಬಡ್ಡಿ ಸೇರಿ ಸುಮಾರು 800 ಕೋಟಿ ರೂ.ಗಳ ಸಾಲವಿದೆ. ಅವರು ಸಂಪೂರ್ಣವಾಗಿ 500 ಕೋಟಿ ರೂ.ಗಳನ್ನು ಕೇಳುತ್ತಿಲ್ಲ. ಅವರು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಸಾಲ ಮಾಡಿಕೊಂಡಿದ್ದಾರೆ. ಅವರ ಜೊತೆ ಚರ್ಚೆ ಮಾಡಿ one time settlement ಮಾಡಿಸಿ ಎಂದು ಕೇಳುತ್ತಾರೆ. ಈ ರೀತಿ one time settlement ಮಾಡಿದರೆ ಅದೊಂದು 300 ರಿಂದ 400 ಕೋಟಿ ರೂ.ಗಳವರೆಗೆ ಬರಬಹುದು.

ಶ್ರೀ ಕೆ.ಆರ್. ರಮೇಶ್‌ಕುಮಾರ್:- ಕುಮಾರಸ್ವಾಮಿಯವರೆ ಒಂದ್ನಿಮಿಷ. ತಾವು ಸಮಗ್ರವಾಗಿ ಎಲ್ಲ ವಿಚಾರಗಳನ್ನು ಹೇಳುತ್ತಿದ್ದೀರಿ. ನಾನು ನಾಳೆ ಮಾತನಾಡುವಾಗ ಅದರ ಬಗ್ಗೆ ಸವಿಸ್ತಾರವಾಗಿ ಹೇಳುತ್ತೇನೆ. ಕೃಷಿ ಸಾಲ ನೀತಿ, ಸಹಕಾರ ನೀತಿ, ಕಂದಾಯ ಇಲಾಖೆಯ ಕೆಲವು ಪಾಲಿಸಿಗಳು, ಕೃಷಿ ಇಲಾಖೆಯಲ್ಲಿ ಆಗಿರತಕ್ಕಂಥ ಬದಲಾವಣೆ, ಇವೆಲ್ಲವನ್ನೂ ಕೂಡ ಗಮನದಲ್ಲಿಟ್ಟುಕೊಂಡು ಇವೆಲ್ಲವನ್ನೂ ಪುನರ್‌ವಿಮರ್ಶೆ ಮಾಡಬೇಕಾಗಿದೆ. ಈಗ service Co-operative Society, DCRD Bank and DCC Bank. ಇವು ಮೂರೇ ಸಹಕಾರಿ ಸಂಸ್ಥೆಗಳು ಸಾಲವನ್ನು ಕೊಡುವುದು. Service Co-operative Society ಯಲ್ಲಿ long term, short term loan ಕೊಡುತ್ತಾರೆ. Medium term loan commercial bankಗಳಲ್ಲಿ ಕೊಡುತ್ತಾರೆ. ಅದು book adjustment society. ಅಲ್ಲಿಂದ DCC Bank ಹೋಗುವುದು ಮತ್ತೆ ಅವರು ಆಡಳಿತ ನಡೆಸುವುದು, DCRD Bank ಗೆ ನಮ್ಮ State Bank ನವರು finance ಮಾಡುವುದಿಲ್ಲ. Reserve Bank norms ಪ್ರಕಾರ ನಬಾರ್ಡ್‌ನಿಂದ ಇವರು ದುಡ್ಡನ್ನು ತರುವುದು. ಇಲ್ಲಿ ಸಣ್ಣ ರೈತರು ಮತ್ತು ದೊಡ್ಡ ರೈತರು ಎಂದು ಹೇಳುತ್ತಾರೆ. ಅದ್ಯಾವ ದೊಡ್ಡ ರೈತನೋ, ಅದೇನು ಊಟ ಮಾಡುತ್ತಿದ್ದಾನೋ

ಗೊತ್ತಿಲ್ಲ. ಇವನಿಗೆ ಸಬ್ಸಿಡಿ ಕೊಡುತ್ತಾರೆ, ಅವನಿಗೆ ಸಬ್ಸಿಡಿ ಕೊಡುವುದಿಲ್ಲ. ಸಬ್ಸಿಡಿ ಕೊಡುವವನಿಗೆ ದ್ರಾಕ್ಷಿಯನ್ನೂ ಬೆಳೆಯುವುದಿಲ್ಲ ಅವನಿಗೆ implements ಬೇಕಾಗಿಲ್ಲ. ಯಾರಿಗೆ ಸಬ್ಸಿಡಿ ಕೊಡಬೇಕೋ ಅವನಿಗೆ ಸಬ್ಸಿಡಿಯಿಲ್ಲ. ಸಾಲವೂ ಕೂಡ ಸಿಗುವುದಿಲ್ಲ. ಏಕೆ ನೇಣು ಹಾಕಿಕೊಳ್ಳುತ್ತಾರೆಂದರೆ, ಇವರೆಲ್ಲರೂ ಕೂಡ ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಸಾಲವನ್ನು ತೆಗೆದುಕೊಂಡಿರುವುದು. ಇಲ್ಲಿ ಯಾರದೋ ಕಥೆ ಹೇಳುತ್ತಿಲ್ಲ. ನಿಮ್ಮೆಲ್ಲರ ಜೊತೆ ಮಾತನಾಡುತ್ತಿರತಕ್ಕಂಥ ನನ್ನದೇ ಕಥೆಯಿದು. ನಮಗೆ 14% ಗೆ ಕಡಿಮೆ ಬಡ್ಡಿ ದರದಲ್ಲಿ ಸಾಲವನ್ನು ಕೊಡುವುದಿಲ್ಲ. ನಾನು 88 ಲಕ್ಷ ರೂ.ಗಳ ಸಾಲವನ್ನು ಯುಕೋ ಬ್ಯಾಂಕ್‌ನಿಂದ Hi-rech Mango Farming ಮಾಡುವುದಕ್ಕೆ ತೆಗೆದುಕೊಂಡಿದ್ದೇನೆ. 5 ವರ್ಷ gestation period. 5 ವರ್ಷ ಕಳೆದ ಮೇಲೆ ಈ 5 ವರ್ಷದ ಬಡ್ಡಿಯನ್ನೂ ಅಸಲಿಗೆ ಸೇರಿಸಿ ಮೊದಲನೇ ಕಂತು 6 ನೇ ವರ್ಷದಿಂದ ಪ್ರಾರಂಭವಾಗುತ್ತದೆ. ಮೊದಲನೇ ಕಂತು 10 ಲಕ್ಷ ರೂ.ಗಳು, ಎರಡನೇ ವರ್ಷದ ಕಂತು 22 ಲಕ್ಷ. ನನ್ನ ಗ್ರಹಚಾರಕ್ಕೆ ಈ ಫೆಬ್ರವರಿ ತಿಂಗಳಲ್ಲಿ ಏನಾದರೂ ಒಂದು ಮಳೆ ಅಥವಾ ಇನ್ನೊಂದು ಹದಿನೈದು ದಿವಸ ಬಿಟ್ಟು ಗಾಳಿ ಬಂದರೆ ನನ್ನ ಹೂವೆಲ್ಲವೂ ಹೋಗಿಬಿಡುತ್ತದೆ. ಬ್ಯಾಂಕ್‌ನವರು ಇವೆಲ್ಲವನ್ನೂ ಕೇಳುವುದಿಲ್ಲ. ಬ್ಯಾಂಕ್‌ಗೆ ಕಟ್ಟಬೇಕಾಗಿರುವ ಹಣವನ್ನು ಕಟ್ಟಲೇಬೇಕು. ರಸಗೊಬ್ಬರದ ಬಗ್ಗೆ ಹೇಳಬೇಕೆಂದರೆ ಈ fertilezers manufacture ಮಾಡುವುದಕ್ಕೆ ಚಿನ್ನಗಿನ್ನವನ್ನೇನಾದರೂ ಬೆರೆಸುತ್ತಾರೆಯೆ ಎಂದು ನನಗೆ doubt ಇದೆ. ನನಗೆ ಇದರ ಬಗ್ಗೆ idea ಇಲ್ಲ. Chemical components ಏನೇನು ಎಂದು ಗೊತ್ತಾಗಬೇಕಲ್ಲ. ಅದೆಷ್ಟು ಗುಟ್ಟಾಗಿ ಇಟ್ಟಿದ್ದಾರೆಂದರೆ ಅವರ್ಯಾರೋ ಕೆಲವು ಶ್ರೀಮಂತರಿಗೆ ಬಿಟ್ಟು ಬೇರೆಯವರಿಗೆ ಯಾರಿಗೂ ಗೊತ್ತಾಗುವುದೇ ಇಲ್ಲ. ಅವರು ಹೇಳಬೇಕು. ಸಬ್ಸಿಡಿ ನಮಗೆ ಸಿಗುವುದಿಲ್ಲ. ಗೊಬ್ಬರದ ಮೇಲೆ ಅವರಿಗೆ ಸಿಗುವುದು. Drip irrigation ಮೇಲಿನ ಸಬ್ಸಿಡಿ ಯಾರಿಗೂ ಸಿಗುವುದು ಎಂದರೆ ಅದು ಕೂಡ ಅವರಿಗೇ ಸಿಗುವುದು. ಯಾರು ಕೃಷಿಕನಿದ್ದಾನೋ ಅವನಿಗೆ ಸಾಲ ಸರಳವಾದ ಬಡ್ಡಿ ದರದಲ್ಲಿ ಸಿಗುವುದಿಲ್ಲ. ಸಹಕಾರಿ ಕ್ಷೇತ್ರವೇ ಇಲ್ಲ. ಇಡೀ ರಾಜ್ಯದ

ಜನಸಂಖ್ಯೆಯಲ್ಲಿ 7% ಗಿಂತ ಹೆಚ್ಚು ಜನ ಸಹಕಾರಿ ಕ್ಷೇತ್ರದಲ್ಲಿಲ್ಲ. ಸಹಕಾರದ್ದೆಲ್ಲವನ್ನೂ ಸೇರಿ ಒಂದರೆಡು ಸಾವಿರವೋ ಮೂರು ಸಾವಿರ ಕೋಟಿ ರೂ.ಗಳನ್ನು ಸಹಕಾರಿ ಕ್ಷೇತ್ರಕ್ಕೆ ಹಾಕಿ Single Window Agency ಮಾಡಿಕೊಂಡು 3% ಬಡ್ಡಿ ಎಂದು Fix ಮಾಡಿ ಯಾರು ಜಮೀನು ನಂಬಿಕೊಂಡಿದ್ದಾರೋ ಅವರಿಗೆಲ್ಲ ಒಂದೇ ರೀತಿ ಎಂದು ಹೇಳಿ ಬನ್ನಿ ನೀವು ಕೆಲಸ ಮಾಡಿ ಬದುಕಿಕೊಳ್ಳಿ ಎಂದು ಹೇಳಿದರೆ ಆ ರೈತರು ಬದುಕುವುದಿಲ್ಲವೆ? C & D class forest, ಈ C & D forest ನಲ್ಲಿ ಅವನೇನು ಬೆಳೆಯುತ್ತಾನೋ ನಮಗೆ ಗೊತ್ತೇ ಇಲ್ಲ. ಮಾನ್ಯ ಉಪಾಧ್ಯಕ್ಷರೆ ಕೋಲಾರದವರಾದ ತಾವು ನಮ್ಮ ಭಾಗದವರು. ನಮಗೆ ownership ಕೊಡಬೇಡಿ, ownership ನೀವೇ ಇಟ್ಟುಕೊಳ್ಳಿ, atleast ನಮಗೆ ಹುಲ್ಲು ಬೆಳೆಯುವುದಕ್ಕೆ ಅವಕಾಶ ಮಾಡಿಕೊಟ್ಟರೆ ಹಸು ಸಾಕಿಕೊಳ್ಳುತ್ತೇವೆ. ಬಹಳ simple things, ಎಷ್ಟೋ agricultural farms, sericulture farms, horticultural farms ಇವತ್ತು waste ಆಗಿ ಅವುಗಳು ಹಾಗೆಯೇ ಬಿದ್ದಿವೆ. ನಮ್ಮ ಹುಡುಗರ ಕೈಗೆ ಕೊಟ್ಟರೆ ಹಗಲಿರುಳು ಕೆಲಸ ಮಾಡಿ ಅದರಲ್ಲಿ ಬೆಳೆದು ಅವರು national wealth ಗೆ contribute ಮಾಡುತ್ತಾರೆ. Inland finsheries, ನಮಗೆ ನೀರು ಸಿಕ್ಕುವ ಕಡೆಗೆ ಇಂಥ farms ಮತ್ತು ಅಗತ್ಯವಿರುವಂಥವುಗಳನ್ನು ಕೊಟ್ಟರೆ ನಾವು ಬೆಳೆಸಿಕೊಳ್ಳುತ್ತೇವೆ. ನಮಗೇನೂ ಇಲ್ಲ. ನಾವು ಮೇಕೆ ಸಾಕುವ ಹಾಗಿಲ್ಲ, ಮೇಕೆಯನ್ನು ಕಟ್ಟಿಹಾಕಿ ಸಾಕುವುದಕ್ಕಾಗುವುದಿಲ್ಲ, ಮೇಕೆಯನ್ನು ಸ್ವಲ್ಪ ಓಡಾಡಿಸಬೇಕು. ಆಗ ಕಾಡಿನೊಳಗೆ ಹೋದರೆ ಆಗ ಆ ಗಾರ್ಡ್‌ಗೆ ದುಡ್ಡು ಕೊಡಬೇಕು. ಇನ್ನು insurance ವಿಚಾರಕ್ಕೆ ಬಂದರೆ ಇದರಿಂದ ಯಾರಿಗೆ ಲಾಭ ಸಿಗುತ್ತಿದೆ? ಇದು ಒಂದು ಸರ್ಕಾರದ ಪ್ರಶ್ನೆಯಲ್ಲ. ನಾವು ಕೃಷಿಕರ ಕುಟುಂಬದಿಂದ ಬಂದವರು, ಕೃಷಿಕರ ಹಿನ್ನೆಲೆಯಿಂದ ಈ ಸದನಕ್ಕೆ ಪ್ರವೇಶ ಮಾಡಿದ ನಮ್ಮಗಳಿಗೆ ಅವನ ಜ್ಞಾಪಕ ಉಳಿಯುತ್ತಿಲ್ಲ. ನೀತಿ ನಿರೂಪಣೆಯಲ್ಲಿ ನಾವು ಪ್ರಮುಖ ಪಾತ್ರವನ್ನು ವಹಿಸುತ್ತಿಲ್ಲ. ನಾವು ಆ ಡೈರಕ್ಟರ್‌ರವರನ್ನು ಅಲ್ಲಿಗೆ ಹಾಕು, ಆ ಅಸಿಸ್ಟೆಂಟ್ ಡೈರಕ್ಟರ್‌ರವರನ್ನು ಇಲ್ಲಿಗೆ ಹಾಕು, ಆ ಗೊಬ್ಬರದವನು ಬಂದರೆ ಅದೇನು ಕೊಡ್ತಿಯೋ ಕೊಡಪ್ಪಾ ಎಲೆಕ್ಷನ್ ಟೈಂ ಎಂದು ಈ ಕೆಲಸದಲ್ಲಿದ್ದೇವೆ. ನಮಗೆ

agriculture policy ಏನಿರಬೇಕು, co-operation policy ಹೇಗಿರಬೇಕು ಎನ್ನುವ ಕಡೆಗೆ ನಾವು ಹೋಗಲೇ ಇಲ್ಲ. ನಾವು administration ಮಾಡುತ್ತಿದ್ದೇವೆ. Administration ನಲ್ಲಿ training ತೆಗೆದುಕೊಂಡು ಬಂದಿರತಕ್ಕಂಥ officers governance ಮಾಡುತ್ತಿದ್ದಾರೆ. ಈ ಗತಿಗೆ ನಾವು ಬಂದಿದ್ದೇವೆ. We have to rise above party considerations and speak. ನನಗೆ ಬಹಳ ಸಂತೋಷ, ನಾನು ತಮ್ಮಲ್ಲಿ ಏನು ವಿನಂತಿ ಮಾಡುತ್ತೇನೆಂದರೆ, at least ನಾವಾದರೂ ಈ ಸದನದಲ್ಲಿ ಏನೋ ಪುಣ್ಯಕ್ಕೆ ನಾವೆಲ್ಲರೂ ಒಟ್ಟಿಗೆ ಸೇರಿದ್ದೇವೆ, ಒಂದು ಸಹಕಾರ ನೀತಿ, ಜನಪರವಾದಂಥ, ರೈತ ಪರವಾದಂಥ ಒಂದು ಸಹಕಾರ ನೀತಿಯನ್ನು ಮಾಡಬೇಕು. ರೈತನ ಕುಟುಂಬದಲ್ಲಿ ಆತನಿಗೆ ಅರ್ಜೆಂಟ್ ಆಗಿ ಏನೇ ತೊಂದರೆ ಇದ್ದರೂ ಕೂಡ ಅವನು ಆ Single Window Agency ಹತ್ತಿರ ಹೋಗಿ ತರುವಂತಿರಬೇಕು. ರೈತನನ್ನು divide ಮಾಡಬೇಡಿ. ಎಲ್ಲ ರೀತಿಯ ರೈತರಿಗೆ ಒಂದೇ ರೀತಿಯ ಸಹಾಯ ಸಿಗುವ ಹಾಗೆ ಮಾಡಿ.. ಇದನ್ನು ನಾವು we must cross the party barriers. ನಾವೆಲ್ಲರೂ ಒಟ್ಟಿಗೆ ಒಂದು demand ಇಟ್ಟು ಒಂದು ತೀರ್ಮಾನಕ್ಕೆ ಬಂದರೆ I think Sir, ಎಲ್ಲೋ ಒಂದು ಸ್ವಲ್ಪ ಮಟ್ಟಿಗೆ ಒಂದು ಸುಧಾರಣೆಗೆ ಇಡೀ ಭಾರತ ದೇಶದಲ್ಲಿ ನಾವು ಒಂದು ಹೊಸ ಹೆಜ್ಜೆ ಇಟ್ಟಂತಾಗುತ್ತದೆ. ಇಲ್ಲದೇ ಹೋದರೆ ಯುನಿವರ್ಸಿಟಿಗಳು, Horticulture University, Animal Husbandry ಗೊಂದು University, Agriculture ಗೊಂದು University, ಹೀಗೆ ಮುಂದಕ್ಕೆ ಬೆಂಡೇಕಾಯಿಗೊಂದು ಯುನಿವರ್ಸಿಟಿ, ಹಿರೇಕಾಯಿಗೊಂದು ಯುನಿವರ್ಸಿಟಿ ಮಾಡುವುದು ಬಾಕಿಯಿದೆ. ಕೊತ್ತಂಬರಿಗೆ, ಮೆಣಸಿನಕಾಯಿಗೆ next Government ನವರು ಒಂದು ಮಾಡಬಹುದು. ನಮಗೆ ಬೇಕಾದವರಿಗೆ, ಬೇಕಾದವರಿಗೆ panel ನಲ್ಲಿ ಹಾಕಿಕೊಂಡು ಗೌವರ್ನರ್‌ಗೆ ಹೇಳಿ ಅವರನ್ನೂ ನೋಡಿಕೊಂಡು, ಮಾತನಾಡಿಕೊಂಡು, ಅಪಾಯಿಂಟ್ ಮಾಡುವುದು. ಇದಕ್ಕಿಂತ ಜಾಸ್ತಿ ಬೇರೆ ಏನೂ ಮಾಡುವುದಕ್ಕಾಗುವುದಿಲ್ಲ. ತಾವು ಚೆನ್ನಾಗಿ ಮಾತನಾಡುತ್ತಿದ್ದೀರಿ. ಮುಂದುವರೆಸಿ ಸಾರ್.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ರಮೇಶ್‌ಕುಮಾರ್‌ರವರು ವಾಸ್ತವಾಂಶದ ಮೇಲೆ ಚರ್ಚೆ ಮಾಡಿದ್ದಾರೆ. ನಾನು ಏಕೆ ಈ ವಿಷಯವನ್ನು ತಂದೆನೆಂದರೆ, ತಾವು ಹೇಳಿದ್ದು ಸತ್ಯ. ನೀವೇ ವರದಿಯನ್ನು ಕೊಟ್ಟಿದ್ದೀರಿ. 2014-15 ರ ಬಜೆಟ್‌ನಲ್ಲಿ ಹೇಳಿದ್ದೀರಿ. ಸಹಕಾರಿ ಕ್ಷೇತ್ರದಲ್ಲಿ ಇರುವುದೇ 75 ಲಕ್ಷ ರೈತ ಕುಟುಂಬಗಳು. ಇಲ್ಲಿ ನೀವು ಸಾಲ ಕೊಟ್ಟಿರುವುದು 19 ಲಕ್ಷದ 94 ಸಾವಿರ ರೈತರಿಗೆ 4933 ಕೋಟಿ ರೂ.ಗಳ ಸಾಲವನ್ನು ಕೊಟ್ಟಿದ್ದೀರಿ. ಇನ್ನು ಉಳಿದಂಥ 60 ಲಕ್ಷ ರೈತರ ಗತಿಯೇನು? ಅವರೆಲ್ಲಿಗೆ ಹೋಗಿದ್ದಾರೆ. ಅದನ್ನು ರಮೇಶ್‌ಕುಮಾರ್‌ರವರು ಈ ಸದನದ ಗಮನಕ್ಕೆ ತಂದಿದ್ದಾರೆ. ಇನ್ನೊಂದು ವಿಷಯ ಅವರು ಹೇಳಿದರು. ನಾನು ಮೊನ್ನೆ ಸಭಾಧ್ಯಕ್ಷರಿಗೆ ಮನವಿ ಮಾಡಿದೆ. ಈ ಅರಣ್ಯ ಭೂಮಿ ವಿಷಯದಲ್ಲಿ ನೀವೊಂದು ಮಾತನ್ನು ಹೇಳಿದಿರಿ. ಏನೋ ಒಂದು ಸ್ವಲ್ಪಮಟ್ಟ ಗಿಡ ಬೆಳೆದುಕೊಳ್ಳುತ್ತಾನೆ, ಮೇವು ಬೆಳೆದುಕೊಳ್ಳುತ್ತಾನೆ, ಆ ರೀತಿ ಹೇಳಿದ್ದು ಸತ್ಯ. ಈ ವಿಚಾರದಲ್ಲಿ ಯಾವುದೇ ರೀತಿಯಲ್ಲಿ ಯಾರಿಗೂ hurt ಮಾಡಬೇಕು ಎನ್ನುವ ಉದ್ದೇಶದಿಂದ ಹೇಳುವುದಿಲ್ಲ. ನಾನು ಮೊನ್ನೆ ಚಿಕ್ಕಮಗಳೂರಿನ, ಕಳಸಾಗೆ ಹೋಗಿದ್ದೆ. ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಈ ವಿಷಯವನ್ನು ಈಗ ತಂದು ಬಿಡುತ್ತೇನೆ. ನಾನು ಮೊನ್ನೆ ಸಭಾಧ್ಯಕ್ಷರಿಗೂ ಮನವಿ ಮಾಡಿದೆ. ನಮ್ಮಲ್ಲಿ ಹಿರಿಯ IFS ಅಧಿಕಾರಿಗಳಿದ್ದಾರಲ್ಲಾ, ಪುಣ್ಯಾತ್ಮರು, ಇವತ್ತೇನೋ ಅವರು ಹೇಳಿಕೊಂಡಿದ್ದಾರೆ, 13 ಲಕ್ಷ ಹೆಕ್ಟೇರ್ ಭೂಮಿಯನ್ನು ಒತ್ತುವರಿ ಮಾಡಿಕೊಂಡು ಬಿಟ್ಟಿದ್ದಾರೆ, ಕೊಟ್ಟಿದ್ದಾರೆ ಬಾಲಸುಬ್ರಹ್ಮಣ್ಯಂ ವರದಿಯನ್ನು ಮಾಡಿಕೊಂಡಿರಬಹುದು ಉಪಾಧ್ಯಕ್ಷರೆ, ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ ಆ 13 ಲಕ್ಷ ಹೆಕ್ಟೇರ್ ಭೂಮಿಯಲ್ಲಿ ಅಥವಾ ಸರ್ಕಾರದ ಭೂಮಿಯಲ್ಲಿ ಅವರೇನಾದರೂ ರೆಸಾರ್ಟ್‌ಗಳನ್ನು ಕಟ್ಟಿದ್ದಾರೆಯೆ? ಅವರೇನಾದರೂ high raised building ಕಟ್ಟಿ rent ಗೆ ಕೊಟ್ಟಿದ್ದಾರೆಯೆ? ಮರಗಿಡಗಳನ್ನು ಬೆಳೆಸಿ ಅರಣ್ಯವನ್ನು ಆ ಪುಣ್ಯಾತ್ಮರು ನೂರಾರು ವರ್ಷಗಳಿಂದ ಉಳಿಸಿದ್ದಾರೆ. ಆ ಕುಟುಂಬಗಳು ಚಿಕ್ಕಮಗಳೂರು, ಶಿವಮೊಗ್ಗ, ಉತ್ತರ ಕನ್ನಡದ ಆ ಭಾಗಗಳಲ್ಲಿದ್ದಾರೆ. ಆ ಭಾಗಗಳಿಗೆ ಹೋದರೆ ಅಲ್ಲಿರುವ ಅರಣ್ಯಗಳನ್ನು

ಕಾಪಾಡಿರುವುದೇ ಆ ರೈತರುಗಳು. ಇದು ಯಾವುದೇ ಅರಣ್ಯ ಕಾಯಿದೆ 1979 Act ಎಂದು ಹೇಳಿ, ಮೈಬಗ್ಗಿಸಿ ಕೆಲಸ ಮಾಡುವುದಕ್ಕೆ ಆಗದೆ ಈ ಅಧಿಕಾರಿಗಳು, ಈ IFS ಅಧಿಕಾರಿಗಳಿಗೆ ಯಾರೂ ಅನ್ಯಥಾ ಭಾವಿಸುವುದು ಬೇಡ. ಇವತ್ತು ಹೋಗಿ field inspection ಮಾಡದೆ ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್ ಕೊಟ್ಟುಬಿಟ್ಟರು ಎಂದು ಹೇಳಿ ಇವತ್ತು ರೈತರನ್ನು ಬೀದಿಗೆ ತಂದು ನಿಲ್ಲಿಸತಕ್ಕಂಥ ರೀತಿಯಲ್ಲಿ ಮಾಡಿ, ತಪ್ಪು ಮಾಡಿರುವುದು ಈ IFS ಅಧಿಕಾರಿಗಳು. ಇವತ್ತು ಎರಡು ಅಥವಾ ಮೂರು ಎಕರೆ ಇರುವಂತಹ ಭೂಮಿ ಮಾಲೀಕರು ಅಲ್ಲಿ ಏನೋ ಮರಗಿಡ ಉಳಿಸಿಕೊಂಡು ಕಾಫಿ ತೋಟ, ಮೆಣಸು ಮತ್ತು ಏಲಕ್ಕಿ ಬೆಳೆದುಕೊಂಡು ಜೀವನ ಮಾಡುತ್ತಿರುವಂತಹ ರೈತರನ್ನು ಹೊರಗೆ ಹಾಕಬೇಕೆಂದು ಹೇಳಿ, ಹೈಕೋರ್ಟ್ ಆದೇಶ ಮತ್ತು ಸುಪ್ರೀಂ ಕೋರ್ಟ್ ಆದೇಶ ಎಂದು ಪೋಲೀಸ್ ಮೆಷಿನರಿ ತೆಗೆದುಕೊಂಡು ಹೋಗಿ ಅಲ್ಲಿ ನಿಲ್ಲಿಸಿಕೊಂಡರೆ ಹೇಗೆ? ಮಾನ್ಯ ರಮೇಶ್ ಕುಮಾರ್‌ರವರು ಇದರ ಬಗ್ಗೆ ಪಕ್ಷಭೇದ ಮರೆತು ಚರ್ಚೆಯಾಗಬೇಕೆಂದು ಹೇಳಿದರು. ಇವತ್ತು ಕಾನೂನನ್ನು ರಚನೆ ಮಾಡುವಂತಹ ಈ ಸದನ ಇದೆ, ನಾವು ಜನತೆಗೆ ಉತ್ತರ ಕೊಡಬೇಕಾದವರು. ನ್ಯಾಯಾಲಯಗಳು ಉತ್ತರ ಕೊಡುವುದಿಲ್ಲ. ಇಲ್ಲಿ ಅಧಿಕಾರಿಗಳು ಉತ್ತರ ಕೊಡುವುದಿಲ್ಲ. ಅಲ್ಲಿ ಕುಳಿತುಕೊಂಡು ಅಧಿಕಾರಿಗಳು ಕೊಟ್ಟಂತಹ ವರದಿಯನ್ನು ಇಟ್ಟುಕೊಂಡು ನ್ಯಾಯಾಲಯಗಳಲ್ಲಿ ತೀರ್ಮ ಕೊಟ್ಟುಬಿಡುತ್ತಾರೆ. ನಾವು ನ್ಯಾಯಾಂಗದ ಬಗ್ಗೆ ಚರ್ಚೆ ಅಥವಾ ನಿಂದನೆ ಮಾಡುವುದಕ್ಕೆ ಹೋಗುವುದಿಲ್ಲ. ಅದಕ್ಕೆ ಗೌರವ ಕೊಟ್ಟಿದ್ದೇವೆ. ಇವತ್ತು ಬೆಂಗಳೂರಿನಲ್ಲಿ ಕಸ ವಿಲೇವಾರಿ ಮಾಡುವುದನ್ನು ನೋಡಲು ನ್ಯಾಯಾಧೀಶರು ಹೋಗುತ್ತಾರೆ. ಅದನ್ನು ಪತ್ರಿಕೆಯಲ್ಲಿ ನೋಡಿದ್ದೇನೆ. ಅದೇ ರೀತಿ ಅಲ್ಲಿ ಹೋಗಿ ಕಾಡನ್ನು ನೋಡಲಿ. ರೈತರು ಅರಣ್ಯ ನಾಶ ಮಾಡಿದ್ದಾರ? ಇವತ್ತು ಆ ರೈತರನ್ನು ಒಕ್ಕಲೆಬ್ಬಿಸಬೇಕೆಂದು ಏನು ಹೊರಟಿದ್ದೀರಿ .....

ಶ್ರೀ ಕೆ.ಆರ್. ರಮೇಶ್ ಕುಮಾರ್:- ನಾನು ಮಧ್ಯೆ ಮಧ್ಯೆ ಎದ್ದು interfere ಆಗುತ್ತಿದ್ದೇನೆ. ನಮ್ಮದೆ ಕೇಸ್‌ನಲ್ಲಿ Waste Land Development Corporationನವರು ಇದನ್ನು ಕೃಷಿ ಯೋಗ್ಯ ಎಂದು ಮಾಡತಕ್ಕಂಥಾದ್ದು

ಯಾರಿಗೂ ಸಾಧ್ಯವಿಲ್ಲ ಎಂದು certify ಮಾಡುತ್ತಾರೆ. ಮಾನ್ಯ ಬೋಪಯ್ಯನವರೆ, ಕೋರ್ಟ್‌ನಲ್ಲಿ ಜಡ್ಜ್ 'ಏನಪ್ಪ, ನೀವು ಮಾವು ಬೆಳೆಯುವುದನ್ನು ಯಾವಾಗಿನಿಂದ ಶುರು ಮಾಡಿದಿರಿ' ಎಂದು ಕೇಳಿದರು. Forest departmentನವರ eviction programme ಎಂದರೆ ಏನು ಗೊತ್ತೆ, ಗಿಡ cut ಮಾಡುವುದು. ಅದಕ್ಕೆ ಬಂದಿದ್ದರು. I am so happy, ಮನುಷ್ಯನಿಗೆ ಅನುಭವಕ್ಕೆ ಸಮಾನವಾದಂತಹ ವಿದ್ಯೆ ಯಾವುದೂ ಇರುವುದಿಲ್ಲ. ತಾವು ಹೋಗಿ ಕಣ್ಣಾರೆ ನೋಡಿದಿರಲ್ಲ, that educates you. ಯಾವ Universityಯಲ್ಲಿ ಯಾರೂ ಪಾಠ ಹೇಳುವುದಕ್ಕಾಗುವುದಿಲ್ಲ. ಕರ್ನಾಟಕದಲ್ಲಿ 146 ಜನ IFS officers ಇದ್ದಾರಲ್ಲ, IASನವರಿಗೆ ಎಷ್ಟು salary ಕೊಡುತ್ತೇವೆ, ಅವರಿಗೂ ಅಷ್ಟೆ ಕೊಡುತ್ತೇವೆ. 43 ಜನ Chief Conservator of Forest ಇದ್ದಾರೆ. ಒಬ್ಬರು Principal Chief Conservator, ಉಳಿದವರು Chief Conservator ಹಾಗೂ Conservators. ಇವರೆಲ್ಲರೂ ಸೇರಿ ಬೆಳೆದಿರುವ ಅರಣ್ಯ ಎಷ್ಟು? ತೇಗ, ಬೀಟೆ, ಹೊನ್ನೆ ಮತ್ತು ಮತ್ತಿ ಮರಗಳನ್ನು ಎಷ್ಟು ಬೆಳೆದಿರಿ? ನಮ್ಮ ತಾತ, ಮುತ್ತಾತ, ರಾಜ, ಮಾಹಾರಾಜರು, ಪಾಳೆಯಗಾರರು ಮತ್ತು ನಾಯಕರು ಹಾಕಿ ಬೆಳೆಸಿದರಲ್ಲ, ಹೂವರಸಿ, ಬೇವು, ಮಾವು ಏನಾಗಿದೆ? ಕುಮಾರಸ್ವಾಮಿಯವರೆ, ನಿಮ್ಮ ಪುಣ್ಯಕ್ಕೆ ಇವರೆಲ್ಲರೂ ಸೇರಿ ತಂದಿದ್ದು ಏನೆಂದರೆ ಬಳ್ಳಾರಿ ಜಾಲಿ, Arcules Farnese, ನೀಲಗಿರಿ ತಂದಿದ್ದಾರೆ. ಅದಕ್ಕೆ ಅವರಿಗೆ IFS ಕೊಟ್ಟಿರುವುದು. ಇಡೀ ಇಲಾಖೆ hydal project ಮಾಡಬೇಕೆಂದು ಬಂದವನಿಗೆ ಇವರೇ permission ಕೊಡುವುದು. Courtಗೆ obejection ಹಾಕುವವರು ಇವರೇ Mining ನವರಿಗೆ permission ಕೊಡುವವರು ಇವರೇ permission ಕೊಟ್ಟಾದ ಮೇಲೆ ಇವರು ಮಾಡುತ್ತಿರುವುದು ಅರಣ್ಯದಲ್ಲಿ ಎಂದು ಹೇಳುವವರು ಇವರೆ. ಅವರನ್ನು gate ವಸೂಲು ಮಾಡುವುದು, ಕಳುಹಿಸುತ್ತಿರುವುದು. ಮತ್ತೆ strict ಅಂದರೆ forest ನಷ್ಟು strict ಯಾರೂ ಇಲ್ಲ. 64-A enquiry, I don't know, ಅದರಲ್ಲಿ complainant ಯಾರು ಗೊತ್ತೆ? Ranger forest officer, Judge ಯಾರೆಂದರೆ Assistant Conervator of Forest. ಅವರೇ prosecutor, ಅವರೆ complainant, ಅವರೇ judge. It is a

funny thing. ಮಹಾರಾಜರ ಕಾಲದಲ್ಲಿ notify ಮಾಡಿರುವ forests ಎಷ್ಟು lands ಇವತ್ತು ಸರ್ವೆ and demarcation ಮಾಡಿಸಿದ್ದಾರೆ? ಎಷ್ಟು casesನಲ್ಲಿ ಇವರು final notification ಮಾಡಿದ್ದಾರೆ? Section 5 of the Karnataka Forest Act demands that a Settlement Officer must be appointed and he has to hear the claims. ಆದಾದಮೇಲೆ ನೀವು 17ಗೆ ಹೋಗಬೇಕು. ನಮಗೆ Right to information Act ಕೆಳಗೆ settlement officer appointment ಮಾಡಿಲ್ಲವೆಂದು ಕೊಡುತ್ತಾರೆ. settlement officers ಅನ್ನು ನೀವು appoint ಮಾಡದೆ ನೀವು forest area ಎಂದು ಹೇಗೆ declare ಮಾಡುತ್ತೀರಿ? ಒಂದು ಸಲ ಅವರು ಹೇಳಿಬಿಟ್ಟರೆ ಮುಗಿದುಹೋಯಿತು. ನಮ್ಮ ಮಾತು ಬಿಡಿ, ನಾವು ಜಯಿಸಿ ಕೊಳ್ಳುತ್ತೇವೆ. ನಾವು ಬರೆದು ಬಿಸಾಕುತ್ತೇವೆ, ನಮಗೆ ಯಾವ ಆಸ್ತಿ ವ್ಯಾಮೋಹ ಇಲ್ಲ. ಆದರೆ ಇವತ್ತು ಅದರ ನೆಪದಲ್ಲಿ freedom fightersಗೆ 45 ವರ್ಷದ ಕೆಳಗೆ freedom fighters ಎಂದು ಜಮೀನು ಮಂಜೂರು ಮಾಡುತ್ತಾರೆ. ಇವತ್ತು ಇದ್ದಕ್ಕಿದ್ದ ಹಾಗೆ ಗಾರ್ಡ್ ಬಂದು ನಿನ್ನನ್ನು ಹೊರಗೆ ಹಾಕುತ್ತಿದ್ದೇವೆಂದು ಒಂದು ನೋಟೀಸ್ ಕೊಡುತ್ತಾನೆ. ಈ freedom fighters ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ಹೋದಾಗ, ಜೈಲಿಗೆ ಹೋಗಿ ಒದೆ ತಿಂದಾಗ, ಇವರು ಸರ್ಕಾರ ಬರುತ್ತದೆ, ಜಮೀನು ಕೊಡುತ್ತಾರೆಂದು ಜೈಲಿಗೆ ಹೋಗಿದ್ದನೆ? ಅವನಿಗೆ ಏನೋ ಒಂದು ಆಸೆ, ನಮ್ಮದೇ ಸ್ವಾತಂತ್ರ್ಯ, ನಮ್ಮದೇ ದೇಶ, ಬದುಕುವುದಕ್ಕೆ ಕೊಡುತ್ತಾರೆ, ನನ್ನ ಹೋರಾಟಕ್ಕೆ ಪ್ರತಿಫಲ ಎಂದುಕೊಂಡರೆ ಇವತ್ತು ಅವನಿಗೆ ಕೊಡುತ್ತಿರುವ ಪ್ರತಿಫಲ ಇದು. Unless, ಆ ಒಂದು ಇಲಾಖೆಯನ್ನು ಅತ್ಯಂತ ಎಚ್ಚರಿಕೆಯಿಂದ ಮತ್ತು ಮಾನವೀಯತೆಯ ದೃಷ್ಟಿಯಿಂದ handle ಮಾಡದೇ ಹೋದರೆ, ಅವರು ಗೋಲಕನಾಥ ಕೇಸ್ ಹಿಡಿದುಕೊಂಡು, ಅವನು ಅದನ್ನು ಓದಿಯೇ ಇಲ್ಲ. ಆ ಕೇಸ್ ಇವತ್ತಿಗೂ ಸುಪ್ರೀಂ ಕೋರ್ಟ್‌ನಲ್ಲಿ ಇತ್ಯರ್ಥವಾಗಿಲ್ಲ. ಇನ್ನೂ ಕೂಡ ಒಂದು injuction ಮೇಲೆ ಆ ಕೇಸ್ ನಡೆಯುತ್ತಿದೆ. ಶ್ರೀಮತಿ ಇಂದಿರಾಗಾಂಧಿಯವರು ಏನು 1980 ರಲ್ಲಿ Conservation of Forest Act ತಂದಿದ್ದಾರೆ, ಈ ದೇಶದಲ್ಲಿ ಅರಣ್ಯ ಪ್ರದೇಶ ಕಡಿಮೆಯಾಗುತ್ತಿದೆ, ಇದನ್ನು ಸುರಕ್ಷಿತ ಮಾಡಬೇಕೆನ್ನುವುದಕ್ಕೆ

ನಾವ್ಯಾರು ವಿರುದ್ಧವಿಲ್ಲ. ದತ್ತರವರೆ ಹೇಳಿ, ಅರಣ್ಯವನ್ನು ಇವರು ಬೆಳೆಸಿದ್ದಿಲ್ಲ, ಕಾಪಾಡಿದ್ದಿಲ್ಲ. ನಮ್ಮ ಕೋಲಾರದಲ್ಲಿ ಯಾವ ಕಾಡಿದೆ? ಬಂದೂಕುಗಳೆಲ್ಲ ತೆಗೆದುಕೊಂಡು ಇಟ್ಟುಕೊಂಡು ಬಿಡುತ್ತಾರೆ. ಮಾನ್ಯ ಕುಮಾರಸ್ವಾಮಿಯವರೇ ನಮ್ಮ ಪರಿಸ್ಥಿತಿ ಏನಾಗಿದೆ? ಗೊತ್ತಾ? ಕಾಡು ಹಂದಿಗಳು ಜಾಸ್ತಿಯಾಗಿಬಿಟ್ಟಿವೆ. ಅರ್ಧ ರಾತ್ರಿಯಲ್ಲಿ ಬರುವ ಕರೆಂಟು, ಬೆಳಗಿನ ಜಾವದಲ್ಲಿ ಬರುವ ಕರೆಂಟು, ಬೋರ್‌ವೆಲ್ ಇಟ್ಟುಕೊಂಡು ನಮ್ಮ ರೈತರು ತೋಟ ಮಾಡಿದರೆ, ಆ ಕಾಡು ಹಂದಿ ಅದನ್ನು ತಿಂದು ಬಿಡುತ್ತದೆ. ಅದನ್ನು ಹೊಡೆಯುವುದಕ್ಕೆ ಹೋದರೆ Wild Life Preservation ಎಂದು ಅದಕ್ಕೆ ಒಂದು ಕೇಸು ಹಾಪುತ್ತಾರೆ. Wild Life Preservation ಕೋಲಾರದಲ್ಲಿ ಮಾಡಿ, ಸದ್ಯಕ್ಕೆ ನಮ್ಮನ್ನು ನಿಮ್ಮನ್ನು Wild Life Preservation Act ಕೆಳಗೆ ಹಿಡಿದುಕೊಂಡು ಹೋಗಿಲ್ಲ.

ಶ್ರೀ ವೈ.ಎಸ್.ವಿ. ದತ್ತಾ:- ಮಾನ್ಯ ರಮೇಶ್ ಕುಮಾರ್‌ರವರೆ, ರೈತರ ಸ್ಥಿತಿ ಹೇಗಾಗಿದೆ ಎಂದರೆ ನಾವು ಹುಲಿ, ಕರಡಿ ಮತ್ತು ಆನೆಗಳಿಗೆ ಹೆದರಿಕೊಳ್ಳುತ್ತಿದ್ದುದ್ದು ಬೇರೆ. ಈಗ ನಿಜವಾಗಲೂ ರೈತರುಗಳಿಗೆ ಹುಲಿ, ಕರಡಿ, ಸಿಂಹ, ಚಿರತೆ ಮತ್ತು ಆನೆಗಳಾಗಿರುವುದು Forest Departmentನ RFOಗಳು. ಆ Rangerಗಳು ಬರುತ್ತಾರೆಂದರೆ ಸಾಕು ಹುಲಿ, ಕರಡಿ, ಮೈಮೇಲೆ ಬಂದ ಹಾಗೆ ಜನರು ಹೆದರಿಕೊಂಡು ಮನೆ ಸೇರಿಕೊಳ್ಳುವಂತಹ ಪರಿಸ್ಥಿತಿ ಬಂದಿದೆ. ಕಾಡೇ ಇಲ್ಲ, ನಮ್ಮ ಕಡೂರು ತಾಲ್ಲೂಕಿನಲ್ಲಿ ಹುಡುಕಿದರೆ ಬಳ್ಳಾರಿ ಜಾಲಿ ಗಿಡ ಬಿಟ್ಟರೆ ಏನೂ ಇಲ್ಲ. ಅದನ್ನೆಲ್ಲ ಕಾಡು ಎಂದು ಹೇಳುವುದು. ಅಲ್ಲಿ ಒಂದು ಮೋಟು ಮರ ಇಲ್ಲ, ಗಿಡ ಇಲ್ಲ, ಅರಣ್ಯ, ಅರಣ್ಯ ಎಂದು ಹೇಳುವುದು. ಅದನ್ನು ಯಾರು ಬರೆದುಕೊಂಡನೋ ಏನು ಕತೆಯೋ. ಅಲ್ಲಿ ಒಬ್ಬ ರೈತ ಹೋಗುವ ಹಾಗಿಲ್ಲ. ನಾಲ್ಕು ಗಿಡಗಳಿದ್ದರೆ ಅದು Deemed Forest ಅಂತೆ. ಆ Deemed Forestಗೆ ಇನ್ನೊಂದು ಹೆಸರು DC forest ಎಂದು ಕೊಟ್ಟಿದ್ದಾರೆ. ಅದು ಬೇರೆ ಬಂದಿದೆ. ಇದು ಯಾವ ಸೀಮೆ ನ್ಯಾಯವೋ ಗೊತ್ತಿಲ್ಲ. ಮಾತು ಎತ್ತಿದರೆ ಅರಣ್ಯ ಇಲಾಖೆ ಅಧಿಕಾರಿಗಳು ಅದು ಯಾವುದೋ ಒಂದು Supreme Court Judgment ಹಿಡಿದುಕೊಂಡು ಎಲ್ಲರಿಗೂ ಹೆದರಿಸುವುದು.

ಮಾನ್ಯ ಉಪಾಧ್ಯಕ್ಷರೆ, ಇದರ ಬಗ್ಗೆ ಒಂದು ಸರಿಯಾದಂತಹ ತೀರ್ಮಾನವಾಗದಿದ್ದರೆ ಬಹಳ ಕಷ್ಟ ಇದೆ. ರೈತರು ಇನ್ನು ಮೇಲೆ ನಾವು ವ್ಯವಸಾಯ ಮಾಡುವುದಿಲ್ಲ ಎನ್ನುವ ತೀರ್ಮಾನಕ್ಕೆ ಬಂದುಬಿಡುತ್ತಾರೆ.

ಶ್ರೀ ಕೆ.ಆರ್. ರಮೇಶ್ ಕುಮಾರ್:- ಈ ಸದನದಲ್ಲಿ ನಾವೆಲ್ಲರೂ ಸೇರಿ, ಆ ಪಾರ್ಟಿ, ಈ ಪಾರ್ಟಿ ಎನ್ನದೆ ಯಾರನ್ನೂ ಒಕ್ಕಲೆಬ್ಬಿಸಬಾರದು ಎನ್ನುವ ತೀರ್ಮಾನ ಮಾಡೋಣ.

ಶ್ರೀ ವೈ.ಎಸ್.ವಿ. ದತ್ತಾ:- ಅದು ಸದನದ ನಿರ್ಣಯವಾಗಬೇಕು.

ಶ್ರೀ ಕೆ.ಆರ್. ರಮೇಶ್ ಕುಮಾರ್:- ಸನ್ಮಾನ್ಯ ಸಭಾಧ್ಯಕ್ಷರು ಮಲೆನಾಡು ಭಾಗದಿಂದ ಬಂದವರು. ಅವರು ಏನು ಹೇಳಿದರು, ನಮ್ಮ ಭಾಗದಲ್ಲಿ ಬಹಳ ಕಷ್ಟವಾಗುತ್ತದೆ ಎಂದು ಅವರೇ ಅಲ್ಲಿಂದ ಕುಳಿತು ಹೇಳಿದರು. ಅದಕ್ಕೆ ನಮ್ಮ ಸ್ನೇಹಿತರು ಹಿರೇಮಠ್ ಸಾಹೇಬರು ಸಭಾಧ್ಯಕ್ಷರಾದ ಕಾಗೋಡು ತಿಮ್ಮಪ್ಪನವರೆ ಒತ್ತುವರಿಗೆ ಅಡ್ಡ ಬರುತ್ತಿದ್ದಾರೆಂದು ಹೇಳಿದರು. ಏನಪ್ಪ ಈ ಪುಣ್ಯಾತ್ಮ ಭಗತಸಿಂಗ್ ತಮ್ಮ ಎಲ್ಲಿಂದ ಬಂದ? ಅರೆ, ಸಭಾಧ್ಯಕ್ಷರನ್ನು ಟೀಕೆ ಮಾಡಿದರೆ ಅವರು ಹೇಗೆ defend ಮಾಡಿಕೊಳ್ಳುವುದು? ನಾನಾಗಿದ್ದರೆ defend ಮಾಡಿಕೊಳ್ಳುತ್ತೇನೆ, ಮಂತ್ರಿಗಳಾಗಿದ್ದರೆ defend ಮಾಡಿಕೊಳ್ಳುತ್ತಾರೆ. ಸಭಾಧ್ಯಕ್ಷರೆ ಗತಿ, ನಿಮ್ಮ ಮೇಲೆ ಹೇಳಿದರೆ ನೀವು ಮೇಲೆ ಹೇಳಿದರೆ ನೀವು ಹೇಗೆ defend ಮಾಡಿಕೊಳ್ಳುವುದು? ಅವರ ಪರ ಯಾರೂ ಹೇಳಿಕೆ ಕೊಡಲಿಲ್ಲ. ಇಡೀ ಸದನ ಹೇಳಿದ್ದನ್ನು ಪಾಪ ಅವರು ಪ್ರತಿಧ್ವನಿಸಿದ್ದು. ಇವರು ಮೀಡಿಯಾದ ನಮ್ಮ ಸ್ನೇಹಿತರು, ಆತ ಬಂದತಕ್ಷಣ ಈ ಕಾಲಕ್ಕೆ ಈತ ಒಬ್ಬ ಹುಟ್ಟಿದ್ದಾನೆ, ಭಗತಸಿಂಗ್‌ನ ಪ್ರತಿರೂಪ ಬಂದಿದ್ದಾನೆಂದು ಆತನನ್ನು ಟಿ.ವಿಯಲ್ಲಿ, ಪೇಪರ್‌ನಲ್ಲಿ ತೋರಿಸಿಬಿಡುತ್ತಾರೆ.

ಶ್ರೀ ವೈ.ಎಸ್.ವಿ. ದತ್ತಾ:- ಮಾನ್ಯ ರಮೇಶ್ ಕುಮಾರ್‌ರವರೆ, ಹಿರೇಮಠ್‌ರವರ ಬಗ್ಗೆ ಗೌರವ ವ್ಯಕ್ತಪಡಿಸುತ್ತಾ ಹೇಳುತ್ತೇನೆ, ಮಾಧ್ಯಮದವರು ಅಂದುಕೊಳ್ಳಬಹುದು. ಆದರೆ ನಮ್ಮ ಮಲೆನಾಡಿನ ರೈತರು, ಹಳ್ಳಿಯ ಜನರು ಯಾರು ಸಾರ್ ಈ ಹಿರೇಮಠ್ ರವರು? ಏಕೆ ಸಾರ್ ನಮ್ಮ ಹೊಟ್ಟೆ ಮೇಲೆ

ಹೊಡೆಯುತ್ತಾರೆ? ಅವರು ಬೇಕಾದರೆ ಬೆಂಗಳೂರಿನಲ್ಲಿ ಯಾರಾದರು real estate ದಣಿಗಳಿದ್ದಾರಲ್ಲ, ಆ ಭೂಗತ ಕಳ್ಳರು, ಅವರನ್ನೆಲ್ಲ ಹಿಡಿದು ಹಾಕಿ ಬೆಂಗಳೂರು ಸುತ್ತ ಮುತ್ತನೋ, ಹುಬ್ಬಳ್ಳಿ ಸುತ್ತುಮತ್ತನೋ ಮಾಡಿಕೊಳ್ಳಿ ಸಾರ್. ಏಕೆ ನಮ್ಮಂಥ ಬಡಪಾಯಿ ರೈತರಿಗೆ ತೊಂದರೆ ಕೊಡುತ್ತಾರೆ ಎನ್ನುತ್ತಾರೆ.

ಶ್ರೀ ಕೆ.ಆರ್. ರಮೇಶ್ ಕುಮಾರ್:- ಅವರ ಸುದ್ದಿಗೆ ಹೋಗುವುದಿಲ್ಲ. ಈಚೆಗೆ ಅವರು ಮಾನ್ಯ ಶಿವಕುಮಾರ್ ಹಾಗೂ ರೋಷನ್‌ಬೇಗ್‌ರವರನ್ನು ಕೂಡ ಬಿಟ್ಟಿದ್ದಾರೆ, ನನ್ನೊಬ್ಬನನ್ನೆ ಹಿಡಿದುಕೊಂಡಿದ್ದಾರೆ. ನನಗೆ ಈಗ ಹೇಗಾಗಿದೆ ಎಂದರೆ Portfolio ಇಲ್ಲ. ಆದರೆ ನಾನು newsನಲ್ಲಿದ್ದೇನೆ. ಆತ ವಿಚಿತ್ರ ಅಂದರೆ ವಿಚಿತ್ರ, ಹೈಕೋರ್ಟ್ ಜಡ್ಜ್‌ಗಳ ಮೇಲೆಲ್ಲಾ ಮಾತನಾಡುತ್ತಾನೆ. ಮೊನ್ನೆ ಲೋಕಾಯುಕ್ತ ಡಿ.ಜಿ.ಯವರ ಮೇಲೆ ಮಾತನಾಡಿದ್ದಾನೆ. ಇನ್ನು ಮುಂದಕ್ಕೆ ಮಾನ್ಯ ಮುಖ್ಯಮಂತ್ರಿಯವರು ಅವರಿಗೆ ಒಂದು extra portfolio create ಮಾಡಿ, ಯಾರನ್ನು ಏನು ಮಾಡಬೇಕಾದರೂ ಅವರ ಹತ್ತಿರ ಒಂದು character certificate ತೆಗೆದುಕೊಂಡು ಬನ್ನಿ ಎಂದು ಹೇಳಿ, ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಇನ್ನು ಮುಂದೆ ಸಿ.ಆರ್. ಬರೆಯಬೇಕಾದರೆ, file ಅನ್ನು ಹಿರೇಮಠ್ ಸಾಹೇಬರಿಗೆ refer ಮಾಡಿ, ಅವರು ಯಾರ್‍ಯಾರ ಸಿ.ಆರ್. ಅನ್ನು approve ಮಾಡುತ್ತಾರೆ, ಅವರದ್ದು ಮಾತ್ರ ಬರೆಯಬೇಕು, ಅವರೇ ಸಿ.ಆರ್. ಎಲ್ಲಾ ಬರೆಯಬೇಕು. ಇವನು ಲೋಕಾಯುಕ್ತಕ್ಕೆ ಇರಬೇಕು, ಇವನು ಇಂಟಲಿಜೆನ್ಸ್‌ಗಿರಬೇಕು, ಅವನು ಡಿ.ಎಫ್.ಓ.ಗೆ ಇರಬೇಕು, ಇವನನ್ನು Commercial Taxಗೆ ಹಾಕಿ ಎಂದು ಅವರಿಗೆ ಕೊಟ್ಟ ಮೇಲೆ postings ಮಾಡಬೇಕು. ಈ ಮನುಷ್ಯ ಯಾವತ್ತು ಜಮೀನಿಗೆ ಹೋದ, ಎಲ್ಲಿ ಹೋಗಿ ಮಲಗಿದ ಎನ್ನುವುದಕ್ಕೆ ತಾವು ಒಂದು enquiry ಯನ್ನು conduct ಮಾಡಿ. ನಾವೆಲ್ಲಾ ಎಲ್ಲಿಗೆ ಹೋಗುತ್ತೇವೆ, ಎಲ್ಲಿ ಮಲಗುತ್ತೇವೆ, ಎಲ್ಲಿ ಏಳುತ್ತೇವೆ, ನಮ್ಮ ಬದುಕು ಎಂಥದ್ದು, ಪ್ರಾರಂಭ ಹೇಗೆ ಆಗುತ್ತದೆ, ಅಂತ್ಯ ಹೇಗೆ ಆಗುತ್ತದೆ, ದಿನನಿತ್ಯ ನಮ್ಮ ಚಟುವಟಿಕೆಗಳು

ಏನೆಂಬುದನ್ನು publish ಮಾಡಿಸಿ, Mediaದವರಿಗೆ ಕೊಟ್ಟು ಬಿಡಿ, ಏನು ತೊಂದರೆ ಇಲ್ಲ. ಯಾರು ಭಯ ಬೀಳುವವರು, ತೊಂದರೆಯಾಗುವವರು, ಅಲ್ಲಿ ಇಲ್ಲಿ ಹೋಗಿ ಮಲಗಿಕೊಳ್ಳುವವರಿಗೆ ಕಷ್ಟ, ನಮಗೇನು ಕಷ್ಟ? ಎಲ್ಲಾ ಈಚೆಗೆ ಬರಲಿ, ಜನರಿಗೆ ಗೊತ್ತಾಗಲಿ. ಆದರೆ ಈತ ಫಾರೀನ್‌ನಿಂದ ಹಣವನ್ನು ತಂದು ಇಲ್ಲಿ ದೇಶ ಉದ್ಧಾರ ಮಾಡುತ್ತೇನೆಂದು ಹೇಳಿ, ಹಗಲೆಲ್ಲಾ ಮಾನಸ್ಥರ ಹೆಗಲಿಗೆ ಬಿದ್ದು ಬಿಟ್ಟರೆ, ಮಾನಸ್ಥರು ಹೇಗೆ ಬದುಕುವುದು? The Officer of the Speaker in our Parliamentary Democracy is such an exalted Authority. If the Speaker is the person who is being attacked, who should defend him? The whole House, we must express our solidarity with the speaker. We cannot isolate Speaker. ನಮಗೆ Speaker ಲಾಯಕ್ಕಿಲ್ಲ, ಕೆಲಸಕ್ಕೆ ಬರುವುದಿಲ್ಲ ಎಂದು, ನೀವು ಬೈಯುತ್ತಿರುವುದು ಸರಿ ಎಂದರೆ we should remove him. ನಮ್ಮ ಅಧ್ಯಕ್ಷರಲ್ಲಿ ನಮಗೆ ಅಂಥ ಅಭಿಪ್ರಾಯ ಏನು ಬಂದಿಲ್ಲ. ಆದರೆ ನಾವು ಯಾರು ಅವರ ರಕ್ಷಣೆಗೆ ಬರಲ್ಲ, ಅವರ ಮನೆಯಲ್ಲಿ ಅಕಸ್ಮಾತ್ ಸಭಾಧ್ಯಕ್ಷರನ್ನು ಯಾಕ್ರಿ ಬೇಕು ಈ ವಯಸ್ಸಿನಲ್ಲಿ ಇವೆಲ್ಲಾ ಎಂದು ಕೇಳಿದರೆ, ಸಭಾಧ್ಯಕ್ಷರು ಏನು ಹೇಳುವುದು? ರೈತರ ಪರವಾಗಿ....

(ಈ ಹಂತದಲ್ಲಿ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ವೈ.ಎಸ್.ವಿ. ದತ್ತಾ:- ಮಾನ್ಯ ಅಧ್ಯಕ್ಷರು ರೈತರ ಪರವಾಗಿ ಸಹಾನುಭೂತಿ ವ್ಯಕ್ತಪಡಿಸಿ ಮಾತನಾಡಿದ್ದೆ ಒಂದು ಅಪರಾಧವಾಗುವುದಾದರೆ, ಶಾಸಕಾಂಗಕ್ಕೆ ಬೆಲೆ ಏನು ಬಂತು?

ಶ್ರೀ ಕೆ.ಆರ್. ರಮೇಶ್‌ಕುಮಾರ್:- Assembly Proceedingsನಲ್ಲಿ ಜನಪ್ರತಿನಿಧಿಗಳಾದವರು Constitution Bodyಯೊಳಗೆ ರೈತರ ಪರವಾಗಿ ಮಾತನಾಡುವುದನ್ನು ವಿಮರ್ಶೆ ಮಾಡತಕ್ಕಂಥ ದೊಡ್ಡ extra-Constitutional Authority ಎನ್ನುವುದಕ್ಕೆ ಈತ ಜಯಪ್ರಕಾಶ್ ನಾರಾಯಣ್ ಏನು? ಮಾನ್ಯ

ಜಯಪ್ರಕಾಶ್ ನಾರಾಯಣ್‌ರವರು ಈ ದೇಶದಲ್ಲಿ extra-Constitutional Authority ಬಗ್ಗೆ ಸ್ವರ ಎತ್ತಿದಂಥ ಮಹಾನುಭಾವರು. Armyಗೆ call ಕೊಟ್ಟ ಆತ, don't take the illegal orders' ಎಂದು ಹೇಳಿಬಿಟ್ಟ, ಇಡೀ ದೇಶದ ಪ್ರಜೆಗಳೆಲ್ಲಾ ಎರಡೂ ಕೈ ಎತ್ತಿ ಆ ಮನುಷ್ಯನಿಗೆ ನಮಸ್ಕರಿಸಬೇಕು. ಈ ದೇಶದಲ್ಲಿ ಪ್ರಜಾಪ್ರಭುತ್ವ ಸಾಯುವುದಕ್ಕೆ ಆತ ಬಿಡಲಿಲ್ಲ. ಈತ ಆತನಿಗಿಂತ ದೊಡ್ಡವನ ಹಾಗೆ ಕಾಣುತ್ತಾನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಮಾನ್ಯ ಅಧ್ಯಕ್ಷರೆ ಇದು ಒಂದು ಪ್ರಮುಖವಾದಂಥ burning issue, ಇಲ್ಲಿ ಪ್ರಶ್ನೆ ಇರುವಂಥದ್ದು ನಾವು ಜನಪ್ರತಿನಿಧಿಗಳು ಯಾರಿಗೆ ರಕ್ಷಣೆ ಕೊಡಬೇಕು, ಇವತ್ತು ನಾವು ಅಸಹಾಯಕರಾಗಿದ್ದೇವೆ. ನಾನು ಆ ಕಡೆ ಎರಡು–ಮೂರು ಬಾರಿ ಏನು ಭೇಟಿ ಮಾಡಿದ್ದೇನೆ. ನಾನು ಮೊನ್ನೆ ಸಭಾಧ್ಯಕ್ಷರು ಮನವಿ ಮಾಡಿದೆ, ಹಿರಿಯ ಐ.ಎಫ್.ಎಸ್. ಅಧಿಕಾರಿಗಳು, ರೆವಿನ್ಯೂ ಅಧಿಕಾರಿಗಳು ನಮ್ಮ ಕಾನೂನಿನ ಅಡ್ವೋಕೇಟ್ ಜನರಲ್ ಇರಬಹುದು, ನಾನು ಮುಖ್ಯಮಂತ್ರಿಯವರ ನೇತೃತ್ವದಲ್ಲಿ ಒಂದು ಸಭೆಯನ್ನು ಕರೆಯಬೇಕೆಂದು request ಮಾಡಿದ್ದೆ. ಇದು ಬಹಳ ಸುದೀರ್ಘವಾಗಿ ಚರ್ಚೆಯಾಗಬೇಕಾಗಿದೆ. ಕಾಡಿನಲ್ಲಿ ನೂರಾರು ವರ್ಷಗಳಿಂದ ಬದುಕುತ್ತಿರುವಂಥ ಅವರು ಕಾಡನ್ನು ಉಳಿಸಿದ್ದಾರೆ. ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದ ಹಾಗೆ ಬಂಡಿಪುರಕ್ಕೆ ಹೋಗೋಣ, ಅಲ್ಲಿ ಅಧಿಕಾರಿಗಳು ಎಷ್ಟು ಕಾಡು ಬೆಳೆಸಿದ್ದಾರೆಂಬುದನ್ನು ನೋಡೋಣ. ಇವತ್ತು ರೈತ ಕಾಡನ್ನು ಉಳಿಸಿ, ಅಲ್ಲಿ ಏನೋ ಒಂದು ಸಣ್ಣ ಬೆಳೆಯನ್ನು ಬೆಳೆದುಕೊಳ್ಳುತ್ತಾನೆ. ಇವತ್ತು ಅವನನ್ನು ಅಲ್ಲಿಂದ ಹೊರಗೆ ಹಾಕಬೇಕಂತೆ. ಇವತ್ತು ಅಲ್ಲಿ ನ್ಯಾಯಾಧೀಶರು ಹೋಗಿ spot insepection ಮಾಡಬೇಕು, ಆ ತೀರ್ಪು ಕೊಡುವುದಕ್ಕೆ ಮುಂಚೆ ಮಾಡಬೇಕೆಂದು ನಾನು ಇವತ್ತು ಹೇಳಬಯಸುತ್ತೇನೆ. ನಾನು ಇಲ್ಲಿ ಹೇಳಿದೆ, ನ್ಯಾಯಾಧೀಶರು ಕಸ ವಿಲೇವಾರಿಯ ಗುಡ್ಡೆಯನ್ನು ನೋಡುವುದಕ್ಕೆ ಹೋಗುತ್ತಾರೆ.

ಶ್ರೀ ವೈ.ಎಸ್.ವಿ. ದತ್ತಾ:- ಮಾನ್ಯ ಅಧ್ಯಕ್ಷರೆ, ಮಾನ್ಯ ಕುಮಾರಸ್ವಾಮಿಯವರು ಮಾತನಾಡುತ್ತಿರುವಂಥದ್ದಕ್ಕೆ ಸರ್ಕಾರ ಒಂದು ಸ್ಪಷ್ಟನೆಯನ್ನು ಮಾಡಬೇಕಾಗಿದೆ. ಅದು ಏನೆಂದರೆ, ಈಗ ನಮ್ಮ ಮುಂದೆ ಕಸ್ತೂರಿರಂಗನ್ report ಎಂದು ನಮ್ಮ ಮುಂದೆ ಬಂತು. ಇದುವರೆಗೂ ಈ ಸರ್ಕಾರ ಕಸ್ತೂರಿ ರಂಗನ್ report ಒಪ್ಪಿಕೊಂಡಿದೆಯೋ, ಬಿಟ್ಟಿದೆಯೋ ಗೊತ್ತಿಲ್ಲ. ಆದರೆ ಆ ರಿಪೋರ್ಟ್ ಅನ್ನು ಇಟ್ಟುಕೊಂಡು ಎಲ್ಲರೂ ಹೈಕೋರ್ಟ್ ಮುಂದೆ PIL ಹೋಗುತ್ತಿದ್ದಾರೆ. ಕಸ್ತೂರಿರಂಗನ್ ರಿಪೋರ್ಟ್‌ಗೆ ಅಧಿಕೃತವಾಗಿ ಯಾವ ಸ್ಥಾನಮಾನ ಸಿಕ್ಕಿದೆ ಎನ್ನುವುದು ಇನ್ನೂ ಈ ಶಾಸಕಾಂಗ ಸಭೆಯಲ್ಲಿ ತೀರ್ಮಾನವಾಗಿಲ್ಲ. ಅಂಥದ್ದರಲ್ಲಿ ಅದನ್ನು ಹಿಡಿದುಕೊಂಡು ಎಲ್ಲಾ PIL ಹೋಗಿ ಕಸ್ತೂರಿರಂಗನ್ ರಿಪೋರ್ಟ್ ಪ್ರಕಾರ ಇವರನ್ನು ಒಕ್ಕಲೆಬ್ಬಿಸಿ, ಶೃಂಗೇರಿಯವರನ್ನು ಒಕ್ಕಲೆಬ್ಬಿಸಿ, ಕೊಪ್ಪಳದವರನ್ನು ಒಕ್ಕಲೆಬ್ಬಿಸಿ, ತೀರ್ಥಹಳ್ಳಿಯವರನ್ನು ಒಕ್ಕಲೆಬ್ಬಿಸಿ ಎಂದು ಹೈಕೋರ್ಟ್ ತೀರ್ಪುಗಳು ಬರುತ್ತವೆ. ಅದನ್ನು ಹಿಡಿದುಕೊಂಡು ಬಂದು ಆರ್.ಎಫ್.ಒ.ಗಳೆಲ್ಲಾ ಒಕ್ಕಲೆಬ್ಬಿಸುವುದು. ಹಾಗಾಗಿ ಮೊದಲಿಗೆ ನಮಗೆ ಕಸ್ತೂರಿರಂಗನ್ ರಿಪೋರ್ಟ್ ಎನ್ನುವ ರಿಪೋರ್ಟ್ ಏನು? ಅದರ ಸ್ಥಿತಿ-ಗತಿ ಏನು? ಅದು ಯಾವ ಸ್ಥಿತಿಯಲ್ಲಿದೆ? ಅದಕ್ಕೆ ಶಾಸಕಾಂಗ ಸಭೆ ಏನು ತೀರ್ಮಾನ ತೆಗೆದುಕೊಂಡಿದೆ? ಅದರ ಬಗ್ಗೆ ಸರ್ಕಾರ ಏನು ತೀರ್ಮಾನ ತೆಗೆದುಕೊಂಡಿದೆಯೆಂಬುದು ಸ್ಪಷ್ಟವಾದರೆ, ಇದರಿಂದ ಸ್ವಲ್ಪ ಗೊಂದಲ ನಿವಾರಣೆಯಾಗುತ್ತದೆ.

ಶ್ರೀ ಡಿ.ಕೆ. ಶಿವಕುಮಾರ್:- ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಮುಖ್ಯಮಂತ್ರಿಯವರು ಅದಕ್ಕೆ ಒಂದು ಕ್ಯಾಬಿನೆಟ್ ಸಬ್ ಕಮಿಟಿಯನ್ನು form ಮಾಡಿದ್ದಾರೆ. ಆದರ ಬಗ್ಗೆ complete ಈಗಾಗಲೇ ಪ್ರತಿಯೊಂದು point ಅವರು ಏನೇನು raise ಮಾಡಿದ್ದಾರೆ, ಅದೆಲ್ಲಾ Central Government ಏನೇನು clarification ಕೇಳಿದೆ, ಅದಕ್ಕೆಲ್ಲಾ ಹೆಚ್ಚು ಕಡಿಮೆ ನಿನ್ನೆ ಒಂದು ಹಂತಕ್ಕೆ ಬಂದಿದೆ. I think within next four to five days ರೆಡಿಯಾಗುತ್ತದೆ,

ಆಮೇಲೆ ಸರ್ಕಾರ cabinetಗೆ ಬಂದು ನಮ್ಮ opinion ಏನಿದೆಯೆಂದು, ಬಹುಶಃ ಕಸ್ತೂರಿರಂಗನ್ ರಿಪೋರ್ಟ್......

ಶ್ರೀ ವಿ. ಸುನಿಲ್‌ಕುಮಾರ್:- ಮಾನ್ಯ ಅಧ್ಯಕ್ಷರೆ, ತಾವು opinion ಕೊಡುವುದಕ್ಕಿಂತ ಮುಂಚೆ ಕಸ್ತೂರಿರಂಗನ್ ರಿಪೋರ್ಟ್‌ನಲ್ಲಿ ಬರುವಂಥ ಆ ಭಾಗದ ಎಲ್ಲಾ ಶಾಸಕರುಗಳ ಒಂದು ಸಭೆಯನ್ನು ಕರೆದು, ನಮ್ಮಗಳ ಅಭಿಪ್ರಾಯಗಳನ್ನು ತೆಗೆದುಕೊಳ್ಳುವುದು ಒಳ್ಳೆಯದು, ಏಕೆಂದರೆ, ನಾವೆಲ್ಲಾ ಆ ಭಾಗದಿಂದ ಬಂದವರು, ನಮಗೆ ಅದರ ಸಾಧಕ-ಬಾಧಕಗಳೆಲ್ಲಾ ಗೊತ್ತಿದೆ.

ಶ್ರೀ ವೈ.ಎಸ್. ದತ್ತಾ:- ಮಾನ್ಯ ಅಧ್ಯಕ್ಷರೆ, ಸದನದಲ್ಲಿ ಚರ್ಚೆಯಾಗಬೇಕು.

ಶ್ರೀ ವಿ. ಸುನಿಲ್‌ಕುಮಾರ್:- ಮಾನ್ಯ ಅಧ್ಯಕ್ಷರೆ, ಆ ಭಾಗದಲ್ಲಿ 24 ರಿಂದ 26 ಜನ ಶಾಸಕರು ಬರುತ್ತಾರೆ. ಅವರನ್ನೆಲ್ಲಾ ಕರೆದು ಕಸ್ತೂರಿರಂಗನ್ ವರದಿಯು ಸಾಧಕ-ಬಾಧಕ ಏನು, ಅದು ಜಾರಿಯಾದರೆ ಏನಾಗುತ್ತದೆ, ಎಂಬ ಬಗ್ಗೆ ವಿಸ್ತೃತವಾಗಿ ಚರ್ಚೆ ಮಾಡಿ. ಈಗಾಗಲೇ ಎಲ್ಲಾ ಕಡೆಗಳಲ್ಲೂ ಪ್ರತಿಭಟನೆಗಳು ನಡೆಯುತ್ತಿವೆ. ನಮ್ಮನ್ನು ಕರೆಯದೇ direct ಆಗಿ ವರದಿಯನ್ನು ಕೊಡುವುದಾದರೆ ಹೇಗೆ ಆಗುತ್ತದೆ?

ಅಧ್ಯಕ್ಷರು:- ಮಾನ್ಯ ಸುನಿಲ್ ಕುಮಾರ್‌ರವರೆ, ಕಸ್ತೂರಿರಂಗನ್ ರಿಪೋರ್ಟ್ ಅನ್ನು ಈ ಸದನದಲ್ಲಿ ಹೇಗೆ ಮಾತನಾಡುವುದಕ್ಕೆ ಆಗುತ್ತದೆ, ಅದನ್ನು ಕೇಂದ್ರಸರ್ಕಾರಕ್ಕೆ ಸಲ್ಲಿಸಿರುವುದು. ಅಲ್ಲಿ ಮಾಡಬೇಕು.

ಶ್ರೀ ವೈ.ಎಸ್.ವಿ. ದತ್ತಾ:- ಮಾನ್ಯ ಅಧ್ಯಕ್ಷರೆ, ನಾವು ಒಪ್ಪಿಕೊಳ್ಳುತ್ತೇವೆ. ಅದು ಕೇಂದ್ರಸರ್ಕಾರದ ರಿಪೋರ್ಟ್ ಎಂದು ಇಟ್ಟುಕೊಳ್ಳಿ, ಆದರೆ ಕೇರಳದವರು reject ಮಾಡಿದ್ದಾರೆ, ಅವರು ಅದಕ್ಕೆ ಸೊಪ್ಪು ಹಾಕಿಲ್ಲ, ಉಪ್ಪು ಹಾಕಿಲ್ಲ.

ಅಧ್ಯಕ್ಷರು:- ಅವಕಾಶ ಇದ್ದರೆ ಮಾಡೋಣ, ಮಾನ್ಯ ಕಾನೂನು ಸಚಿವರೆ, ಈಗ ಮಾನ್ಯ ರಾಮಸ್ವಾಮಿ ರಿಪೋರ್ಟ್, ಬಾಲಸುಬ್ರಮಣ್ಯನ್ ರಿಪೋರ್ಟ್ ಇದೆಯಲ್ಲಾ, ಇದು ಸಚಿವ ಸಂಪುಟದಲ್ಲಿ ಒಪ್ಪಿಗೆಯಾಗಿದೆಯೇ? ಎಲ್ಲರೂ ಅದನ್ನು ಹಿಡಿದುಕೊಂಡು eviction ಎಂದು ಹೊರಡುತ್ತಾರೆ. ಆ ರಿಪೋರ್ಟ್ ಸರ್ಕಾರದಲ್ಲಿ approve ಆಗಿದೆಯೇ?

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ಡಿ.ಸಿ.ಗಳು ಬಾಲಸುಬ್ರಮಣ್ಯನ್ ರಿಪೋರ್ಟ್ ಆಧಾರದ ಮೇಲೆ voluntary ಆಗಿ notice ಕೊಡುತ್ತಾರೆ.

ಅಧ್ಯಕ್ಷರು:- ನನಗೆ ಗೊತ್ತಿರಲಿಲ್ಲ. ರಿಪೋರ್ಟ್ ಸರ್ಕಾರ ಮಾಡಿದ್ದು, ಸರ್ಕಾರಕ್ಕೆ ರಿಪೋರ್ಟ್ ಕೊಡಬೇಕು, ಅದನ್ನು ಕೊಟ್ಟ ಮೇಲೆ, ಆ ರಿಪೋರ್ಟ್ ಅನ್ನು ಒಪ್ಪಿಕೊಂಡು relevant Notification, Order issue ಮಾಡಿದರೆ, then it will come into effect. The report is a administrative. ಅದನ್ನೇ ಎಲ್ಲರೂ ಹೈಕೋರ್ಟ್‌ಗೆ ಹಾಕುವುದು, ಮಾಡುವುದು, ಇದು ಏನು ವ್ಯವಹಾರ....

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, cabinet approval ಇಲ್ಲದೇ ಇದನ್ನು implement ಮಾಡುವಂಥದ್ದು ನಡೆಯುತ್ತಿದೆ. Action taken report ಇಲ್ಲ, ಏನು ಇಲ್ಲ, ಅವರು ವರದಿಯನ್ನು ಕೊಟ್ಟಿದ್ದಾರೆ, ಅಷ್ಟೆ.

ಶ್ರೀ ವೈ.ಎಸ್.ವಿ. ದತ್ತಾ:- ಮಾನ್ಯ ಅಧ್ಯಕ್ಷರೆ, ಅಡ್ವೋಕೇಟ್ ಜನರಲ್‌ರವರು ಹೈಕೋರ್ಟ್‌ಗೆ submission ಮಾಡುತ್ತಾರೆಂದರೆ, ಅದಕ್ಕೆ cabinet approval ಆಗಿದೆಯೇ? ಸದನದಲ್ಲಿ ಚರ್ಚೆ ಆಗಿದೆಯೇ?

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ನಾನು ಮುಖ್ಯಮಂತ್ರಿಯಾಗಿದ್ದಾಗಲೂ ಕೆಲವು ಜಿಲ್ಲಾಧಿಕಾರಿಗಳು ಇದನ್ನು implement

ಮಾಡುವುದಕ್ಕೆ ಹೊರಟಾಗ ನಾನು direction ಕೊಟ್ಟು ನಿಲ್ಲಿಸಿದೆ. ಇವತ್ತು ನಾವು ಎಲ್ಲಿ direction ಕೊಟ್ಟಿದ್ದೇವೆ? ನಮ್ಮ cabinet direction ಕೊಟ್ಟಿಲ್ಲ, ಸರ್ಕಾರವೂ direction ಕೊಟ್ಟಿಲ್ಲ. ಬಾಲಸುಬ್ರಮಣ್ಯನ್ ವರದಿ ಆಧಾರದ ಮೇಲೆಯೇ ಕೆಲವು ಡಿ.ಸಿ.ಗಳು eviction notice ಕೊಡುವುದಕ್ಕೆ ಶುರು ಮಾಡಿದ್ದರು. ಅದು ನನ್ನ ಗಮನಕ್ಕೆ ಬಂದ ಮೇಲೆ ನಾನು immediate ಆಗಿ instruction ಕೊಟ್ಟಿದ್ದೇನೆ. ನಾವು ಅದನ್ನು adopt ಮಾಡಿಕೊಂಡಿಲ್ಲ, action taken report ಇಲ್ಲ, ಏನೂ ಇಲ್ಲದೇ ಇದು ನಿರಂತರವಾಗಿ ನಡೆಯುತ್ತಿದೆ. ದಯವಿಟ್ಟು ತಾವು ಇದರ ಬಗ್ಗೆ ಕಾಳಜಿ ತೆಗೆದುಕೊಳ್ಳಿ.

ಅಧ್ಯಕ್ಷರು:- ಮಾನ್ಯ ವಿರೋಧಪಕ್ಷದ ನಾಯಕರೆ, ಈಗ ಏನಾಗಿದೆಯೆಂದರೆ, ನಾನು ಮೊನ್ನೆ ಡಿ.ಸಿ.ಯವರ ಹತ್ತಿರ ಹೋಗಿದ್ದೆ, ಅವರು ನಮ್ಮ ಜಿಲ್ಲೆಯಲ್ಲಿ ಇಷ್ಟು eviction ಮಾಡಬೇಕೆಂದು ತೋರಿಸಿದರು. ಅದನ್ನು ಯಾವ basis ಮೇಲೆ ಇಷ್ಟು encroach ಮಾಡಬೇಕೆಂದು ಇದೆ, ಇದಕ್ಕೆ cabinet direction ಆಗಿದೆಯೇ? ಅದು ಏನಾಗಿದೆ?

ಶ್ರೀ ವೈ.ಎಸ್.ವಿ. ದತ್ತಾ:- ಮಾನ್ಯ ಅಧ್ಯಕ್ಷರೆ, ಅದಕ್ಕೆ ಸರ್ಕಾರ ಉತ್ತರ ಕೊಡಬೇಕು, ಏಕೆಂದರೆ ನಾವು ಬಾಲಸುಬ್ರಮಣ್ಯನ್ ರಿಪೋರ್ಟ್‌ಗೆ....

ಶ್ರೀ ಹೆಚ್.ಸಿ. ಬಾಲಕೃಷ್ಣ:- ಮಾನ್ಯ ಕಾನೂನು ಮಂತ್ರಿಯವರೆ, ಅದರ ಬಗ್ಗೆ ಸ್ವಲ್ಪ ಹೇಳಿ.

ಶ್ರೀ ಕೆ.ಜಿ. ಬೋಪಯ್ಯ:- ಮಾನ್ಯ ಅಧ್ಯಕ್ಷರೆ, Advocate General ಅವರೇ ಸೇರಿಕೊಂಡು ಅದಕ್ಕೆ ಉತ್ತರ ಕೊಡುವುದು. ಸರ್ಕಾರದವರ instruction ಸಹ ತೆಗೆದುಕೊಳ್ಳುವುದಿಲ್ಲ. ದುರದೃಷ್ಟ ಏನೆಂದರೆ, ಆ ಫಾರೆಸ್ಟ್‌ನವರು ಅವರಿಗೆ ಬೇಕಾದ Advocates ಅನ್ನು appoint ಮಾಡಿಕೊಳ್ಳುತ್ತಾರೆ. ಅದು ಫಾರೆಸ್ಟ್ ಮಿನಿಸ್ಟರ್‌ಗೂ ಗೊತ್ತಿರುವುದಿಲ್ಲ, ಲಾ

ಮಿನಿಸ್ಟರ್‌ಗೆ ಮೊದಲೇ ಗೊತ್ತಿರುವುದಿಲ್ಲ. ಅವರು ಹಾಕುತ್ತಾರೆ, ಆರ್ಡರ್ ಮಾಡುತ್ತಾರೆ, ಈಗ ಯಾವುದೇ notice ನೋಡಿದರೂ ಬಾಲಸುಬ್ರಮಣ್ಯಯನ್ ವರದಿಯನ್ನು ಆಧರಿಸಿ ಹೈಕೋರ್ಟ್ writ petition ಗಳಲ್ಲಿ ಆದೇಶ ಮಾಡುತ್ತದೆ. ನಿಮ್ಮ ಸರ್ಕಾರದ ಆದೇಶ ಅವರಿಗಿಲ್ಲ. ನಾನು ಹೇಳುತ್ತೇನೆ, ನಿಮಗೆ ನಾಚಿಕೆಯಾಗಬೇಕು. ಒಬ್ಬ ತಹಶೀಲ್ದಾರ್ ಸರ್ಕಾರವನ್ನೂ ಕೇರ್ ಮಾಡದೇ ನೋಟಿಸ್ ಕೊಡುತ್ತಿದ್ದಾನೆ. ನೀವು ಸುಮ್ಮನೆ ಕೂರುತ್ತೀರಿ. ಏಕೆ ಹೀಗೆ? ನಿಮಗೇನು ಕಂಟ್ರೋಲ್ ಇಲ್ಲವೇ? ಈ ರೀತಿ ರೈತರ ಮೇಲೆ ಪ್ರತಿದಿನವೂ ನೋಟಿಸ್ ಬರುತ್ತಿದೆ. ಕೇಳುವವರೇ ಇಲ್ಲ ಎಂದರೆ ಅರ್ಥವೇನು? ನಾವು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿದ್ದೇವೆಯೋ ಅಥವಾ ಅಧಿಕಾರಿಶಾಹಿ ವ್ಯವಸ್ಥೆಯಲ್ಲಿದ್ದೇವೆಯೋ? ಒಂದು ಸ್ವಲ್ಪ ಯೋಚನೆ ಮಾಡಬೇಕಲ್ಲವೇ, ಏನೂ ಇಲ್ಲ.

ಶ್ರೀ ವೈ.ಎಸ್.ವಿ. ದತ್ತಾ:- ಭೂ ಕಬಳಿಕೆ ವಿಚಾರದಲ್ಲಿ ನಿಷ್ಠೂರವಾಗಿ ಕ್ರಮ ತೆಗೆದುಕೊಳ್ಳಿ, ಅದರಲ್ಲಿ ಬೇರೆ ಪ್ರಶ್ನೆಯೇ ಇಲ್ಲ. ಅದು ಯಾರೇ ಆಗಿರಲಿ, ಭೂ ಕಬಳಿಕೆ ಮಾಡಿರುವವರನ್ನು ಮಟ್ಟ ಹಾಕಿ. ಆದರೆ ಅದನ್ನು ಮಾಡಬೇಕಾದರೆ ಅದರಲ್ಲಿ ಮೆಟ್ರೋಪಾಲಿಟನ್ ಸಿಟಿಗಳ ಸುತ್ತಮುತ್ತ ಆಗಿರುವಂಥ ಭೂಕಬಳಿಕೆ ಬಗ್ಗೆ ಮೊದಲನೇ ಹಂತದಲ್ಲಿ, ನಂತರ ಎರಡನೇ ಹಂತದಲ್ಲಿ ಎಂದು ಮಾಡಬೇಕು. ಅದನ್ನು ಬಿಟ್ಟು ಗುಬ್ಬಿ ಮೇಲೆ ಬ್ರಹ್ಮಾಸ್ತ್ರ ಎಂದು ಹೇಳಿ ಹಳ್ಳಿಗಳಲ್ಲಿರುವ ಬಡವರು-ಬಗ್ಗರ ಮೇಲೆಲ್ಲ ಬಾಲಸುಬ್ರಹ್ಮಣ್ಯಂ ವರದಿ ಎಂದು ಹೇಳುತ್ತಾ ಹೋದರೆ ಹೇಗೆ?

ಶ್ರೀ ಬಿ.ಬಿ. ನಿಂಗಯ್ಯ:- ನಮ್ಮ ಕಳಸಾದ ಇನಾಂ ಜಮೀನಿಗೆ ಸಂಬಂಧಪಟ್ಟಂತೆ ಕಳೆದ 12ನೇ ತಾರೀಖಿನಂದು ಕೋರ್ಟ್ ಇತ್ತು. ಪುನಃ 24ನೇ ತಾರೀಖಿಗೆ ಇಟ್ಟಿದ್ದಾರೆ. ತೆರವುಗೊಳಿಸಬಾರದು ಎಂದು ಮಾನ್ಯ ಮುಖ್ಯಮಂತ್ರಿಗಳು ಕೂಡ ಹೇಳಿದರು. ಅದನ್ನು ಡೆಫರ್ ಮಾಡಲಿಕ್ಕೆ ಚರ್ಚೆಯಾಯಿತು. ಕೂಡಲೇ ಒಂದು ಸಭೆಯನ್ನು ಕರೆದು

ಎನ್‌ಕ್ರೋಚ್‌ಮೆಂಟ್ ತೆರವುಗೊಳಿಸುವ ಬಗ್ಗೆ ಒಂದು ತೀರ್ಮಾನ ಮಾಡುತ್ತೇವೆ ಎಂದು ಆಯಿತು. ತಾವೂ ಸಹ ಬಹಳಷ್ಟು ಸಾರಿ ಸರ್ಕಾರಕ್ಕೆ ತಾಕೀತು ಮಾಡಿದ್ದೀರಿ. ಇದರ ಬಗ್ಗೆ ಒಂದು ಸ್ಪಷ್ಟ ನಿರ್ಧಾರಕ್ಕೆ ಬರದೇ ಇರುವುದರಿಂದ, ಮತ್ತೆ 24ನೇ ತಾರೀಖಿಗೆ ಕೋರ್ಟ್ ಇರುವುದರಿಂದ ಅಲ್ಲಿನ ಜನರು ಆತಂಕಕ್ಕೆ ಒಳಗಾಗಿದ್ದಾರೆ. ನಾನು ತಮ್ಮ ಮೂಲಕ ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡುತ್ತೇನೆ, ಆದಷ್ಟು ಬೇಗನೆ ಒತ್ತುವರಿ ತೆರವುಗೊಳಿಸುವಂಥ ವಿಚಾರವನ್ನು ವಿಶೇಷವಾಗಿ ನನ್ನ ಕ್ಷೇತ್ರದಲ್ಲಿ ಕಳಸಾ ಇನಾಂ ಜಮೀನು ವಿಚಾರದಲ್ಲಿ ಒಂದು ಸ್ಪಷ್ಟವಾದ ತೀರ್ಮಾನಕ್ಕೆ ಬರಬೇಕು ಮತ್ತು ಅವರ ನೆರವಿಗೆ ಬರಬೇಕು, ಅವರನ್ನು ಒಕ್ಕಲೆಬ್ಬಿಸಬಾರದು. ಅದಕ್ಕೆ ಸರ್ಕಾರ ಕೋರ್ಟಿಗೆ ಒಂದು ಅಫಿಡವಿಟ್ ಕೊಡಬೇಕು. ಇಲ್ಲದಿದ್ದರೆ ತೆರವುಗೊಳಿಸುವುದು ಶತಃಸಿದ್ಧ ಎಂದು ಅವರು ಹೇಳುತ್ತಿದ್ದಾರೆ. ಆದ್ದರಿಂದ ಒಂದು ಸ್ಪಷ್ಟವಾದಂಥ ತೀರ್ಮಾನಕ್ಕೆ ಬರಬೇಕು.

ಶ್ರೀ ವೈ.ಎಸ್.ವಿ. ದತ್ತಾ:- ಸಾರಾಸಗಟಾಗಿ ಅಡಿಕೆಯ ತೋಟ-ತೋಟಗಳನ್ನೇ ಕತ್ತರಿಸಿ ಹಾಕಿಬಿಟ್ಟಿದ್ದಾರೆ. ನಮ್ಮ ಕಣ್ಣಮುಂದೆ ನಮ್ಮ ಮಗನನ್ನು ಕತ್ತರಿಸಿ ಹಾಕಿದ ಹಾಗೆ ರೈತರು ಗೋಳಾಡುತ್ತಿದ್ದಾರೆ. ಕರುಣೆಯೇ ಇಲ್ಲ.

ಶ್ರೀ ಕೆ.ಆರ್. ರಮೇಶ್ ಕುಮಾರ್:- ಮಾನ್ಯ ಅಧ್ಯಕ್ಷರೆ, ತಾವು ಕುತೂಹಲದಿಂದ ಕೆಲವು ಪ್ರಶ್ನೆಗಳನ್ನು ಕೇಳಿದಿರಿ. ಸಾರ್ವಜನಿಕರಲ್ಲಿ ಒಂದು ಅಭಿಪ್ರಾಯ ಏನು ಸ್ಥಾಪನೆಯಾಗಿದೆ ಎಂದರೆ, ಬೆಂಗಳೂರು ಮತ್ತು ಇತರ ನಗರ ಪ್ರದೇಶಗಳಲ್ಲಿ ಬಹಳ ಬೆಲೆಬಾಳತಕ್ಕಂಥ ಸರ್ಕಾರದ ಜಾಗವನ್ನು ಬಹಳ ಪ್ರಭಾವಶಾಲಿಗಳು ಆಕ್ರಮಿಸಿಕೊಂಡಿದ್ದಾರೆ. ಬಾಲಸುಬ್ರಹ್ಮಣ್ಯಂ ಮತ್ತು ಎ.ಟಿ. ರಾಮಸ್ವಾಮಿಯವರ ವರದಿಗಳಲ್ಲಿ ಅದರದ್ದೇ ಹೆಚ್ಚು ಪ್ರಸ್ತಾಪವಾಗಿದೆ ಎನ್ನುವ ಒಂದು ನಂಬಿಕೆಯಿದೆ. ಬಾಲಸುಬ್ರಹ್ಮಣ್ಯಂರವರು ವೈಯಕ್ತಿಕವಾಗಿ ಒಬ್ಬ ದಕ್ಷ, ಪ್ರಾಮಾಣಿಕ ಅಧಿಕಾರಿ. ರಾಮಸ್ವಾಮಿಯವರು ಒಬ್ಬ ಪ್ರಾಮಾಣಿಕ ರಾಜಕಾರಣಿ. ಸನ್ಮಾನ್ಯ ಸದಸ್ಯರಾದ ದತ್ತಾರವರು ಹೇಳಿದಂತೆ, ಬೆಂಗಳೂರು

ಮತ್ತು ಇಂಥ ಮಹಾನಗರದಲ್ಲಿ ಯಾರು ಸರ್ಕಾರದ ಭೂಮಿಯನ್ನು ಆಕ್ರಮಿಸಿಕೊಂಡಿದ್ದಾರೆ, ಸರ್ಕಾರದ ಒಡವೆ ಹಾಕಿಕೊಂಡು ಕುಳಿತುಕೊಂಡಿದ್ದಾರೆ, ಅವರ ಮೇಲೆ ನಾಳೆಯೇ ಕ್ರಮ ಜರುಗಿಸಿ, ಕೈಗೆ ಕೋಳ ಹಾಕಿ ಮೆರವಣಿಗೆ ಮಾಡಿ, ಅದಕ್ಕೆ ನಮ್ಮದೇನೂ ಆಕ್ಷೇಪಣೆಯಿಲ್ಲ. ಆದರೆ ಬಾಲಸುಬ್ರಹ್ಮಣ್ಯಂರವರ ವರದಿಯಿದೆ, ರಾಮಸ್ವಾಮಿಯವರ ವರದಿ ಇದೆ ಎಂದು ಅವರ ಹೆಸರನ್ನಿಟ್ಟುಕೊಂಡು ಇಲ್ಲಿರುವವರನ್ನೆಲ್ಲ ಕಂಪ್ಲೀಟ್‌ಆಗಿ ಇಂಜೆಂಕ್ಷನ್ ತೆಗೆದುಕೊಂಡು ಸುಖವಾಗಿರಿ ಎಂದು ಹೇಳಿ, ಜೀವನ ಮಾಡುವುದಕ್ಕಾಗಿ ಬಂದಿರುವವರನ್ನು ತೆರವುಗೊಳಿಸುವಂತಾಗಬಾರದು. ಏಕೆಂದರೆ, ಈ ಸದನದ ಮುಖಾಂತರ ಮಾಧ್ಯಮದವರಿಗೆ wrong message ಹೋಗಬಾರದು. ಡಾ॥ ಬಾಲಸುಬ್ರಹ್ಮಣ್ಯಂರವರ ವರದಿಯಲ್ಲಿ ಏನು ತಿರುಳಿದೆ, ಯಾವ ಉದ್ದೇಶಕ್ಕಾಗಿ ಅವರ ಸಮಿತಿ ರಚನೆಯಾಗಿತ್ತು, ಯಾವ ಉದ್ದೇಶಕ್ಕಾಗಿ ರಾಮಸ್ವಾಮಿಯವರ ನೇತೃತ್ವದಲ್ಲಿ ಸಮಿತಿ ರಚನೆಯಾಗಿತ್ತು, ಅವರಿಂದ ಏನು ವರದಿ ಬಂದಿದೆ ಅದಕ್ಕೆ ನಾವ್ಯಾರೂ ವಿರುದ್ಧವಿಲ್ಲ. Let not a wrong message go. ನಮ್ಮ ದೇಶದಲ್ಲಿ ಪರಿಸ್ಥಿತಿ ಹೇಗಿದೆ ಎಂದರೆ, ಪಿಕ್–ಪಾಕೆಟರ್ಸ್‌ಗಳ ಫೋಟೋ ತೆಗೆದು ಪೊಲೀಸ್ ಸ್ಟೇಷನ್‌ಗಳಲ್ಲಿ ರೋಗ್ಸ್ ಗ್ಯಾಲರಿ ಎಂದು ಹಾಕುತ್ತಾರೆ. ಆದರೆ ಈ ದೇಶದ ಕೋಟ್ಯಾಂತರ ರೂಪಾಯಿ ಒಡವೆ ಕದ್ದವರು ಯಾರಾದರೂ ಇದ್ದರೆ ಅವರಿಗೆ voluntary disclosure scheme ಕೊಡುತ್ತೇವೆ. ನೀವು ಇಷ್ಟು ದಿವಸದೊಳಗಾಗಿ ಬಂದು ರಿಟರ್ನ್ಸ್ ಫೈಲ್ ಮಾಡಿಕೊಂಡು ನಿಮ್ಮ ಹಣವನ್ನೆಲ್ಲ ರೆಗ್ಯುಲರೈಸ್ ಮಾಡಿಕೊಳ್ಳಬಹುದು ಎಂದು ಹೇಳುತ್ತೇವೆ. ಅವರಿಗೆ ಗೌರವ, ಇವರಿಗೆ ರೋಗ್ಸ್ ಗ್ಯಾಲರಿ. ಅಂಥ ದೇಶವಿದು. ಆದ್ದರಿಂದ wrong message ಹೋಗುವುದು ಬೇಡ. ನಮ್ಮವರು ಅಲ್ಲೆಲ್ಲೋ ಅರ್ಧ ಎಕರೆ–ಒಂದು ಎಕರೆಯಲ್ಲಿ ಆಯ್ದುಕೊಂಡು ತಿನ್ನುತ್ತಿದ್ದಾರೆ, ಅವರ ಸುದ್ಧಿಗೆ ಹೋಗುವುದು ಬೇಡ, ಗುಬ್ಬಿ ಮೇಲೆ ಬ್ರಹ್ಮಾಸ್ತ್ರ ಬೇಡ. ಯಾವುದಕ್ಕಾಗಿ ನಿಯೋಜಿಸಿದ್ದೀರೋ ಅದರ ಮೇಲೆ ಬ್ರಹ್ಮಾಸ್ತ್ರ ಪ್ರಯೋಗ ಆಗಲಿ ಎಂದಷ್ಟೇ ಹೇಳುತ್ತಿದ್ದೇವೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ನಾನು ಕೃಷಿ ಬಗ್ಗೆ ಚರ್ಚೆ ಮಾಡಲಿಕ್ಕೆ ಹೋದಾಗ ಈ ವಿಷಯ ಪ್ರಾರಂಭವಾಗಿದೆ. ಮುಖ್ಯಮಂತ್ರಿಗಳು ಇಲ್ಲೇ ಇದ್ದಾರೆ. ಮೊನ್ನೆ ನಾನು ತಮಗೂ ಮನವಿ ಮಾಡಿದ್ದೇನೆ. ನಾನು ಒಂದು ಸ್ಪಷ್ಟೀಕರಣ ಕೊಡಲು ಬಯಸುತ್ತೇನೆ. ಎ.ಟಿ. ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ರಚನೆ ಮಾಡಿದ ಸದನ ಸಮಿತಿಯಲ್ಲಿ ರೋಷನ್ ಬೇಗ್‌ರವರೂ ಸದಸ್ಯರಾಗಿದ್ದರು. ಆವತ್ತು ಸಮ್ಮಿಶ್ರ ಸರ್ಕಾರವಿದ್ದಾಗ ನಾವು ಸದನ ಸಮಿತಿ ರಚನೆ ಮಾಡಿದ ಉದ್ದೇಶವೆಂದರೆ, ಬೆಂಗಳೂರು ನಗರದ ಸುತ್ತಮುತ್ತ ಇರುವಂಥ ಸರ್ಕಾರದ ಭೂಮಿಯನ್ನು ಕಬಳಿಕೆ ಮಾಡಿರುವುದನ್ನು ಕಂಡುಹಿಡಿಯಲು ಎ.ಟಿ. ರಾಮಸ್ವಾಮಿಯವರ ನೇತೃತ್ವದಲ್ಲಿ ಸದನ ಸಮಿತಿಯನ್ನು ಆವತ್ತು ಸಭಾಧ್ಯಕ್ಷರಾಗಿದ್ದಂಥ ಕೃಷ್ಣರವರು ಮಾಡಿದರು. ನಂತರ subsequent ಆಗಿ ಬಂದ ಸರ್ಕಾರದವರು ಏನು ಮಾಡಿದರೆಂದರೆ, ಅವರು ಯಾರೆಂದು ನಾನು ಹೆಸರು ಹೇಳುವುದಕ್ಕೆ ಹೋಗುವುದಿಲ್ಲ, ಇಡೀ ರಾಜ್ಯದಲ್ಲಿ ಎಲ್ಲೆಲ್ಲಿ ಒತ್ತುವರಿಯಾಗಿದೆ ಎಲ್ಲದರ ಬಗ್ಗೆ ವರದಿ ಕೊಡಿ ಎಂದು ಬಾಲಸುಬ್ರಹ್ಮಣ್ಯಂರವರ ಸಮಿತಿಯನ್ನು ರಚನೆ ಮಾಡಿ ತೀರ್ಮಾನ ಮಾಡಿಬಿಟ್ಟರು.

ಅಧ್ಯಕ್ಷರು:- ಅವರು ಇಲ್ಲ ಎಂದು ಹೇಳುತ್ತಿದ್ದಾರೆ.

ಶ್ರೀ ಜಗದಿಶ ಶೆಟ್ಟರ್:- ನಾವು ಆ ರೀತಿ ಏನೂ ಕೊಟ್ಟಿಲ್ಲ. ಏನು ವರದಿ ಕೊಟ್ಟಿದ್ದರು, ಅದರ ಪ್ರಕಾರ ಇಂಪ್ಲಿಮೆಂಟ್ ಮಾಡಿ ಎಂದು ನಾವು ಹೇಳಿದ್ದೆವು.

ಅಧ್ಯಕ್ಷರು:- ಆ ವರದಿಯನ್ನು ಸರ್ಕಾರ accept ಮಾಡಿದೆಯೇ?

ಶ್ರೀ ಕೆ.ಆರ್. ರಮೇಶ್ ಕುಮಾರ್:- ರಾಜ್ಯಾದ್ಯಂತ ಆಗಿರುವುದನ್ನು ಬಾಲಸುಬ್ರಹ್ಮಣ್ಯಂರವರು ವರದಿ ಮಾಡಬೇಕು ಎಂದು ಮಾಡಿದ್ದರು. ಬೇಕಾದರೆ ಗವರ್ನಮೆಂಟ್ ರೆಕಾರ್ಡ್ ಇರುತ್ತದೆ, ನೋಡಿ.

ಅಧ್ಯಕ್ಷರು:- ಆ ರಿಪೋರ್ಟನ್ನು ಗವರ್ನಮೆಂಟ್ ಆಕ್ಸೆಪ್ಟ್ ಮಾಡಿದೆಯಾ?

ಶ್ರೀ ಜಗದೀಶ ಶೆಟ್ಟರ್:- ಇಲ್ಲ, ಅದು ಯಾವಾಗಲೂ ಆಕ್ಸೆಪ್ಟ್ ಆಗಿಲ್ಲ. ಅದು ಕ್ಯಾಬಿನೆಟ್‌ನಲ್ಲಿಯೂ ಡಿಸ್ಕಷನ್ ಆಗಿಲ್ಲ, ಆಕ್ಸೆಪ್ಟ್ ಆಗಿಲ್ಲ.

ಶ್ರೀ ವೈ.ಎಸ್.ವಿ. ದತ್ತಾ:- ಹಾಗಿದ್ದರೆ ಅಡ್ವೊಕೇಟ್ ಜನರಲ್‌ರವರು ಹೇಗೆ ಹೋಗುತ್ತಾರೆ? ಕ್ಯಾಬಿನೆಟ್ ಅಪ್ರೋವ್ ಮಾಡಿ ಎಂದು ಆಗ ಮುಖ್ಯಮಂತ್ರಿಗಳಾಗಿದ್ದವರು ಹೇಳುತ್ತಾರೆ. ಹಾಗಿದ್ದರೆ ಈಗಿನ ಸರ್ಕಾರದ ಅಡ್ವೊಕೇಟ್ ಜನರಲ್ ರವರು ಹೈಕೋರ್ಟ್ ಮುಂದೆ ಹೇಗೆ ಹೋಗುತ್ತಾರೆ?

ಶ್ರೀ ಪ್ರಮೋದ್ ಮಧ್ವರಾಜ್:- Land Grabbing Control Act ಅನ್ನು ಸದಾನಂದಗೌಡರು ಮುಖ್ಯಮಂತ್ರಿಯಾಗಿದ್ದಾಗ ಈ ಸದನದಲ್ಲಿ ತಂದಿದ್ದಾರೆ.

ಅಧ್ಯಕ್ಷರು:- ಸರ್ಕಾರದ ಆಕ್ಸೆಪ್ಟ್ ಆಗಿಲ್ಲ ಎಂದು ಹೇಳುತ್ತಿದ್ದಾರಲ್ಲ. ಜಯಚಂದ್ರರವರೇ, please find out that whether it is not accepted.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಇಲ್ಲಿರುವಂಥ ವಿಷಯ ಅತ್ಯಂತ ಗಂಭೀರವಾದ ವಿಷಯ, ಇದು burning issue ಎಂದು ನಾನು ಹೇಳಿದೆ. ಕಳೆದ ವಾರ ಮುಖ್ಯಮಂತ್ರಿಗಳು ಮಧ್ಯಪ್ರವೇಶಿಸದಿದ್ದರೆ 2-3 ಎಕರೆ ಜಮೀನುಗಳು ಇಟ್ಟುಕೊಂಡಿದ್ದಂಥವರನ್ನು ತೆರವುಗೊಳಿಸುತ್ತಿದ್ದರು. ಅರಣ್ಯ ಇಲಾಖೆಯ ಅಧಿಕಾರಿಗಳು ಸುಮಾರು 500 ಜನ ಪೋಲೀಸರನ್ನು ಕರೆದುಕೊಂಡು ಬೆಳಗ್ಗೆ ಎಂಟು ಗಂಟೆಗೇ ಅಲ್ಲಿ ಬಂದು ಕುಳಿತುಬಿಟ್ಟಿದ್ದರು. ಈ ವಿಷಯ ನಮಗೆ ಹಿಂದಿನ ರಾತ್ರಿಯೇ ಗೊತ್ತಾಗಿ ನಾವು ಅಲ್ಲಿಗೆ ಹೋಗಿ ಆ ಸ್ಪಾಟ್‌ನಲ್ಲಿ ಕುಳಿತುಕೊಂಡು ಅಧಿಕಾರಿಗಳು ಒಳಗೆ ಎಂಟರ್ ಆಗಲು ಬಿಡಲಿಲ್ಲ, ಸಾವಿರಾರು ಜನ ಅಲ್ಲಿ ಕುಳಿತುಕೊಂಡರು. ಆಗ ನಾನು ತಮ್ಮಲ್ಲಿ ಮನವಿ ಮಾಡಿದೆ, ರಮಾನಾಥರೈರವರಿಗೂ ಫೋನ್ ಮಾಡಿದೆ, ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಾದ ಮದನ ಗೋಪಾಲ್‌ರವರೊಂದಿಗೂ ಮಾತನಾಡಿದೆ.

ನಾನು ಚಾರ್ಜ್ ತೆಗೆದುಕೊಂಡು ಎರಡು ದಿವಸವಾಗಿದೆ, ವಿಷಯವೇನೆಂದು ನನಗೆ ಗೊತ್ತಿಲ್ಲ, ನಾನು ಪರಿಶೀಲನೆ ಮಾಡಿ ನೋಡುತ್ತೇನೆ ಎಂದು ಅವರು ಹೇಳಿದರು. ಆಗ ತಾವು ಮಧ್ಯೆ ಪ್ರವೇಶಿಸಿದ್ದರಿಂದ ಈಗ ಅದು ತಾತ್ಕಾಲಿಕವಾಗಿ ನಿಂತಿದೆ. ಯಾವ ಕ್ಷಣದಲ್ಲಿ ಬೇಕಾದರೂ ಅವರನ್ನು ಒಕ್ಕಲೆಬ್ಬಿಸಬಹುದು. ಕೋರ್ಟ್ ಆದೇಶಗಳಿವೆ ಎಂದು ಹೇಳಿ ಇವತ್ತು ನಾವು ಅದರ ಮೇಲೇ ತೀರ್ಮಾನ ಮಾಡುವುದಕ್ಕೆ ಹೋದರೆ ಲಕ್ಷಾಂತರ ಕುಟುಂಬಗಳವರು ಬೀದಿ ಪಾಲಾಗುತ್ತಾರೆ. ಆ ಭಾಗದಲ್ಲಿ ಕೆಲಸ ನಿರ್ವಹಿಸುತ್ತಿರುವಂಥ ಸುಮಾರು 15 ಲಕ್ಷ ಕೂಲಿ ಕಾರ್ಮಿಕರಿದ್ದಾರೆ. ಆಮೇಲೆ ಅವರನ್ನೆಲ್ಲ ಎಲ್ಲಿಗೆ ಕಳುಹಿಸುತ್ತೀರಿ? ಕಾಪಿ ಬೆಳೆಗಾರರಿಂದ ಸುಮಾರು ನಾಲ್ಕೂವರೆಯಿಂದ ಐದು ಸಾವಿರ ಕೋಟಿ ರೂಪಾಯಿಗಳ ಫಾರಿನ್ ಎಕ್ಸ್‌ಚೇಂಜ್ ನಮ್ಮ ದೇಶಕ್ಕೆ ಬರುತ್ತಿದೆ. ಒತ್ತುವರಿಯಾಗಿದೆ ಎಂದು ಹೇಳಿ ಅವರನ್ನೆಲ್ಲ ನೀವು ಖಾಲಿ ಮಾಡಿಸಿದರೆ ಸರ್ಕಾರಕ್ಕೆ ಆದಾಯ ಎಲ್ಲಿಂದ ಬರುತ್ತದೆ? ರಮೇಶ್ ಕುಮಾರ್‌ರವರು ಹೇಳಿದರು, ಇವತ್ತು ನ್ಯಾಯಾಧೀಶರುಗಳು ಬಂಡೀಪುರಕ್ಕೆ ಹೋಗಿ ಅಲ್ಲಿ ಪರಿಸ್ಥಿತಿ ಏನಿದೆ ಎನ್ನುವುದನ್ನು ನೋಡಬೇಕು. ಅದನ್ನು ಅರಣ್ಯ ಪ್ರದೇಶ ಎಂದು ಹೇಳುತ್ತೇವೆ. ಮುಖ್ಯಮಂತ್ರಿಗಳೂ ಹಲವಾರು ಬಾರಿ ಅಲ್ಲಿಗೆ ಹೋಗಿರುತ್ತೀರಿ. ಅರಣ್ಯ ಇಲಾಖೆಯ ಅಧಿಕಾರಿಗಳು ಎಷ್ಟರಮಟ್ಟಿಗೆ ಕಾಡನ್ನು ಉಳಿಸಿ ಬೆಳೆಸಿದ್ದಾರೆ ಎನ್ನುವುದಕ್ಕೆ ಎಷ್ಟೋ ಲಕ್ಷ ಗಿಡಗಳನ್ನು ಬೆಳೆಸಿದ್ದಾರೆ ಎಂದು ಮಾಹಿತಿ ಕೊಟ್ಟಿದ್ದೀರಿ.

ಶ್ರೀ ಕೆ.ಜಿ. ಬೋಪಯ್ಯ:- ಅವರು ಜುಲೈ, ಆಗಸ್ಟ್ ತಿಂಗಳಲ್ಲಿ ನಮ್ಮ ಕಾಡಿನೊಳಗೆ ಒಂದು ಸಲ ಬರಲಿ. ಆಗ ಅಲ್ಲಿ ಜಿಗಣೆ ಅಥವಾ ಮತ್ತೊಂದರಿಂದ ಕಚ್ಚಿಸಿಕೊಂಡಾಗ ಅಲ್ಲಿನ ಜನರ ಬದುಕು ಹೇಗೆ ಎನ್ನುವುದು ಗೊತ್ತಾಗುತ್ತದೆ, ಜನಗಳ ಕಷ್ಟ ಏನು ಎನ್ನುವುದು ಗೊತ್ತಾಗುತ್ತದೆ. ಆ ತಿಂಗಳುಗಳಲ್ಲಿ ಅವರು ಬಂದು ನೋಡಬೇಕು.

...

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಅವರು ಒಳ್ಳೆಯ ಐಷಾರಾಮಿ ಅತಿಥಿ ಗೃಹಗಳಲ್ಲಿರುತ್ತಾರೆ. ಅಲ್ಲಿ ಬಂದು ಜಿಗಣೆಯಿಂದ ಕಚ್ಚಿಸಿಕೊಳ್ಳಲು ಅವರು ಬರುತ್ತಾರೆಯೇ? ಒಳ್ಳೊಳ್ಳೆಯ ಅತಿಥಿ ಗೃಹಗಳನ್ನಿಟ್ಟುಕೊಂಡಿದ್ದಾರೆ, ಅಲ್ಲಿಗೆ ಬರುತ್ತಾರೆ. ಅಲ್ಲಿಗೆ ಬಂದು ನೆಮ್ಮದಿಯಿಂದ ಇರುತ್ತಾರೆ. ಅಲ್ಲಿ ಕಷ್ಟವನ್ನು ಅನುಭವಿಸುವುದು ರೈತರು. ಮಾನ್ಯ ಅಧ್ಯಕ್ಷರೆ, ನಾನು ಒಂದು ವಿಷಯವನ್ನು ನಿಮ್ಮ ಗಮನಕ್ಕೆ ತರಲು ಬಯಸುತ್ತೇನೆ, ನಾನು ಮುಖ್ಯಮಂತ್ರಿಯಾಗಿದ್ದಾಗ ಮೂರು ದಿನ ಉತ್ತರ ಕನ್ನಡ ಜಿಲ್ಲೆಯ ಪ್ರವಾಸಕ್ಕೆ ಹೋಗಿದ್ದೆ. ಅಲ್ಲಿ ಜನ ನನ್ನ ಮುಂದೆ ಇದೇ ಸಮಸ್ಯೆಯನ್ನಿಟ್ಟರು. ನಾನು ತಕ್ಷಣ ಬಂದು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾಗಿದ್ದಂಥ ಜಾಮದಾರ್‌ರವರು, ಅರಣ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರು ಮತ್ತು ಆ ಭಾಗದ ಎಲ್ಲ ಶಾಸಕರ ಒಂದು ಸಭೆಯನ್ನು ಕರೆದು ಇದಕ್ಕೆ ನಾವು ಏನು ತೀರ್ಮಾನ ಮಾಡಬೇಕಾಗುತ್ತದೆ, ನೀವು ಬೆಂಗಳೂರಿನಲ್ಲಿ ಕುಳಿತುಕೊಂಡು ಕೆಲಸ ಮಾಡುವುದಿಲ್ಲ, ನೀವು ಆ ಸ್ಪಾಟ್‌ಗಳಿಗೆ ಹೋಗಿ ಏನು ಪರಿಹಾರ ಕಂಡುಹಿಡಿಯಬಹುದು ಎನ್ನುವುದನ್ನು ತೀರ್ಮಾನ ಮಾಡಿ ಎಂದು ನಾನು ಒಂದು ಕಮಿಟಿ ಮಾಡಿದೆ. ನಾವು ಅಧಿಕಾರ ಕಳೆದುಕೊಂಡ ನಂತರ ಆ ಕಮಿಟಿ ಅಲ್ಲೇ ನಿಂತು ಹೋಯಿತು. ಇದು ಅತ್ಯಂತ ಬಹಳ ಗಂಭೀರವಾದ ಶೂನ್ಯ ಇರುವುದರಿಂದ ಈ ಅಧಿಕಾರಿಗಳನ್ನು ನೀವು ನಂಬುವುದಕ್ಕಾಗುವುದಿಲ್ಲ. ಅಧಿಕಾರಿಗಳು ಕೋರ್ಟು ಎಂದು ಹೇಳಿ ಆಮೇಲೆ ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ಕೂಡ ತರುವುದಿಲ್ಲ.

ಅಧ್ಯಕ್ಷರು:- ಮಾನ್ಯ ಕುಮಾರಸ್ವಾಮಿಯವರೆ, ಅಧಿಕಾರಿಗಳು ಯಾರ ನಿಯಂತ್ರಣದಲ್ಲಿದ್ದಾರೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಮಾನ್ಯ ಅಧ್ಯಕ್ಷರೆ, ಇದು ಬಹಳ ಪ್ರಮುಖವಾದಂತಹ ವಿಚಾರವಾಗಿದೆ.

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು):- ಮಾನ್ಯ ಕುಮಾರಸ್ವಾಮಿಯವರೆ ಈ ಬಗ್ಗೆ ಬಜೆಟ್‌ನಲ್ಲಿ ಚರ್ಚೆ ಮಾಡೋಣ. ನೀವು ಬಜೆಟ್ ಮೇಲೆ ಚರ್ಚೆ ಮಾಡುವುದನ್ನು ಬಿಟ್ಟು Forest ಬಗ್ಗೆ ಚರ್ಚೆ ಮಾಡಿದರೆ ಹೇಗೆ?

ಶ್ರೀ ಕೆ.ಜಿ. ಬೋಪಯ್ಯ:- ಬಜೆಟ್ ಕಟ್ಟಿಕೊಂಡರೆ ಏನು?

ಒಬ್ಬ ಮಾನ್ಯ ಸದಸ್ಯರು:- ಅದು ಒಂದು ಭಾಗವಾಗಿದೆ.

ಶ್ರೀ ಸಿದ್ದರಾಮಯ್ಯ:- ಬಜೆಟ್ ಕಟ್ಟಿಕೊಂಡು ಏನು ಮಾಡುವುದು ಎಂದರೆ ಏನು? ನೀವು Speaker ಆಗಿದ್ದವರು ಈ ರೀತಿಯಾಗಿ ಮಾತನಾಡಿದರೆ ಹೇಗೇ? ಬಜೆಟ್ ಕಟ್ಟಿಕೊಂಡರೆ ಏನು ತೊಂದರೆ ಅರ್ಥ ಏನು?

ಶ್ರೀ ಕೆ.ಜಿ. ಬೋಪಯ್ಯ:- ಇದು ಬಹಳ ಮುಖ್ಯವಾಗಿದೆ.

ಶ್ರೀ ಸಿದ್ದರಾಮಯ್ಯ:- ನೀವು ಬೇರೆ ರೂಪದಲ್ಲಿ ತೆಗೆದುಕೊಂಡು ಚರ್ಚೆ ಮಾಡಿ ಬೇಡವೆಂದು ಹೇಳಿದವರ್‍ಯಾರು? ಅದು ಬೇರೆ ವಿಚಾರವಾಗಿದೆ. ಅದಕ್ಕೆ important ಇದಕ್ಕೆ important ಎನ್ನುವ ಪ್ರಶ್ನೆಯಲ್ಲ. ನೀವು ಬೇರೆಯ ರೂಪದಲ್ಲಿ ತೆಗೆದುಕೊಂಡು ಬಂದು ಚರ್ಚೆ ಮಾಡಿ. ಬಜೆಟ್ ಮೇಲೆ ಚರ್ಚೆ ಮಾಡುವುದನ್ನು ಬಿಟ್ಟು forest ಬಗ್ಗೆ ಚರ್ಚೆ ಮಾಡಿಕೊಂಡು ಕುಳಿತುಕೊಂಡರೆ ಅದರ ಬಗ್ಗೆ ಮೀಟಿಂಗ್ ಮಾಡಬೇಕೆಂದರೆ ಒಂದು ಮೀಟಿಂಗ್ ಅನ್ನು ಮಾಡೋಣ. ಸುಮ್ಮನೆ ಬೆಳಿಗ್ಗೆ ಮತ್ತು ಸಾಯಂಕಾಲ ಇದನ್ನೇ ಚರ್ಚೆ ಮಾಡುತ್ತಾ ಕುಳಿತುಕೊಂಡರೆ ಏನು ಪ್ರಯೋಜನ.

ಶ್ರೀ ಕೆ.ಜಿ. ಬೋಪಯ್ಯ:- ಕನಿಷ್ಟ ನಮ್ಮ ಬಗ್ಗೆಯೂ ಒಂದು ಕನಿಕರ ಆದರೂ ಇರಲಿ ಎಂದು ಹೇಳುತ್ತಿದ್ದೇವೆ.

ಶ್ರೀ ಸಿದ್ದರಾಮಯ್ಯ:- ನೀವು ಇದ್ದಾಗಲೂ ಹೇಳಿದ್ದೀರಾ?

ಶ್ರೀ ಕೆ.ಜಿ. ಬೋಪಯ್ಯ:- ನಾವು ಇದ್ದಾಗಲೂ ಈ ಬಗ್ಗೆ ಬಹಳ ಮಾತನಾಡಿದ್ದೇವೆ. ಆಗ ನಾನು ಮಾತನಾಡಿದರೂ ನೀವು ಅದನ್ನು ಕೇಳಲಿಲ್ಲ ಮತ್ತು ಯಾರು ಸಹ ಕೇಳಲಿಲ್ಲ.

ಅಧ್ಯಕ್ಷರು:- ಮಾನ್ಯ ಬೋಪಯ್ಯನವರೆ, ಒಂದು ಕೆಲಸ ಮಾಡೋಣ. ಈಗ ಅವರಿಗೆ ಹೇಳೋಣ.

ಶ್ರೀ ಕೆ.ಜಿ. ಬೋಪಯ್ಯ:- ನಮ್ಮ ಕಾಲದಲ್ಲಿಯೂ ನಾವು eviction ಮಾಡುವುದಕ್ಕೆ ಬಿಟ್ಟಿಲ್ಲ. ಈ ಮಾತನ್ನು ನಾವು ಧೈರ್ಯವಾಗಿ ಹೇಳುತ್ತೇವೆ. ಆಗ ಯಾರು ಸಹ eviction ಮಾಡಿಲ್ಲ. ನಮ್ಮ ಜಿಲ್ಲೆಯಲ್ಲಿ ನಮ್ಮ ಕಾಲದಲ್ಲಿ ಆಗಿಲ್ಲ. ಚಿಕ್ಕಮಗಳೂರಿನಲ್ಲಿಯೂ ಸಹ ಆಗಿಲ್ಲ.

ಅಧ್ಯಕ್ಷರು:- ಆಯಿತು.

ಶ್ರೀ ಸಿದ್ದರಾಮಯ್ಯ:- ಬೇರೆ ಕಡೆಯಲ್ಲಿ ಆಗಿಲ್ಲವೇ?

ಶ್ರೀ ಕೆ.ಜಿ. ಬೋಪಯ್ಯ:- ಬೇರೆ ಎಲ್ಲಿಯೂ ಆಗಿರುವುದಿಲ್ಲ.

ಶ್ರೀ ಸಿದ್ದರಾಮಯ್ಯ:- ಬೇರೆ ಜಿಲ್ಲೆಯಲ್ಲಿ ಆದರೆ ಅದು eviction ಅಲ್ಲವೇ?

ಶ್ರೀ ಕೆ.ಜಿ. ಬೋಪಯ್ಯ:- ಆಗಿಲ್ಲ. ಬೇಕಾದರೆ ದಾಖಲೆಗಳನ್ನು ತೆಗೆಸಿ ನೋಡಿ.

ಶ್ರೀ ಸಿದ್ದರಾಮಯ್ಯ:- ಏನು ಮಾತನಾಡುತ್ತೀರಿ.

ಶ್ರೀ ಕೆ.ಜಿ. ಬೋಪಯ್ಯ:- ನಮ್ಮ ಕಾಲದಲ್ಲಿಯಂತೂ eviction ಮಾಡಿರುವುದಿಲ್ಲ.

ಅಧ್ಯಕ್ಷರು:- ಆಯಿತು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಮಾನ್ಯ ಅಧ್ಯಕ್ಷರೆ, ನಾನು ಕೃಷಿಗೆ ಸಂಬಂಧಪಟ್ಟಂತಹ ವಿಷಯದಲ್ಲಿ ಕೆಲವು ವಿಚಾರಗಳನ್ನು ಚರ್ಚೆ ಮಾಡಬೇಕಾದರೆ ಮಾನ್ಯ ಸದಸ್ಯರಾದ ಶ್ರೀ ರಮೇಶ್ ಕುಮಾರ್‌ರವರು ಕೃಷಿಕರ ಸಮಸ್ಯೆಯ ಬಗ್ಗೆ ಚರ್ಚೆ ಮಾಡುತ್ತಾ ಈ ವಿಷಯ ಪ್ರಾರಂಭವಾಗಿರುತ್ತದೆ. ಇಲ್ಲಿ ನಾವು ಬೇರೆ ಕಡೆಗೆ divert ಮಾಡಬೇಕೆಂದು ಏನು ಇಲ್ಲ. ಆದರೆ ಈ ವಿಷಯ ಬಂದಿದ್ದರಿಂದ ಇವತ್ತು ಆ ರೈತರ ಬಗ್ಗೆ ಇರುವಂತಹ ಕಾಳಜಿಯಿಂದ ಇವತ್ತು ಸರ್ಕಾರ ಈ ಅಧಿಕಾರಿಗಳ ಮಾತುಗಳಿಗೆ ಇವತ್ತು ತಲೆಬಾಗಬಾರದು ಎಂದು ಈ ಬಗ್ಗೆ ಗಮನಸಳೆಯುವುದಕ್ಕೆ ಚರ್ಚೆಯಾಗಿದೆ. ಇವತ್ತು ಕೃಷಿ ಇಲಾಖೆಯಲ್ಲಿ ಕೃಷಿ ಭಾಗ್ಯ ಎನ್ನುವಂತಹ ಹೊಸ ಹೆಸರನ್ನು ಇಟ್ಟುಕೊಂಡಿದ್ದೀರಿ. ಇವತ್ತು ರೈತರನ್ನು ಉಳಿಸುವಂತಹ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಕೆಲವೊಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಇವತ್ತು ನಾಳೆ ದ್ರಾಕ್ಷಿ ಬೆಳೆಗಾರರ ಬಗ್ಗೆ ಹೇಳುತ್ತಿದ್ದೆ. ಈ ಬಗ್ಗೆ ಮಾತನಾಡುವಾಗಲೇ ಮಾನ್ಯ ರಮೇಶ್ ಕುಮಾರ್‌ರವರು ಮಧ್ಯದಲ್ಲಿ interfere ಆದರು. ಇವತ್ತು ಸಣ್ಣ ಮತ್ತು ಅತಿಸಣ್ಣ ರೈತರು ಮಧ್ಯಮ ವರ್ಗದ ರೈತರು ಎಲ್ಲರೂ ಏನು ಇದ್ದಾರೆ. ಕಳೆದ ಬೆಳಗಾವಿ ಅಧಿವೇಶನದಲ್ಲಿಯೂ ನಾನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ದ್ರಾಕ್ಷಿ ಬೆಳೆಗಾರರು ಅವರು ಮಾಡಿರುವಂತಹ ಸಾಲ ಇರಬಹುದು, ದಾಳಿಂಬೆ ಬೆಳೆಗಾರರು ಅವರು ಸಹ 205 ಕೋಟಿ ರೂಪಾಯಿಗಳ ಸಾಲವನ್ನು ಮಾಡಿಕೊಂಡಿದ್ದಾರೆ. ಆ ಸಾಲವನ್ನು ತೀರಿಸುವಂತಹ ಪರಿಸ್ಥಿತಿಯಲ್ಲಿ ದಾಳಿಂಬೆ ಬೆಳೆಗಾರರು ಇಲ್ಲ. ಅವರ ಬಗ್ಗೆಯೂ ಈ ಒಂದು ಬಜೆಟ್‌ನಲ್ಲಿ ಯಾವುದೇ ಒಂದು ಪ್ರಸ್ತಾಪ ಮಾಡಲಿಲ್ಲ. ಅದೇ ರೀತಿಯಾಗಿ ಅಡಿಕೆ ಬೆಳೆಗಾರರ ಬಗ್ಗೆ ಸರ್ಕಾರದ ಅವರ ಒಂದು ಸಂಕಷ್ಟದ ಬಗ್ಗೆ ಗೋರಖ್ ಸಿಂಗ್ ವರದಿ ಬಂದ ನಂತರ ಇವತ್ತು ಸರ್ಕಾರಗಳ ಸಹಕಾರ ಸಿಗುತ್ತದೆ ಎನ್ನುವುದನ್ನು ಏನು ಸರ್ಕಾರ ನಮಗೆ ಆರ್ಥಿಕವಾಗಿ ನೆರವನ್ನು ಕೊಡಬಹುದು ಎಂದು ಆ ರೈತರುಗಳು

ಕಾಯುತ್ತಿದ್ದಾರೆ. ಸುಮಾರು 2,20,000 ಹೆಕ್ಟೇರ್ ಭೂಮಿಯಲ್ಲಿ ಅಡಿಕೆ ಬೆಳೆಗಾರರು ಸಂಕಷ್ಟಕ್ಕೆ ಒಳಗಾಗಿದ್ದಾರೆ ಇವೆಲ್ಲದರ ಬಗ್ಗೆ ಇವತ್ತು ನೀವು ಹಲವಾರು ರೀತಿಯ ಒಂದು ಉದ್ದೇಶವನ್ನಿಟ್ಟುಕೊಂಡಿದ್ದೇವೆಂದು ಇಲ್ಲಿ ಹೇಳಿದ್ದೀರಿ. ಇವತ್ತು ಯಾವ ಒಂದು ಉದ್ದೇಶಗಳನ್ನು ಕೃಷಿಗೆ ವೈಜ್ಞಾನಿಕವಾದಂತಹ ರೀತಿಯ ಕೆಲವು ತೀರ್ಮಾನಗಳನ್ನು ನೀವು ಅನುಷ್ಠಾನಕ್ಕೆ ತರುವುದಕ್ಕೆ ತಾವು ಹೊಸ ಒಂದು ಕಾರ್ಯಕ್ರಮಗಳು ಎಂದು ಹೇಳಿ ಏನು ಬಜೆಟ್ ಪುಸ್ತಕದಲ್ಲಿ ಹೇಳಿದ್ದೀರಿ. ಇದು ಎಷ್ಟರಮಟ್ಟಿಗೆ ಇವತ್ತು ಹಿಂದಿನ ಹಲಾವರು ವರ್ಷಗಳಲ್ಲಿ ಬಂದಿರುವಂತಹ ಬಜೆಟ್‌ನ ಪುಸ್ತಕಗಳಲ್ಲಿ ಬಂದಿರುವುದೇ ಅದು ಮಾಮೂಲಿ ಓದಿಕೊಂಡು ಹೋಗುವುದು ಏನಿದೆ ಆದರೆ ರೈತನಿಗೆ ಕೊನೆಗೆ ಇವರ ಉದ್ದೇಶ ಏನಾಗಿದೆ ಎಂದರೆ ಇವತ್ತು ಯಾವ ಒಂದು ಇದರಲ್ಲಿ ಅನುಷ್ಠಾನಗೊಳಿಸಲಾಗುವುದು, ಅನುದಾನವನ್ನು ಒದಗಿಸಲಾಗುವುದು, ಇವೆಲ್ಲವನ್ನು ಬಜೆಟ್ ಪುಸ್ತಕದಲ್ಲಿ ಹೇಳಿಕೊಂಡು ಬರುತ್ತಾರೆ. ಅದು ಆ ರೈತನಿಗೆ ಇಲ್ಲಿಯವರೆಗೆ ತಲುಪಲಿಲ್ಲ. ಆದ್ದರಿಂದ ಇವತ್ತು ನೀವು ಯಾವ ಒಂದು ಯಂತ್ರೋಪಕರಣಗಳನ್ನು ಅದನ್ನು Charitable Trust ಮುಖಾಂತರ ಸಂಘಸಂಸ್ಥೆಗಳ ಮುಖಾಂತರ ಕೊಡುವಂತಹ ವಿಷಯ ಪ್ರಸ್ತಾಪ ಮಾಡಿದ್ದೀರಿ. ಅದು ಎಷ್ಟರಮಟ್ಟಿಗೆ ಯಶಸ್ಸು ಕಾಣುವುದಕ್ಕೆ ಸಾಧ್ಯವಿದೆ. ತೋಟಗಾರಿಕೆಗೆ ಸಂಬಂಧಪಟ್ಟಂತೆ ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆದರೆ ಹಿಂದೆ ನಮ್ಮ ಸರ್ಕಾರದ ಆಶ್ರಯದಲ್ಲಿರುವಂತಹ ನೂರಾರು ಎಕರೆ ತೋಟಗಾರಿಕೆಯ ಭೂಮಿಗಳನ್ನು ಇವತ್ತು ಖಾಸಗಿಯವರಿಗೆ ಕೊಡುವಂತಹ ಒಂದು ಚರ್ಚೆಯನ್ನು ಪ್ರಾರಂಭ ಮಾಡಿಕೊಂಡರು. ಆ ತೋಟಗಾರಿಕೆ ಇಲಾಖೆಯಲ್ಲಿರುವಂತಹ ಸಾವಿರಾರು ಎಕರೆ ತೋಟಗಾರಿಕೆಯ ಭೂಮಿ ಇವತ್ತು ಅದನ್ನು ಎಷ್ಟರಮಟ್ಟಿಗೆ ಉಳಿಸಿಕೊಂಡಿದ್ದಾರೆ. ಆ ತೋಟಗಾರಿಕೆಯ ಭೂಮಿಯಲ್ಲಿ ದಿವಂಗತ ಶ್ರೀ ಮರೀಗೌಡರು ಬಹುಶಃ ಆ ತೋಟಗಾರಿಕೆಗೆ ಹೆಚ್ಚಿನ ಆದ್ಯತೆಯನ್ನು ಕೊಡುವಂತಹ ಕಾರ್ಯಕ್ರಮವನ್ನು ಜಾರಿಗೆ ತಂದಿದ್ದರು. ಇವತ್ತು ಆ ತೋಟಗಾರಿಕೆಗಳ ಮುಖಾಂತರ ಎಷ್ಟರಮಟ್ಟಿಗೆ ರೈತರಿಗೆ

ಉಪಯೋಗವಾಗುವಂತಹ ರೀತಿಯಲ್ಲಿ ಇವತ್ತು ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವುದಕ್ಕೆ ಇವತ್ತು ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದೀರಿ ಈ ಬಗ್ಗೆ ನಾನು ಕೇಳುವುದಕ್ಕೆ ಬಯಸುತ್ತೇನೆ. ಇವತ್ತಿನದಿವಸ ಕಬ್ಬುಬೆಳೆಗಾರರ ವಿಷಯದಲ್ಲಿ ಸರ್ಕಾರ ಏನೋ ಹೇಳಿದೆ. ಸರ್ಕಾರವು 2,500 ರೂಪಾಯಿಗಳ ಪ್ರೋತ್ಸಾಹಧನವನ್ನು ಕೊಡುವಂತಹ ಆದೇಶವನ್ನು ಮಾಡಿದ್ದೇವೆ. ಆದರೆ ಇವತ್ತು ಹಲವಾರು ಸಕ್ಕರೆ ಕಾರ್ಖಾನೆಯ ಮಾಲೀಕರುಗಳು 1700.00 ಮತ್ತು 1800.00 ರೂಪಾಯಿಗಳನ್ನು ಕೊಡುತ್ತೇವೆಂದು ರೈತನಿಂದ ಮುಚ್ಚಳಿಕೆಯನ್ನು ಬರೆಸಿಕೊಂಡಿದ್ದಾರೆ. ಅವರು ಮುಚ್ಚಳಿಕೆಯನ್ನು ಬರೆಸಿಕೊಂಡು ಅವರಿಂದ ಕಬ್ಬನ್ನು ಖರೀದಿ ಮಾಡಿದ್ದಾರೆ. ಇವತ್ತು ಸದನದಲ್ಲಿ ಸರ್ಕಾರವು 2,500.00 ರೂಪಾಯಿಗಳನ್ನು ಕೊಡುತ್ತೇವೆಂದು ಘೋಷಣೆಯನ್ನು ಮಾಡಿದ್ದಾರೆ. ಈ ಸದನದಲ್ಲಿ ಘೋಷಣೆಯನ್ನು ಮಾಡಿ ಇವತ್ತು ಯಾವ ಒಂದು ರೈತ ಕಬ್ಬನ್ನು ಕಾರ್ಖಾನೆಗೆ ಸಾಗಿಸದೆಯೇ, ಆ ಕಾರ್ಖಾನೆಗೆ ಸಾಗಿಸಿ 14 ದಿನದಲ್ಲಿ ಅವರಿಗೆ ಪೇಮೆಂಟಾಗಬೇಕು. ಇವತ್ತು ಕಾರ್ಖಾನೆಗೆ ಕಬ್ಬನ್ನು ಸಾಗಿಸಿ 2–3 ತಿಂಗಳುಗಳಾಗಿದೆ. ಸರ್ಕಾರವು ಘೋಷಣೆ ಮಾಡಿರುವಂತಹ 2,500 ರೂಪಾಯಿಗಳನ್ನು ಎಷ್ಟು ಕಾರ್ಖಾನೆ ಮಾಲೀಕರು ಕಬ್ಬು ಬೆಳೆಗಾರರಿಗೆ ಕೊಟ್ಟಿದ್ದಾರೆ. ಮಾನ್ಯ ಉಮೇಶ್ ಕತ್ತಿಯವರು ಯಾರೋ ರೈತರು ಕೇಳಿದರು ಎಂದು ಹೇಳಿ ಸ್ವಲ್ಪ ಕುಸ್ತಿ ಆಡಿ ಅವರಿಗೆ ಹೊಡೆದಿದ್ದಾರೆ. ನಾನು ಮೊನ್ನೆ ದಿನ ಒಂದು ಪತ್ರಿಕೆಯಲ್ಲಿ ನೋಡಿದೆ. ಈ ರೀತಿಯಾಗಿರುವಂತಹ ಪರಿಸ್ಥಿತಿ ಇದೆ. ಸರ್ಕಾರವು 2,500 ರೂಪಾಯಿಗಳನ್ನು ಕೊಡುತ್ತೇವೆನ್ನುವ ಬಗ್ಗೆ ಘೋಷಣೆ ಮಾಡಿದ್ದಾರೆ. ಆದರೆ ಅವರೆಲ್ಲರೂ ಕೋರ್ಟಿನಲ್ಲಿ ಕೇಸ್ ಇದೆ ಎಂದು ಹೇಳಿ ಅದನ್ನು ಇಟ್ಟುಕೊಂಡಿದ್ದಾರೆ. ನೀವು ಏನು ಕಾಯಿದೆಯನ್ನು ರಚನೆ ಮಾಡಿಕೊಂಡಿದ್ದೀರಿ. ಆ ಕಾಯಿದೆಯನ್ನು ರಚನೆ ಮಾಡಿ ಇವತ್ತು ನಾವು ಅವರ ಮೇಲೆ ಕಠಿಣವಾದಂತಹ ಕ್ರಮ ತೆಗೆದುಕೊಳ್ಳುತ್ತೇವೆ, ಬಿಗಿ ನಿಲುವನ್ನು ತೆಗೆದುಕೊಳ್ಳುತ್ತೇವೆ ಇಲ್ಲಿ ಹೇಳಿಕೆಯನ್ನು ಕೊಟ್ಟರೆ ಅಲ್ಲಿ ಆ ರೈತರಿಗೆ 2,500 ರೂಪಾಯಿಗಳು ಸಿಗುವುದಿಲ್ಲ. ಇವತ್ತು ಹಲವಾರು ಕಾರ್ಖಾನೆಗಳು ಇಲ್ಲಿ ಹೆಚ್ಚು

ಕಡಿಮೆ ಎಲ್ಲಾ ಕಾರ್ಖಾನೆಗಳು ಸೇರಿದೆ. ಯಾರು 1800 ರಿಂದ 2000 ರೂಪಾಯಿಗಳು ಮೇಲೆ ಹಣ ಕೊಡುವುದಕ್ಕೆ ಯಾರು ಕೂಡ ತಯಾರಿಲ್ಲ. ನೀವು ಸದನದಲ್ಲಿ ರೈತನಿಗೆ ಪ್ರತಿ ಟನ್ ಕಬ್ಬಿಗೆ 2,500 ರೂಪಾಯಿಗಳು ನೀವು ಘೋಷಣೆಯನ್ನು ಮಾಡಿದ್ದೀರಿ. ಆ ಒಂದು ಘೋಷಣೆಯನ್ನು ಏನು ಮಾಡಿದ್ದೀರಿ ಈಗ ಅವರಿಗೆ 500.00 ರೂಪಾಯಿಗಳನ್ನು ಕೊಡುವವರು ಯಾರು? ಈಗಾಗಲೇ ಹಲವಾರು ರೈತರುಗಳು ಕಾರ್ಖಾನೆಗಳಿಗೆ ಕಬ್ಬನ್ನು ಸಾಗಿಸಿ ಮೂರು ತಿಂಗಳಾಗಿದೆ. ಇವತ್ತು ಆ ರೈತನು ಯಾರ ಹತ್ತಿರ ಹೋಗಬೇಕು. ಕಾರ್ಖಾನೆ ಮಾಲೀಕರು 1700.00 ಮತ್ತು 1800.00 ರೂಪಾಯಿಗಳನ್ನು ಕೊಡುತ್ತೇವೆಂದು ನೋಟೀಸ್ ಬೋರ್ಡಿನಲ್ಲಿ ಹಾಕಿಬಿಟ್ಟಿದ್ದಾರೆ. ಅದರ ಮೇಲೆ ನಾವು ಕೊಡುವ ಪ್ರಶ್ನೆ ಇಲ್ಲವೆಂದು ಹೇಳಿದ್ದಾರೆ. ಆ ಒಂದು ರೇಟ್‌ಗೆ ಬೆಲೆಗೆ ನೀವು ಬಂದರೆ ಕಾರ್ಖಾನೆಗೆ ಕಬ್ಬನ್ನು ತೆಗೆದುಕೊಂಡು ಬನ್ನಿ ಎಂದು ಹೇಳಿದ್ದಾರೆ. ಈ 500.00 ರೂಪಾಯಿಗಳ ಬಗ್ಗೆ ನಾನು ಸರ್ಕಾರದ ಗಮನಸೆಳೆಯಬಯಸುತ್ತೇನೆ. ಅಲ್ಲಿ ರೈತರು ಕಬ್ಬನ್ನು ಕಾರ್ಖಾನೆಗೆ ಸಾಗಿಸಿಬಿಟ್ಟಿದ್ದಾರೆ. ನೀವು ರೈತನಿಗೆ 150.00 ರೂಗಳ ಪ್ರೋತ್ಸಾಹಧನವನ್ನು ಕೊಡುತ್ತೇವೆಂದು ಹೇಳಿದ್ದೀರಿ. ಆ 500.00 ರೂಪಾಯಿಗಳನ್ನು ಸರ್ಕಾರದಿಂದ ಈಗ ಕೊಟ್ಟುಬಿಡಿ. ಇವತ್ತು ಈ ಸದನದಲ್ಲಿ ಹಕ್ಕುಚ್ಯುತಿ ಆಗಬಹುದು. ನಾವು ಹಕ್ಕುಚ್ಯುತಿಯನ್ನು ಮಂಡನೆ ಮಾಡಬೇಕಾಗಿ ಬರಬಹುದು. ಸದನದಲ್ಲಿ ನೀವು 2,500.00 ರೂಪಾಯಿಗಳನ್ನು ಕೊಡುತ್ತೇವೆಂದು ಘೋಷಣೆಯನ್ನು ಮಾಡಿದ್ದೀರಿ. ಇವತ್ತು ಅವನಿಗೆ ಆ ಹಣವು ರೈತನಿಗೆ ಸಂದಾಯವಾಗದೆ ಹೋದರೆ 14 ದಿನದೊಳಗಡೆ ಸರಬರಾಜು ಮಾಡಿ ಹಣ ಕೊಡಬೇಕೆಂದು ನೀವು ಕಾನೂನು ರಚನೆ ಮಾಡಿಕೊಂಡಿದ್ದೀರಿ. ಇವತ್ತು 14 ದಿನ ಆದ ಮೇಲೆ ಬಡ್ಡಿ ಸಹಿತವಾಗಿ ಹಣವನ್ನು ಕೊಡಬೇಕೆಂದು ಏನಿದೆ ಇದನ್ನು ತಾವು ಕಾನೂನನ್ನು ಎಷ್ಟರಮಟ್ಟಿಗೆ implement ಮಾಡುತ್ತಿದ್ದೀರಿ ಇದನ್ನು ಸರ್ಕಾರಕ್ಕೆ ಕೇಳಬಯಸುತ್ತೇನೆ. ಇವತ್ತು ಕಾರ್ಖಾನೆ ಮಾಲೀಕರ ಹತ್ತಿರ ನೀವು ಅವರನ್ನು ಜೈಲಿಗೆ ಕಳುಹಿಸಿ ದುಡ್ಡನ್ನು ವಸೂಲಿ ಮಾಡುತ್ತೀರೋ ಇಲ್ಲ ಇನ್ನಾವ

ರೀತಿಯಲ್ಲಿಯೋ ಹೇಳಿ ವಸೂಲಿ ಮಾಡುತ್ತೀರೋ ಅದು ನಮಗೆ ಸಂಬಂಧವಿಲ್ಲ. ಇವತ್ತು ನಮ್ಮ ರೈತ ಯಾವ ಒಂದು ಸರ್ಕಾರ ಘೋಷಣೆ ಮಾಡಿದೆ ಎಂದು ಹೇಳಿ ನಂಬಿಕೆಯ ಮೇಲೆ ಸರ್ಕಾರ ನಮಗೆ ಮಧ್ಯಸ್ಥಿಕೆಯನ್ನು ವಹಿಸಿ 2,500 ರೂಪಾಯಿಗಳನ್ನು ಕೊಡುತ್ತಾರೆಂಬ ಭಾವನೆಯಿಂದ ನಂಬಿಕೆಯ ಮೇಲೆ ಕಾರ್ಖಾನೆಗೆ ಕಬ್ಬನ್ನು ಸರಬರಾಜು ಮಾಡಿದ್ದಾನೆ. ಆ 500 ರೂಪಾಯಿಗಳನ್ನು ಸರ್ಕಾರ ರೈತನಿಗೆ ಕೊಡುವ ಮುಖಾಂತರ ನಂತರ ಕಾರ್ಖಾನೆ ಮಾಲೀಕರ ಹತ್ತಿರ ನೀವು ಯಾವ ರೀತಿಯಾದಂತಹ ಕಠಿಣವಾದಂತಹ ನಿರ್ಧಾರ ಮಾಡಿಕೊಂಡು ಆ ದುಡ್ಡನ್ನು ನೀವು ವಸೂಲಿ ಮಾಡಿಕೊಳ್ಳಿ. ಇಲ್ಲದೇ ಹೋದರೆ ಈ ಹಣವು ಇನ್ನು 2–3 ವರ್ಷವಾದರೂ ಸಹ ಯಾರು ಕಬ್ಬನ್ನು ಸಾಗಿಸಿರುವಂತಹ ರೈತ ಇದ್ದಾನೆ ಅವನಿಗೆ ಹಣ ದೊರಕುವಂತಹ ಪ್ರಶ್ನೆ ಇಲ್ಲ. ಪ್ರತಿಯೊಂದು ಕಾರ್ಯಕ್ರಮಗಳ ಬಗ್ಗೆ ನಾವು ಇಲ್ಲಿ ಹೆಸರಿಡಬಹುದು. ನೀವು ಕೃಷಿ ಭಾಗ್ಯ, ಶಾದಿ ಭಾಗ್ಯ, ಏನು ಹೆಸರುಗಳು ಇದೆ. ಈ ಹೆಸರನ್ನು ಇಟ್ಟತಕ್ಷಣ ಆ ಹೆಸರಿನಿಂದ ನಮ್ಮ ರೈತನಿಗೆ ಅವನ ಬದುಕಿಗೆ ಯಾವುದೇ ರೀತಿಯ ಆಶಾದಾಯಕವಾದಂತಹ ಜೀವನ ನಿರ್ವಹಿಸುವುದಕ್ಕೆ ಆ ಹೆಸರನ್ನು ಇಟ್ಟ ತಕ್ಷಣ ಅವನಿಗೆ ಅನುಕೂಲಗಳು ದೊರಕುವುದಿಲ್ಲ. ಅದರಿಂದ ಇವತ್ತು ನಾನು ಸರ್ಕಾರಕ್ಕೆ ಮನವಿಯನ್ನು ಮಾಡುತ್ತೇನೆ. ಯಾವ ಒಂದು ಬೆಳೆಯನ್ನು ಹಲವಾರು ರೈತರು ಬೆಳೆಯುತ್ತಾರೆ ಇವತ್ತು ನೀವು ಕೇಂದ್ರಸರ್ಕಾರದ ಮುಂದೆ ಪ್ರಸ್ತಾವನೆಯನ್ನು ತೆಗೆದುಕೊಂಡು ಹೋಗಿದ್ದೀರಿ. ಕೇಂದ್ರಸರ್ಕಾರದವರು ಕೊಡುವ ಪರಿಸ್ಥಿತಿಯಲ್ಲಿಲ್ಲ. ಮುಂದೆ ಚುನಾವಣೆಗೆ ಹೋಗಬೇಕಾದ ಸನ್ನಿವೇಶ ಇದೆ. ಮತ್ತೆ ಕೇಂದ್ರ ಸರ್ಕಾರ ನಮಗೆ ಆರ್ಥಿಕ ನೆರವು ಕೊಡಬಹುದು, ಪತ್ರ ಬರೆದಿದ್ದೇವೆ ಎಂದು ರೈತರಿಗೆ ಕಾರಣ ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ. ದ್ರಾಕ್ಷಿ, ದಾಳಿಂಬೆ, ಅಡಿಕೆ, ತೆಂಗು ಬೆಳೆಗಾರರ ಕಷ್ಟಗಳಿಗೆ ಸರ್ಕಾರ ಸುಮಾರು 2–3 ಸಾವಿರ ಕೋಟಿ ರೂಪಾಯಿಗಳನ್ನು ಈ ಬಜೆಟ್‌ನಲ್ಲಿ ಕೊಡಬೇಕಾಗುತ್ತದೆ. ಅವನ ಆರ್ಥಿಕ ಪರಿಸ್ಥಿತಿಯನ್ನು ಸರಿಪಡಿಸಲಿಕ್ಕೆ, ಹೊಸದಾಗಿ ಅವನು ಕೃಷಿ ಚಟುವಟಿಕೆ

ಮಾಡುವುದಕ್ಕೆ ಆ ರೈತನಿಗೆ ಬೆಂಬಲವಾಗಿ ನಿಲ್ಲಬೇಕು. ಕೃಷಿ ಭಾಗ್ಯ ಎನ್ನುವ ಹೆಸರಿಟ್ಟಿದ್ದೀರಿ. ಅದಕ್ಕೆ ನಿಜವಾದ ಅರ್ಥವನ್ನು ಜನರು ಅರ್ಥೈಸಿಕೊಳ್ಳುವುದಕ್ಕೆ ಸರ್ಕಾರ ಗಮನ ಕೊಡಬೇಕೆಂದು ತಮ್ಮ ಮೂಲಕ ಸರ್ಕಾರದ ಗಮನಸೆಳೆಯುತ್ತೇನೆ. ಕೃಷಿಗೆ ಹೆಚ್ಚಿನ ಆದ್ಯತೆ ಕೊಡುತ್ತೇವೆಂದು ಹೇಳಿದ್ದೀರಿ. ಮಾನ್ಯ ಮುಖ್ಯಮಂತ್ರಿಯವರು ನಿನ್ನೆ ಸದನದಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ ಬಗ್ಗೆ ಸದನದಲ್ಲಿ ಉತ್ತರ ಕೊಟ್ಟಿದ್ದಾರೆ. ಮುಂದಿನ ಕ್ರಮ ಯಾವರೀತಿ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಬಹುಶಃ ಅವರಿಗೆ ನಾವು 12 ಸ್ಪಷ್ಟೀಕರಣ ಕೇಳಿ ಹೋಗಿ ನಮಗೆ ಆಗಿರುವ ಅನಾಹುತ ಬಗ್ಗೆ ಅವರಿಗೆ ಸಂಪೂರ್ಣವಾಗಿ ಮಾಹಿತಿ ದೊರಕಿರಬಹುದು ಎಂಬುದು ನನ್ನ ಅಭಿಪ್ರಾಯ. ಅದರ ಹಿನ್ನೆಲೆಯಲ್ಲಿ A scheme ನಲ್ಲಿ ನೀರು ಹಂಚಿಕೆ ಮಾಡಿದ್ದಾರೆ. ಆ ನೀರನ್ನು ಉಪಯೋಗ ಮಾಡುವುದಕ್ಕೆ ಪುನಃ ನಾನು ಒತ್ತು ಕೊಟ್ಟು ಹೇಳಬಯಸುತ್ತೇನೆ. ಕಾಲಹರಣ ಮಾಡದೆ ಯಾವುದೇ ರೀತಿಯಲ್ಲಿ ಹಣವನ್ನು ತೊಡಗಿಸುವುದಕ್ಕೆ ಸರ್ಕಾರ ಗಮನ ಕೊಡಬೇಕು. ಇನ್ನು, ಕಾಲುಬಾಯಿ ಜ್ವರದ ಬಗ್ಗೆ ಹೇಳುತ್ತೇನೆ. ಈ ವಿಷಯವನ್ನು ಸರ್ಕಾರ ಒಂದು ರೀತಿಯಲ್ಲಿ ಕೇವಲವಾಗಿ ತೆಗೆದುಕೊಂಡುಬಿಟ್ಟಿತೇ? ಆಗಸ್ಟ್ ತಿಂಗಳಿನಲ್ಲಿ ಕಾಲುಬಾಯಿ ಜ್ವರದ ತೊಂದರೆಯಿಂದ ಹಸುಗಳು ಸಾಯಲಿಕ್ಕೆ ಪ್ರಾರಂಭವಾಯಿತು. ನಾನಾ ರೀತಿಯಲ್ಲಿ ನಾವು ಸರ್ಕಾರದ ಗಮನ ಸೆಳೆದೆವು. ಕಳೆದ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡಬೇಕಾದರೆ 17 ಕೋಟಿ ರೂ. ಬಿಡುಗಡೆಯಾಗಿರಲಿಲ್ಲ. ನಾನೇ ಮಾನ್ಯ ಮುಖ್ಯಮಂತ್ರಿಯವರಿಗೆ ಮನವಿ ಮಾಡಿದೆ, ತಕ್ಷಣ ಅಧಿಕಾರಿಗಳಿಗೆ ಆದೇಶ ಮಾಡುತ್ತೇವೆಂದು ಹೇಳಿದ್ದರು. ಆದರೆ, ಕೊನೆಗೆ ಇಲ್ಲಿ ಬಜೆಟ್ ಮಂಡನೆ ಮಾಡುವ ಹಿಂದಿನ ದಿನ ಆ ಒಂದು ಆದೇಶ ಹೊರಟ್ಟಿತ್ತು. ಅವರು ಹೇಳಿದ ಒಂದು ತಿಂಗಳ ನಂತರ ಮತ್ತೆ ಸಮಯವನ್ನು ವ್ಯರ್ಥ ಮಾಡಿಕೊಂಡರು. ಆಗ್‌ಸ್ಟ್ ತಿಂಗಳಿನಿಂದ ಇಲ್ಲಿಯವರೆಗೆ ಸತ್ತಿರುವ ಹಸುಗಳು ಏನಿವೆ, ಕೆಲವು guidelines ಹಾಕಿ ಹಸು ಸತ್ತಿರುವ ಹಲವಾರು ರೈತರ ಕುಟುಂಬಗಳಿಗೆ ಪರಿಹಾರ ಸಿಕ್ಕಿಲ್ಲ. ಅದರಲ್ಲೂ ಹಲವಾರು ರೀತಿಯ guidelines ಇಟ್ಟುಕೊಂಡು ರೈತರನ್ನು ಸಂಕಷ್ಟಕ್ಕೀಡು

ಮಾಡಿದ್ದಾರೆ. ಕೇಂದ್ರ ಸರ್ಕಾರದ ಕೃಷಿ ಸಚಿವರು ಬೆಂಗಳೂರಿಗೆ ಒಂದು ಸಭೆಗೆ ಬಂದಾಗ ಮಾನ್ಯ ಮುಖ್ಯಮಂತ್ರಿಯವರಿಗೂ ಒಂದು ಸಲಹೆ ಕೊಟ್ಟರು. ಹಸುಗಳನ್ನು ಖರೀದಿ ಮಾಡುವುದಕ್ಕೆ 50 ಸಾವಿರ ರೂ.ಗಳ ಬಡ್ಡಿರಹಿತ ಸಾಲ ಕೊಡುವ ವ್ಯವಸ್ಥೆಯನ್ನು ಅನುಷ್ಠಾನಕ್ಕೆ ತರಲಿಕ್ಕೆ ಕೇಂದ್ರ ಸರ್ಕಾರದಿಂದ ನೆರವು ಕೊಡಲಿಕ್ಕೆ ತಯಾರಿದ್ದೇವೆ, ಹೊಸದಾಗಿ ಹಸು ಖರೀದಿಸುವುದಕ್ಕೆ ಎಂದು ಕೃಷಿ ಸಚಿವರು ಹೇಳಿಕೆ ಕೊಟ್ಟರು. ನಂತರ ಕೇಂದ್ರ ಸರ್ಕಾರದ ಮುಂದೆ ನಮ್ಮ ರಾಜ್ಯದ ಅಧಿಕಾರಿಗಳು ಹೋಗಿ ಏನಾದರೂ ಮನವಿ ಕೊಟ್ಟಿದ್ದಾರೆಯೇ? ಹಸು ಸತ್ತಿರುವ ರೈತ ಕುಟುಂಬಗಳೇನಿವೆ, ಹಸು ಖರೀದಿಸುವುದಕ್ಕೆ ಆ ರೈತರಿಗೆ 50 ಸಾವಿರ ರೂ.ಗಳ ಸಹಾಯಧನ ಬಿಡುಗಡೆ ಮಾಡುವುದಕ್ಕೆ ಏನಾದರೂ ಕ್ರಮ ಆಗಿದೆಯೇ? ಆಗಸ್ಟ್ ತಿಂಗಳಿಂದ ಇಲ್ಲಿಯವರೆಗೆ ಸಮಯವನ್ನು ವ್ಯರ್ಥಮಾಡಿ ಆ ರೈತರಿಗೆ ಆತ್ಮಸ್ಥೈರ್ಯ ತುಂಬುವುದಕ್ಕೆ ಯಾವ ರೀತಿಯಲ್ಲಿ ಯಾವ sector ನಲ್ಲಿ ನೀವು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ, ಯಾವ ರೈತರು ಸಂಕಷ್ಟಕ್ಕೆ ಒಳಗಾಗುತ್ತಾರೆ, ಅವರ ಬಗ್ಗೆ ಎಷ್ಟು ತ್ವರಿತಗತಿಯ ತೀರ್ಮಾನಗಳನ್ನು ಮಾಡುತ್ತಿದ್ದೀರಿ? ಇದರ ಬಗ್ಗೆ ನೀವೇ ಹೇಳಬೇಕಾಗುತ್ತದೆ. ಮೊನ್ನೆ ಬಜೆಟ್ ಮಂಡನೆ ಮಾಡುವ ಹಿಂದಿನ ದಿನ 17 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದ್ದೀರಿ. 6 ತಿಂಗಳ ಹಿಂದೆ ಹಣ ಬಿಡುಗಡೆ ಮಾಡುವುದಕ್ಕೆ ನಿಮಗೆ ಏನು ತೊಂದರೆ ಇತ್ತು? ರೈತ ಈಗ ಬರುತ್ತದೆ, ಆಗ ಬರುತ್ತದೆ ಎಂದು ಕಾಯುತ್ತಾ ಕೂರುವ ಪರಿಸ್ಥಿತಿ ಇತ್ತು. ಈ ರೀತಿಯ ನಿಧಾನ ಗತಿಯ ತೀರ್ಮಾನಗಳಿಂದ ಎಷ್ಟರಮಟ್ಟಿಗೆ ಹಾಲು ಉತ್ಪಾದಕರು ಇರಬಹುದು, ಕೃಷಿ ಆಧಾರದ ಮೇಲೆ ಜೀವನ ಮಾಡುತ್ತಿರುವವರಿಗೆ ಆತ್ಮಸ್ಥೈರ್ಯ ತುಂಬುವ ಕೆಲಸ ಮಾಡಿದ್ದೀರಿ? ಎಂದು ಪ್ರಶ್ನೆ ಮಾಡಬಯಸುತ್ತೇನೆ. ಸಹಕಾರ ಇಲಾಖೆಗೆ ಸಂಬಂಧಿಸಿದಂತೆ ಈಗಾಗಲೇ ಹೇಳಿದ್ದಾರೆ. ಬಡ್ಡಿರಹಿತ ಸಾಲವನ್ನು 2 ಲಕ್ಷ ರೂ.ಗಳಿಂದ 3 ಲಕ್ಷ ರೂ.ಗಳಿಗೆ ಹೆಚ್ಚಿಗೆ ಮಾಡುತ್ತೇವೆಂದು ಹೇಳಿದ್ದೀರಿ. 75 ಲಕ್ಷ ರೈತ ಕುಟುಂಬಗಳಲ್ಲಿ ಕೃಷಿ ಆಧಾರದ ಮೇಲೆ ಜೀವನ ಮಾಡುತ್ತಾರೆ, ಸುಮಾರು 68 ಲಕ್ಷ ಕೃಷಿ ಕಾರ್ಮಿಕರಿದ್ದಾರೆ. ಸರ್ಕಾರ ಕೇವಲ 11 ಲಕ್ಷದ 94

ಸಾವಿರ ರೈತ ಕುಟುಂಬಗಳಿಗೆ 4,933 ಕೋಟಿ ರೂ.ಗಳನ್ನು ನವೆಂಬರ್ ಅಂತ್ಯದ ವರೆಗೆ ಬಿಡುಗಡೆ ಮಾಡಿದೆ. ಸಹಕಾರ ಇಲಾಖೆಯವರು ಸಾಲ ಕೊಟ್ಟಿದ್ದಾರೆ. ನಾನು ಕೇಳುವುದೇನೆಂದರೆ, ಅತಿ ಸಣ್ಣ ಮತ್ತು ಸಣ್ಣ ಹಿಡುವಳಿದಾರರು ಎಲ್ಲಿ ಸಾಲ ಪಡೆಯಲಿಕ್ಕೆ ಸಾಧ್ಯ? 3 ಲಕ್ಷ ರೂ.ಗಳ ಸಾಲವನ್ನು ಒಂದು ಎಕರೆ, ಎರಡು ಎಕರೆ ಭೂಮಿ ಇರುವವರಿಗೆ ಕೊಡುವುದಿಲ್ಲ. ರಾಗಿ, ಭತ್ತ ಬೆಳೆಯುವವರಿಗೆ ಕೊಡುವುದಿಲ್ಲ. ಕೆಲವು ರೈತರು ಸಾಲ ಮಾಡುವುದು ಅವರ ಕುಟುಂಬದಲ್ಲಿ ಅವನ ಮಗನಿಗೆ ಶಿಕ್ಷಣ ಕೊಡಸಲಿಕ್ಕೋ ಇಲ್ಲವೇ ಅವರ ಕುಟುಂಬದಲ್ಲಿ ಅವರ ಮಕ್ಕಳಿಗೆ ಮದುವೆ ಮಾಡುವ ಸಂದರ್ಭದಲ್ಲಿ ಸಾಲ ಪಡೆಯುತ್ತಾರೆ. ಆ ಸಾಲ ತೀರಿಸಲಿಕ್ಕೆ ಆಗುವುದಿಲ್ಲ. ಆ ರೀತಿಯ ಸಾವಿರಾರು ಘಟನೆಗಳನ್ನು ನಾನು ನಿಮ್ಮ ಮುಂದೆ ಇಡಬಲ್ಲೆ. ಇವತ್ತು ಆ ರೈತರಿಗೆ ಸಾಲ ತೀರಿಸಲಿಕ್ಕೆ ಆಗದ ಪರಿಸ್ಥಿತಿಯನ್ನು ನಾವು ಕಾಣುತ್ತಿದ್ದೇವೆ. ನೀವು 3 ಲಕ್ಷ ರೂ. ಎಂದು ಘೋಷಣೆ ಮಾಡಿದ್ದೀರಿ. ಅದು ಕೆಲವೇ ಕೆಲವು ಅಥವಾ ಹಿಡಿಮಂದಿ ರೈತರಿಗೆ ಮಾತ್ರ ದೊರತಕ್ಕಂಥದ್ದು. 11 ಲಕ್ಷ ಕುಟುಂಬಗಳಿಗಷ್ಟೇ ಸಾಲ ವಿತರಿಸಿದ್ದೀರಿ. ಬಾಕಿ 60 ಲಕ್ಷ ಕುಟುಂಬಗಳು ಸಾಲ ಎಲ್ಲಿ ಪಡೆಯಬೇಕು? ತುಮಕೂರು ಜಿಲ್ಲೆಯ DCC Bank ಅಧ್ಯಕ್ಷರಾದ ರಾಜಣ್ಣನವರು ಇಲ್ಲಿ ಎಲ್ಲೋ ಕುಳಿತಿರಬೇಕು. 3 ಲಕ್ಷ ರೂ.ಗಳನ್ನು ಎಷ್ಟು ಸಣ್ಣ ರೈತರಿಗೆ ಸಾಲ ಕೊಡುತ್ತಾರೆಂದು ಹೇಳಬೇಕು. ಸಣ್ಣ ರೈತರು, ಮಧ್ಯಮ ವರ್ಗದ ರೈತರಿಗೆ ಎಷ್ಟು ಸಾಲ ಕೊಡುತ್ತೀರಿ? 10, 20, 30 ಸಾವಿರ ರೂ. ಸಹ ಕೊಡುವುದಿಲ್ಲ.

ಶ್ರೀ ಕೆ.ಎನ್. ರಾಜಣ್ಣ:- ಬಾಲಕೃಷ್ಣರವರು ಇದ್ದಾರೆ. ಅವರು ಎಷ್ಟೆಷ್ಟು ಕೊಟ್ಟಿದ್ದಾರೆ ಕೇಳಿ. ಆಮೇಲೆ ನಾನು ಹೇಳುತ್ತೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ನಾನು general ಆಗಿ ಹೇಳಿದೆ. ಬಾಲಕೃಷ್ಣರವರು DCC bank ಅಧ್ಯಕ್ಷರಲ್ಲ. ಅವರ ತಮ್ಮ ಅಧ್ಯಕ್ಷರು.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ (ಸಹಕಾರ ಸಚಿವರು):- ಸಹಕಾರ ಸಂಘಗಳಲ್ಲಿ ಅಲ್ಪಾವಧಿ ಬೆಳೆ ಸಾಲವನ್ನೇನು ವಿತರಣೆ ಮಾಡಲಾಗುತ್ತದೆ, ಸರಾಸರಿ 15 ಲಕ್ಷ ರೈತರಿಗೆ ಪ್ರತಿ ವರ್ಷ ಸಾಲ ಕೊಡುವ ವ್ಯವಸ್ಥೆ ಇದೆ. ಕಳೆದ ವರ್ಷ 6 ಸಾವಿರ ಕೋ.ರೂ. ಇತ್ತು, ಈ ಸಲ 7 ಸಾವಿರ ಕೋ.ರೂ. ದಾಟಿ ಹಣ ಕೊಡಬೇಕೆಂದು ನಿಗದಿಪಡಿಸಿದ್ದೇವೆ. ಮತ್ತೆ ಹೊಸದಾಗಿ 25% ಏನು ಸಾಲ ವಿತರಣೆ ಮಾಡುತ್ತಾರೆ, ಅದರಲ್ಲಿ 25% ನಷ್ಟು ಹೊಸ ಸದಸ್ಯರಿಗೆ ಸಾಲ ಕೊಡಬೇಕು, ಹಳಬರೇ ತೆಗೆದುಕೊಳ್ಳುತ್ತಿರಬಾರದು, ಹೊಸಬರಿಗೂ ಕೊಡುತ್ತಿರಬೇಕೆಂದು ಹೇಳಿದ್ದೇವೆ. ಸಾಲ ಕೊಡುವ ಸಂದರ್ಭದಲ್ಲಿ ಅವರ ಜಮೀನಿನ ವ್ಯಾಪ್ತಿ ಎಷ್ಟಿರುತ್ತದೆ ಮತ್ತು ಏನು ಬೆಳೆ ಬೆಳೆಯುತ್ತಾರೆ, ಅದರ ಆಧಾರದಮೇಲೆ ಸಮಿತಿ ಏನು ನಿಗದಿಪಡಿಸುತ್ತಾರೆ, ಅದರ ಪ್ರಕಾರ ಒಟ್ಟಾರೆ ಸಾಲವನ್ನು ವಿತರಣೆ ಮಾಡುತ್ತಾರೆ. ಬಹುತೇಕ ಒಂದು ಲಕ್ಷ ರೂ. ಒಳಗಡೆ ಹೆಚ್ಚು ರೈತರು, ಸಣ್ಣ ಹಿಡುವಳಿದಾರರು ನಮ್ಮ ಸಹಕಾರ ಸಂಘದಲ್ಲಿ ಸಾಲ ತೆಗೆದುಕೊಳ್ಳುತ್ತಿರುವುದು. ಏಕೆಂದರೆ, commercial Bank ನಲ್ಲಿ ಇವರಿಗೆಲ್ಲ ಅಷ್ಟು ಸುಲಭವಾಗಿ ಸಾಲ ಸಿಗುವುದಿಲ್ಲ. ನಮ್ಮ ಸಹಕಾರ ಸಂಘಗಳು, DCC Bankಗಳ ಮುಖಾಂತರವೇ ಈ ಕೆಳಹಂತದಲ್ಲಿ ಸಣ್ಣ ಮತ್ತು ಮಧ್ಯಮ ರೈತರಿಗೆ ಹೆಚ್ಚಿನ ಸಾಲ ಸೌಲಭ್ಯ ಸಿಗುತ್ತಿದೆ. ಇದನ್ನು ಪ್ರತಿ ವರ್ಷ ವಿಸ್ತರಿಸಬೇಕು ಎಂದು ಪ್ರತಿ ವರ್ಷ ಒಂದೊಂದು ಸಾವಿರ ಕೋ.ರೂ. ಹೆಚ್ಚು ಹೆಚ್ಚು ಸಾಲ ವಿತರಣೆ ಮಾಡಬೇಕು. ಏಕೆಂದರೆ, ಬಡ್ಡಿ ರಿಯಾಯಿತಿಯನ್ನು ಸರ್ಕಾರ ಕೊಡುತ್ತಿದೆ. ಅದರ ಸೌಲಭ್ಯ ಹೆಚ್ಚು ರೈತರಿಗೆ ದೊರಕಬೇಕು. ಮೊನ್ನೆ ಕಡೂರಿನಲ್ಲಿ ಹೋದಾಗ ಪ್ರಸ್ತಾಪ ಮಾಡಿದರು. ಎಲ್ಲಿ ಬರಗಾಲಪೀಡಿತ ತಾಲ್ಲೂಕುಗಳೆಂದು ಇವೆ, ಅಲ್ಲಿ recovery ಕಡಿಮೆ ಇದ್ದರೂ ಕೂಡ ಅಲ್ಲಿ ಅದೇ ಪ್ರಮಾಣದಲ್ಲಿ ಸಾಲ ವಿತರಣೆ ಮಾಡಬೇಕು ಎಂದೂ ಸಹ ನಾವು ಅದರ ಬಗ್ಗೆ ಇಲಾಖೆಯವರಿಗೆ ಸೂಚನೆಯನ್ನು ಕೊಟ್ಟಿದ್ದೇವೆ.

ಶ್ರೀ ವೈ.ಎಸ್.ವಿ. ದತ್ತಾ:- ಕಡೂರಿನಲ್ಲಿ ನೀವು promise ಮಾಡಿದ್ದಿರಿ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್:- 60% recovery ಯಾದರೆ ಮಾತ್ರ fresh loan ಕೊಡಬೇಕೆಂದಿದೆಯಲ್ಲ, ಅದನ್ನು relax ಮಾಡಿ 40% ಇದ್ದರೂ ಕೂಡ ಎಲ್ಲಿ ಬರಗಾಲಪೀಡಿತ ತಾಲ್ಲೂಕುಗಳಿವೆ ಅಲ್ಲಿ ಕೊಡಬೇಕೆಂದು ಕೂಡ ನಾನು ಇಲಾಖೆಯಿಂದ ಸೂಚನೆ ಕೊಟ್ಟಿದ್ದೇನೆ.

ಶ್ರೀ ವೈ.ಎಸ್.ವಿ. ದತ್ತಾ:- Thank you.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್:- 2 ಲಕ್ಷ ರೂ.ಗಳವರೆಗೆ ಶೂನ್ಯ ಬಡ್ಡಿ, 2–3 ಲಕ್ಷ ರೂ.ಗಳವರೆಗೆ 1% ಬಡ್ಡಿ ಎಂದು ಕಳೆದ ಬಾರಿ ಮಾಡಿದ್ದೆವು. ಈ ಸಲ ಮಾನ್ಯ ಮುಖ್ಯಮಂತ್ರಿಯವರು 1% ಅನ್ನು ತೆಗೆದುಹಾಕಿ 3 ಲಕ್ಷ ರೂ.ಗಳವರೆಗೂ ಶೂನ್ಯ ಬಡ್ಡಿದರದಲ್ಲಿ ಸಾಲ ಕೊಡಬೇಕೆಂದು ಹೇಳಿದ್ದಾರೆ. ಕೆಲವು ದೊಡ್ಡ ಹಿಡುವಳಿದಾರರು ಯಾರು ಆ ಪ್ರಮಾಣದಲ್ಲಿ 3 ಲಕ್ಷ ರೂ.ಗಳವರೆಗೆ avail ಮಾಡುವುದಕ್ಕೆ ಅವಕಾಶವಿದೆ, ಅಂಥವರಿಗೆ ಆ ಒಂದು ಅನುಕೂಲ ಸಿಗುತ್ತದೆ. ಅವರೂ ಕೂಡ ರೈತರೇ ಆಗಿರುವುದರಿಂದ ಅವರಿಗೆ ಬಡ್ಡಿ ರಿಯಾಯಿತಿ ಸಿಗುತ್ತದೆ. ತಾವು ಹೇಳುವ ಹಾಗೆ, ಸಂಖ್ಯೆ ಕಡಿಮೆಯಾಗಬಹುದು.

ಶ್ರೀ ಕೆ.ಜಿ. ಬೋಪಯ್ಯ:- ಸಂಖ್ಯೆ ಕಡಿಮೆ ಅಲ್ಲ, ನೀವು ಕೊಟ್ಟಿದ್ದೇ ಕಡಿಮೆ. ಕೇಳಿದವರಿಗೆ ನೀವು ಕೊಡಲೇ ಇಲ್ಲ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್:- ಹಾಗಿದ್ದರೆ, 1 ಎಕರೆ ಇದ್ದವರಿಗೂ 3 ಲಕ್ಷ ರೂ., 10 ಎಕರೆ ಇರುವವರಿಗೂ ಎಂದು ಹಾಗೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ.ಜಿ. ಬೋಪಯ್ಯ:- 2 ಲಕ್ಷ ರೂ. ಕೊಡುವುದಕ್ಕಾಗುವುದಿಲ್ಲವೇ? ಇವತ್ತು prompt ಆಗಿ ಮಾಡುವುದು ರೈತನೇ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್:- ಇದು 95% prompt repayment ಆಗುವುದು. ಏಕೆಂದರೆ, ಯಾರೂ ಒಂದು ವರ್ಷದೊಳಗೆ ಬಡ್ಡಿರಹಿತ ಸಾಲ ಇದೆಯಲ್ಲ.... ಅವರು ಒಂದು ವರ್ಷ ದಾಟಿದರೆ....

ಶ್ರೀ ಕೆ.ಜಿ. ಬೋಪಯ್ಯ:- ನಮ್ಮ ಜಿಲ್ಲೆಯಲ್ಲಿ 2 ಲಕ್ಷ ರೂ. ಕೇಳಿದವರಿಗೆ ಇವರು 30% ಕೊಟ್ಟಿಲ್ಲ. 25% ಕೊಟ್ಟಿಲ್ಲ. ಬೇಕಾದರೆ ಮಾಹಿತಿ ತರಿಸಿ ನೋಡಿ. 2 ಲಕ್ಷ ರೂ. ಕೇಳಿದವರಿಗೆ ಏನೂ ಕೊಡುವುದಿಲ್ಲ.

ಅಧ್ಯಕ್ಷರು:- ಬೋಪಯ್ಯನವರೆ, ನೀವು ಮಾತನಾಡುವಾಗ ಹೇಳಿ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್:- ಮಾನ್ಯ ಅಧ್ಯಕ್ಷರೆ, ಎಲ್ಲಾ ರೈತರಿಗೆ ಇದರಲ್ಲಿ ಸಾಲ ಸೌಲಭ್ಯ ಸಿಗುತ್ತಿಲ್ಲ. Commercial bank ನಲ್ಲಿ ಹೆಚ್ಚು ಸಂಖ್ಯೆಯಲ್ಲಿದ್ದಾರೆ. ನಮ್ಮ ಕಡೆಯಿಂದ ಹೆಚ್ಚಿಗೆ ಕೊಡಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ಹೋದ ಬಾರಿ 6 ಸಾವಿರ ಕೋಟಿ ಇತ್ತು. ಈಗ 7 ಸಾವಿರ ಕೋಟಿ ಕೊಡುತ್ತಿದ್ದೇವೆ. ಮುಂದಿನ ವರ್ಷಕ್ಕೆ 8 ಸಾವಿರ ಕೋಟಿಗೆ ವಿಸ್ತರಿಸಬೇಕೆಂದು ಇದ್ದೇವೆ. ಹೀಗೆ ಕೊಡುವ ಮೂಲಕ ಬಡ್ಡಿ ರಿಯಾಯಿತಿ ಸೌಲಭ್ಯ ರೈತರಿಗೆ ದೊರಕುವಂತೆ ಮಾಡುತ್ತೇವೆ.

ಶ್ರೀ ಕೆ.ಜಿ. ಬೋಪಯ್ಯ:- ಬಡ್ಡಿ ರಹಿತ ಸಾಲವನ್ನು ಎಷ್ಟು ಜನ ರೈತರಿಗೆ ಕೊಟ್ಟಿದ್ದೀರಿ?

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:- 11 ಲಕ್ಷ ಜನ already ತೆಗೆದುಕೊಂಡಿದ್ದಾರೆಂದು ಅವರೇ ಹೇಳಿದರಲ್ಲ. ಗೌರವಾನ್ವಿತ ಹೆಚ್.ಡಿ. ಕುಮಾರಸ್ವಾಮಿಯವರು ಏನು ಹೇಳುತ್ತಿದ್ದಾರೆ 11 ಲಕ್ಷ ಜನರಿಗೆ ಈಗಾಗಲೇ ಕೊಟ್ಟಿದ್ದು, ಮಾರ್ಚ್ ಮುಗಿಯುವುದರೊಳಗೆ 15 ಲಕ್ಷ reach ಮಾಡುತ್ತೇವೆ.

ಶ್ರೀ ಕೆ.ಜಿ. ಬೋಪಯ್ಯ:- ನಮ್ಮ ಡಿ.ಸಿ.ಸಿ. ಬ್ಯಾಂಕಿನಲ್ಲಿ 100 ಜನ ಸಾಲ ಕೇಳಿದರೆ 25 ಜನಕ್ಕೆ ಕೊಟ್ಟಿಲ್ಲ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಮಾನ್ಯ ಅಧ್ಯಕ್ಷರೆ, ಸಹಕಾರಿ ಕ್ಷೇತ್ರದಲ್ಲಿ ನೀವು ಕೊಟ್ಟಿರುವ ಸಾಲ ಆ ಬೆಳೆ ಆಧಾರದ ಮೇಲೆ ಬೆಳೆ ಆಧಾರ ಬಿಟ್ಟು ಬೇರೇನು ಇರುವುದಿಲ್ಲ. ರೈತರಿಗೆ ಸಾಲ ವಿಸ್ತರಣೆ ಮಾಡಬೇಕೆಂಬ ಮನಸ್ಸು ನಿಮಗಿದ್ದರೆ ಬೆಳೆ ಸಾಲ ಮತ್ತು ಅವನು ಬದುಕುವುದಕ್ಕೆ ಸಾಲ ಎರಡನ್ನೂ ಕೊಡಲು ಪ್ರಯತ್ನ ಮಾಡಿದರೆ ಕನಿಷ್ಟ ಅವನ ಕುಟುಂಬಕ್ಕೆ ಒಂದರಿಂದ ಒಂದುವರೆ ಲಕ್ಷ ಸಾಲ ಸಿಗುತ್ತದೆ. ಇದು ಏನಾಗುತ್ತದೆಂದರೆ...

ಅಧ್ಯಕ್ಷರು:- ನೀವು ಮಾತನಾಡುವಾಗ ಅದನ್ನೆಲ್ಲಾ ಹೇಳಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಮಾನ್ಯ ಅಧ್ಯಕ್ಷರೆ, 11.94 ಕುಟುಂಬಗಳಿಗೆ ಸುಲಭವಾಗಿ ಸಾಲ ದೊರಕುವುದಕ್ಕೆ ಎಂದು ನಾನು ಹೇಳಿದೆ. ಇನ್ನುಳಿದ ರೈತರು ಏನಾಗಬೇಕು? ಅದರಲ್ಲಿ ಲೆಕ್ಕ ತೆಗೆಯುವುದಾದರೆ ಅತಿ ಸಣ್ಣ ರೈತರು, ಮಧ್ಯಮ ವರ್ಗದ ರೈತರು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಸಣ್ಣ ರೈತರಿಗೆ ನೀವು ಸಾಲ ಕೊಡುತ್ತಿಲ್ಲ. 3 ಲಕ್ಷ ಬಡ್ಡಿ ರಹಿತ ಸಾಲ ಕೊಡುವುದು ಒಂದು ಕಡೆ. ಆದರೆ ಒಂದು ಎಕರೆ, ಎರಡು ಎಕರೆ ಭೂಮಿ ಇರುವ ಅತಿ ಸಣ್ಣ ರೈತರು ಏನಿದ್ದಾರೆ, ಅವರಿಗೆ ಸಾಲ ಕೊಡುವುದಕ್ಕೆ ಇನ್ನೂ ಸ್ವಲ್ಪ ವಿಸ್ತರಣೆ ಮಾಡಬೇಕು. ಅದರ ಬಗ್ಗೆ ನೀವು ಅಧಿಕಾರಿಗಳ ಜೊತೆ ಚರ್ಚಿಸಿ ಸಹಕಾರಿ ಬ್ಯಾಂಕಿನವರನ್ನು ಕರೆದು ಅವರೊಡನೆ ಚರ್ಚೆ ಮಾಡಿ ಅವರ ಮುಖಾಂತರ ನೀವು ಕೆಲಸ ಮಾಡಬೇಕು.

ಅಧ್ಯಕ್ಷರು:- ಇದರ ಬಗ್ಗೆ ನೀವು ಸಲಹೆ ಏನೆಂಬುದನ್ನು ಹೇಳಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಅದನ್ನೇ ನಾನು ಸರ್ಕಾರಕ್ಕೆ ಹೇಳುತ್ತಿದ್ದೇನೆ. ಸಹಕಾರಿ ಬ್ಯಾಂಕಿನವರನ್ನು, ಅಪೆಕ್ಸ್ ಬ್ಯಾಂಕಿನವರನ್ನು, ನಬಾರ್ಡ್ ಅಧಿಕಾರಿಗಳನ್ನು ಕರೆದು ಇನ್ನೂ ಹೆಚ್ಚಿನ ಸಾಲ ಕೊಡುವುದಕ್ಕೆ

ನಬಾರ್ಡಿನಿಂದ ಹೆಚ್ಚಿನ ಹಣ ತರಲು ಪ್ರಯತ್ನ ಮಾಡಿ. 11–12 ಲಕ್ಷ ಕುಟುಂಬಗಳಿಗೆ ಎಂದು limit ಮಾಡಬೇಡಿ. ಆ ರೀತಿ limit ಮಾಡುವುದರಿಂದ ನಿಮ್ಮ ಉದ್ದೇಶ ಸಂಪೂರ್ಣ ಸಫಲವಾಗುವುದಿಲ್ಲ ಎಂದು ಹೇಳಬಯಸುತ್ತೇನೆ. ಮುಖ್ಯಮಂತ್ರಿಗಳು ಏನು ಹೇಳಿದ್ದಾರೆ, ನ್ಯಾಯಾಧೀಕರಣದ ಹಿನ್ನೆಲೆಯಲ್ಲಿ ಸರ್ಕಾರ ಯಾವ ಕ್ರಮ ತೆಗೆದುಕೊಳ್ಳುತ್ತಿದೆ ಎಂಬುದಕ್ಕೆ ಉತ್ತರ ಕೊಟ್ಟಿದ್ದಾರೆ. ನಾನು ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ. ಇಂದು ಆಲಮಟ್ಟಿ ಅಣೆಕಟ್ಟೆಯನ್ನು 524.25 ಮೀಟರಿಗೆ ಏರಿಸುವುದಕ್ಕೆ permission ಸಿಕ್ಕಿದೆ. ಅಲ್ಲಿ ಒಂದು ಎಕರೆ ಭೂಮಿಯನ್ನು ಭೂ ಸ್ವಾಧೀನ ಮಾಡಿಕೊಳ್ಳಬೇಕು. 28 ಹಳ್ಳಿಗಳನ್ನು ಸ್ಥಳಾಂತರಗೊಳಿಸುವುದೇನಿದೆ, ಇದಕ್ಕೆ ಹಿಂದೆ ಅವರೇ ಆರ್ಥಿಕ ಸಚಿವರಾಗಿ, ದೇವೇಗೌಡರು ಮುಖ್ಯ ಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಜಾಮದಾರ್ ಎಂಬ ಅಧಿಕಾರಿಯನ್ನು ನೇಮಿಸಿ ಅಂದು ಯಾವ ವೇಗ ಕೊಟ್ಟಿರಿ, ಕೇವಲ 4 ವರ್ಷದಲ್ಲಿ ಆ ಒಂದು ಯೋಜನೆಯ A-scheme ಕಾರ್ಯಕ್ರಮಗಳನ್ನು ಪೂರ್ಣಗೊಳಿಸಬೇಕಿತ್ತು. ಆ ಸಂದರ್ಭದಲ್ಲಿ ಯಾವ ರೀತಿಯ ತೀರ್ಮಾನಗಳಾಯಿತು ಎಂಬ ಅನುಭವ ನಿಮಗಿದೆ, ಆ ಅನುಭವದಲ್ಲಿ ಮಾಡಿ. ಕೇವಲ ನಮ್ಮ ಅಧಿಕಾರಿಗಳು ಹೇಳುವಂತಹ ವಿಷಯಗಳಿಗೆ ತೃಪ್ತರಾಗದೆ, ಸಮಯವನ್ನು ವ್ಯರ್ಥ ಮಾಡದೆ ಯೋಜನೆಗೆ ವೇಗ ಕೊಡಬೇಕಾಗಿದೆ. ಅದರ ಬಗ್ಗೆ ಗಮನ ಕೊಡಬೇಕು. ಎತ್ತಿನ ಹೊಳೆ ಯೋಜನೆಯ ವಿವರವಾದ ಯೋಜನಾ ವರದಿ, ಸಾಗಾಣಿಕೆ ವ್ಯವಸ್ಥೆಯನ್ನು ಒಳಗೊಂಡ 12,916 ಕೋಟಿ ರೂ.ಗಳಿಗೆ ಆಡಳಿತಾತ್ಮಕ ಅನುಮೋದನೆ, ಮೊದಲನೆ ಹಂತದ ಕಾಮಗಾರಿಗೆ ಮರು ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದು ಹೇಳುತ್ತಿದ್ದೀರಿ. ಒಂದು ಸರ್ವ ಪಕ್ಷದ ಸಭೆ ಕರೆಯಿರಿ ಎಂದು ನಾನು ಕಳೆದ ವಿಧಾನಸಭೆಯ ಕಲಾಪದಲ್ಲಿ ಹೇಳಿದೆ. ನೀರು ಕೊಡುವ ವಿಚಾರದಲ್ಲಿ ನಾವೆಲ್ಲರೂ, ಇಡೀ ಸದನ ಸಂಪೂರ್ಣವಾಗಿ ಸರ್ಕಾರದ ಪರವಾಗಿದ್ದೇವೆ. ಇಂದು ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ರಾಮನಗರ ಜಿಲ್ಲೆ, ... ನಮ್ಮ ಶಿವಲಿಂಗೇಗೌಡರು ಅರಸೀಕೆರೆಗೆ 2 ಟಿ.ಎಂ.ಸಿ. ನೀರನ್ನು ಕೇಳುತ್ತಿದ್ದರು,

ಎಲ್ಲದಕ್ಕೂ ಎತ್ತಿನಹೊಳೆ ಎಂದು ಹೇಳಿದ್ದಾರೆ. ನಮ್ಮ ರಾಮನಗರ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಸದನದಲ್ಲಿ ಇಲ್ಲ. ಅವರು ರಾಮನಗರದಲ್ಲಿ ನಡೆದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಭಾಷಣ ಮಾಡುವ ಸಂದರ್ಭದಲ್ಲಿ ರಾಮನಗರಕ್ಕೆ 2 ಟಿ.ಎಂ.ಸಿ. ನೀರನ್ನು ತರುತ್ತೇವೆಂದು ಹೇಳಿದ್ದಾರೆ. ಸರ್ಕಾರ ತ್ಯಾಗರಾಜನ್‌ರವರ ಸಮಿತಿಯ ವರದಿಯನ್ನು ತೆಗೆದುಕೊಂಡಿದೆ. ಅದರಲ್ಲಿ ಎತ್ತಿನಹೊಳೆಯಿಂದ ಬೆಂಗಳೂರು ನಗರಕ್ಕೆ ಕುಡಿಯುವ ನೀರಿಗೆ 10 ಟಿ.ಎಂ.ಸಿ. ಕೊಡುತ್ತೇವೆಂದು ಹೇಳಿಕೊಂಡಿದ್ದೀರಿ. 9 ಟಿ.ಎಂ.ಸಿ. ಯಿಂದ 24 ಟಿ.ಎಂ.ಸಿ. ನೀರು ಸಿಗುತ್ತದೆಂದು ಸರ್ಕಾರದಲ್ಲಿ ಯಾರೋ ಹೇಳಿದ್ದಾರೆಂದು ತೀರ್ಮಾನಕ್ಕೆ ಬಂದಿದ್ದೀರಿ, ಯಾವ ಆಧಾರದ ಮೇಲೆ 24 ಟಿ.ಎಂ.ಸಿ. ನೀರು ಎಂದು ಹೇಳಿದ್ದಾರೋ ಅದರ ಬಗ್ಗೆ ಚರ್ಚೆಯಾದರೆ ಒಂದು ವಿವರವಾಗಿ ನನ್ನಲ್ಲಿರುವ ಮಾಹಿತಿಯನ್ನು ಕೊಟ್ಟರೆ... ನಮ್ಮ ರಮೇಶ್ ಕುಮಾರ್ ರವರು, ಉಪ ಸಭಾಧ್ಯಕ್ಷರಾದ ಶಿವಶಂಕರ ರೆಡ್ಡಿ ರವರು ಕೋಲಾರ, ಚಿಕ್ಕಬಳ್ಳಾಪುರಕ್ಕೆ ನೀರು ಬಂದೇ ಬಿಡುತ್ತದೆಂದು ಬಹಳ ಆಸೆ ಇಟ್ಟುಕೊಂಡಿದ್ದಾರೆ. ನಮ್ಮ ಕ್ಷೇತ್ರದ ಜನರು ತೃಪ್ತರಾಗಬಹುದೆಂಬ ಆಸೆಯನ್ನು ಇಟ್ಟುಕೊಂಡಿದ್ದಾರೆ. ಅಲ್ಲಿರುವ ವಾಸ್ತವಾಂಶವನ್ನು ಚರ್ಚೆ ಮಾಡಿ ಕೇವಲ ಎತ್ತಿನ ಹೊಳೆ ಯೋಜನೆ ಎಂದು ಸಮಯ ಹರಣ ಮಾಡದೆ ಬೇರೆ ಬೇರೆ ರೀತಿಯಲ್ಲಿ ಅನುಷ್ಠಾನಕ್ಕೆ ತರಲು ಸರ್ಕಾರ ಗಮನ ಕೊಡಬೇಕು. ನಾನು ಸರ್ಕಾರದ ಗಮನಕ್ಕೆ ತರುವುದೇನೆಂದರೆ ಭದ್ರಾ ಮೇಲ್ದಂಡೆ ಯೋಜನೆಗೆ ಕೇಂದ್ರಸರ್ಕಾರದಿಂದ ರಾಷ್ಟ್ರೀಯ ಯೋಜನೆ ಎಂದು ಘೋಷಣೆ ಮಾಡಿ ಹಣ ಕೊಡುವುದಕ್ಕೆ ಅರ್ಜಿ ಹಾಕುವುದಾಗಿ ಹೇಳಿಕೊಂಡಿದ್ದೀರಿ. ಕೇಂದ್ರಸರ್ಕಾರ ಅದನ್ನು ಘೋಷಣೆ ಮಾಡುತ್ತದೆಯೆ? ನೀವು ಕೇಂದ್ರಸರ್ಕಾರದ ಹಣವನ್ನು ತರಲು ಸಾಧ್ಯವೆ? ಆ ಕಾಲದಲ್ಲಿ ನಾವು 4300 ಕೋಟಿ ರೂ.ಗಳ ವೆಚ್ಚದಲ್ಲಿ ಇರುವ ನೀರನ್ನು ಈ ಭಾಗದವರಾದರೂ ತಕ್ಷಣ ಉಪಯೋಗ ಮಾಡಿಕೊಳ್ಳಲಿ. ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಉಪಯೋಗವಾಗದಿದ್ದರೂ ಚಿತ್ರದುರ್ಗ, ತುಮಕೂರು ಜಿಲ್ಲೆಗೆ ಏನು ಅನುಕೂಲವಾಗುತ್ತಿತ್ತು... ಕೋಲಾರ ಜಿಲ್ಲೆಗೆ ಭದ್ರಾ ಮೇಲ್ದಂಡೆ ಯೋಜನೆಯಿಂದ 3 ಟಿ.ಎಂ.ಸಿ ನೀರನ್ನು ಕೊಡುವುದಕ್ಕೆ

ತೀರ್ಮಾನ ಮಾಡಿದ್ದೆವು, ಕಳೆದ 5 ವರ್ಷದಲ್ಲಿ ಕೇವಲ 700 ಕೋಟಿ ಖರ್ಚು ಮಾಡಿದ್ದಾರೆ. ಈ ರೀತಿಯ ವೇಗವನ್ನು ಕೊಟ್ಟಾಗ ಯೋಜನೆಯನ್ನು ಸಂಪೂರ್ಣಗೊಳಿಸಲು ಇನ್ನು ಎಷ್ಟು ವರ್ಷಗಳು ಬೇಕಾಗುತ್ತದೆ? ನಾವು ಎತ್ತಿನಹೊಳೆ ಯೋಜನೆಯೊಂದಕ್ಕೆ ಮಾತ್ರ ಬದ್ಧವಾಗದೆ, ನಾನು ಮುಖ್ಯಮಂತ್ರಿಗಳಲ್ಲಿ ಸದನದ ಮೂಲಕ ಮನವಿ ಮಾಡುತ್ತೇನೆ. ಸದನದಲ್ಲಿ ಇಂದು ನೀವು ಒಂದು ದೃಢವಾದ ನಿರ್ಧಾರವನ್ನು ಕೈಗೊಳ್ಳಿ, ಮೇಕೆದಾಟಿನ ಬಳಿ 50 ಟಿ.ಎಂ.ಸಿ. ನೀರನ್ನು ಹಿಡಿದು ಇಟ್ಟುಕೊಳ್ಳುವುದಕ್ಕೆ ನಮಗೆ ಅವಕಾಶವಿದೆ. ಅಲ್ಲಿ ಒಂದು ಜಲಾಶಯವನ್ನು ನಿರ್ಮಾಣ ಮಾಡುವ ಮುಖಾಂತರ ಈಗಾಗಲೇ ಕಾವೇರಿ ನ್ಯಾಯಾಧೀಕರಣ ತೀರ್ಪು ಏನು ಬಂದಿದೆ, ಅದರ ಆಧಾರದಲ್ಲಿ ತಮಿಳುನಾಡಿಗೆ 193 ಟಿ.ಎಂ.ಸಿ ನೀರನ್ನು ಕೊಡಬೇಕು. ನಾವು ನ್ಯಾಯಾಧೀಕರಣ ತೀರ್ಪನ್ನು ಉಲ್ಲಂಘನೆ ಮಾಡುವುದಿಲ್ಲ, ಯಾವ ರೀತಿಯಲ್ಲಿಯಾದರೂ ನೀರನ್ನು ಕೊಡುತ್ತೇವೆ. ನಮಗೆ ಕೇಂದ್ರಸರ್ಕಾರದಿಂದ ಆರ್ಥಿಕ ನೆರವು ಬೇಕಿಲ್ಲ, ನಮ್ಮ ಕಾವೇರಿ ಜಲಾಶಯದಿಂದಲೇ ಬೆಂಗಳೂರು ನಗರ, ಕೋಲಾರ, ಚಿಕ್ಕಬಳ್ಳಾಪುರ ಮತ್ತು ತುಮಕೂರು ಭಾಗಗಳಿಗೆ 50 ಟಿ.ಎಂ.ಸಿ. ನೀರನ್ನು ಸಂಗ್ರಹ ಮಾಡುವುದಕ್ಕೆ ಅವಕಾಶವಿದೆ. ಎತ್ತಿನಹೊಳೆ ಒಂದೇ ಯೋಜನೆಯನ್ನು ಇಟ್ಟುಕೊಂಡು ನಮ್ಮ ಜನರನ್ನು ಎಲ್ಲೋ ಒಂದು ಕಡೆ ದಾರಿ ತಪ್ಪಿಸುವ ಕೆಲಸವಾಗಬಾರದೆಂಬುದು ಇಂದು ಸದನದಲ್ಲಿ ತೀರ್ಮಾನವಾಗಬೇಕು. ಒಟ್ಟಾರೆ ನಮಗೆ ನೀರಿನ ಅವಶ್ಯಕತೆ ಇದೆ. ಈ ವಿಷಯದಲ್ಲಿ ಸರ್ಕಾರ ಕಾಲಹರಣ ಮಾಡುವುದು ಬೇಡ, ಕೇಂದ್ರ ಸರ್ಕಾರದ ಮುಂದೆ ಭಿಕ್ಷೆ ಬೇಡುವುದು ಬೇಡ. ಮೇಕೆಧಾಟಿನ ಹತ್ತಿರ ಒಂದು ಡ್ಯಾಂ ನಿರ್ಮಾಣ ಮಾಡಲು ಚರ್ಚೆಗಳನ್ನು ಮಾಡಿದ್ದೇವೆ. ಅಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡುವುದರ ಜೊತೆಗೆ 50 ಟಿ.ಎಂ.ಸಿ. ನೀರಿನಲ್ಲಿ ಬೆಂಗಳೂರು ನಗರಕ್ಕೆ ಕುಡಿಯುವ ನೀರು, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಜನತೆಯ ನಿರೀಕ್ಷೆಗಿಂತಲೂ ಹೆಚ್ಚಿನ ನೀರು ಕೊಡುವುದಕ್ಕೆ ಅವಕಾಶವಿದ್ದು ಇದಕ್ಕೆ ಈ ಒಂದೇ ಮೂಲವಿರುವುದು.

ಎತ್ತಿನಹೊಳೆ ಎಂದು ಹೇಳಿ ಜನರನ್ನು ದಾರಿತಪ್ಪಿಸುವುದು ಒಳ್ಳೆಯದಲ್ಲ. ಇಂದು ಮಾನ್ಯ ಮುಖ್ಯಮಂತ್ರಿಗಳು ಹೇಮಾವತಿ ನೀರನ್ನು ಮಾಗಡಿಗೆ ನಾಳೆ ಬೆಳಿಗ್ಗೆ ಹರಿಸುತ್ತೇವೆಂದು ಹೇಳಿದ್ದಾರೆ. ಹಾಸನ ನಗರದಲ್ಲಿ ಇಂದು ಕುಡಿಯುವುದಕ್ಕೆ ನೀರಿಲ್ಲದಂತಹ ಪರಿಸ್ಥಿತಿ ಇದೆ. ತುಮಕೂರು ಜಿಲ್ಲೆಯಲ್ಲಿ ರೇವಣ್ಣ ಮತ್ತು ದೇವೇಗೌಡರು ನೀರನ್ನು ಹಿಡಿದಿಟ್ಟುಕೊಂಡಿದ್ದಾರೆ. ತುಮಕೂರಿಗೆ ಇನ್ನೂ ಮೂರು ಟಿ.ಎಂ.ಸಿ. ನೀರು ಕೊಡಬೇಕಾಗಿತ್ತು ಎಂದು ಹೇಳಿ ತುಮಕೂರು ಜಿಲ್ಲೆಯಲ್ಲಿ ಭಾಷಣ ಮಾಡುತ್ತಾರೆ. ಈ ವಿಷಯ ಮಾನ್ಯ ಸಚಿವರಾದ ಜಯಚಂದ್ರ ಅವರಿಗೂ ಗೊತ್ತಿದೆ. ಕೆ.ಡಿ.ಪಿ. ಸಭೆಯಲ್ಲಿ ಅವರ ಮುಂದೆಯೇ ಈ ವಿಷಯ ಚರ್ಚೆಯಾಗಿದೆ.

ಅಧ್ಯಕ್ಷರು:- ತುಮಕೂರುವರೆಗೂ ಚಾನಲ್ ಮಾಡಿಟ್ಟಿದ್ದಾರಲ್ಲವೇ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಮಾನ್ಯ ಅಧ್ಯಕ್ಷರೆ, ಚಾನಲ್ ಮಾಡಿದ್ದಾರೆ, ಈಗಲೂ ಮಾಡುತ್ತಿದ್ದಾರೆ. ಮಾನ್ಯ ಸಚಿವರಾದ ಜಯಚಂದ್ರ ಅವರು ಶಿರಾಗೆ ನೀರು ಕೊಡಬೇಕೆನ್ನುವ ಉದ್ದೇಶದಿಂದ ಚಾನಲ್ ಒಡೆಯುತ್ತಿದ್ದಾರೆ ಮತ್ತು ಹೇಮಾವತಿ ನೀರನ್ನೇ ಚಿಕ್ಕನಾಯಕನಹಳ್ಳಿಗೆ ತೆಗೆದುಕೊಳ್ಳಬೇಕೆನ್ನುವ ಉದ್ದೇಶದಿಂದ ಅಲ್ಲಿಯೂ ಚಾನಲ್ ಒಡೆಯುತ್ತಿದ್ದಾರೆ. ಇದರ ಜೊತೆಗೆ ಮಾಗಡಿಗೆ ತೆಗೆದುಕೊಂಡು ಹೋಗಬೇಕೆಂದು ಅಲ್ಲಿಯೂ lift ಒಡೆಯುತ್ತಿದ್ದಾರೆ.

ಅಧ್ಯಕ್ಷರು:- ಎಲ್ಲಿಂದ? ಹೇಮಾವತಿಯಿಂದ?

ಶ್ರೀ ಕೆ. ಷಡಕ್ಷರಿ:- 54 ಟಿ.ಎಂ.ಸಿ. ನೀರು ಬಿಟ್ಟಿದ್ದೇವೆಂದು ಚೀಫ್ ಇಂಜಿನಿಯರ್‌ಗಳು ಹೇಳಿದ್ದಾರಲ್ಲ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಅವರು ಯಾವ ಚೀಫ್ ಇಂಜಿನಿಯರ್? ಅವರನ್ನು ಕರೆಸಿ ಹೇಳುತ್ತೇನೆ. ಈಗ ಇರುವ ಹಲವಾರು ಜನ ಇಂಜಿನಿಯರ್‌ಗಳಿಗೆ ತಲೆ, ಬುಡ ಗೊತ್ತಿರುವುದಿಲ್ಲ. ಪೈಪ್ ಹಾಕಿ ಕಾಲುವೆ

ತೋಡಿ ದುಡ್ಡು ಮಾಡುವುದು ಒಂದು ಗೊತ್ತಷ್ಟೆ. ಇಲ್ಲಿ ಹಲವಾರು ಅಧಿಕಾರಿಗಳಿದ್ದೀರಿ, ನೀವು ತಪ್ಪು ತಿಳಿದುಕೊಳ್ಳಬೇಡಿ. ಕಾಲುವೆ ತೋಡಿ ಅದರಲ್ಲಿ ಪೈಪ್ ಹಾಕಿ ದುಡ್ಡು ಮಾಡುವುದು ಈಗ ಇರತಕ್ಕಂಥ ಹಲವಾರು ಅಧಿಕಾರಿಗಳಿಗೆ ಗೊತ್ತಿದೆ. ಇದರ ಬಗ್ಗೆ ಯಾರು ತಪ್ಪು ತಿಳಿದುಕೊಳ್ಳಬೇಡಿ. ಇವತ್ತು ಹೇಮಾವತಿಯಲ್ಲಿ ಎಷ್ಟು ನೀರಿದೆ? ಹಾಗೆಯೇ ಕಾವೇರಿ ನ್ಯಾಯಾಧೀಕರಣದಲ್ಲಿ ಎಷ್ಟು ನೀರನ್ನು ಅಲಾಟ್ ಮಾಡಿದ್ದಾರೆ? ನಿಮಗೆ 47 ಟಿ.ಎಂ.ಸಿ. ನೀರನ್ನು ಅಲಾಟ್ ಮಾಡಿದ್ದಾರೆ. ಆದರೆ, ಈಗಾಗಲೇ 54 ಟಿ.ಎಂ.ಸಿ. ನೀರನ್ನು ಉಪಯೋಗ ಮಾಡುತ್ತಿದ್ದೀರಿ. 54 ಟಿ.ಎಂ.ಸಿ. ನೀರನ್ನು ಉಪಯೋಗ ಮಾಡಿದ್ದರೂ ಕೂಡ ತುಮಕೂರಿಗೆ ಇನ್ನೂ ನೀರು ಬರುತ್ತಿಲ್ಲ. ಆದ್ದರಿಂದ, ಹೇಮಾವತಿ ನದಿಯಿಂದ ಮಾಗಡಿಗೆ ಎಲ್ಲಿಂದ. ನೀರು ಕೊಡುವುದಕ್ಕೆ ಹೊರಟ್ಟಿದ್ದೀರಿ? ವಾಸ್ತವಾಂಶದ ಬಗ್ಗೆ ನಾವು ಚರ್ಚೆ ಮಾಡೋಣ. ಇವತ್ತಿನದಿವಸ ಸರ್ಕಾರ ಒಂದು ದೃಢನಿರ್ಧಾರ ಮಾಡಬೇಕಾಗಿದೆ. ಅದೇನೆಂದರೆ, ಇವತ್ತಿನದಿವಸ ಇರುವ ಹಲವಾರು ಕಾರ್ಯಕ್ರಮಗಳನ್ನು ಮುಂದಕ್ಕೆ ಹಾಕಿ ಅಂದರೆ, ನಮಗೆ ರಸ್ತೆ ಅಭಿವೃದ್ಧಿ ಮಾಡುವುದು ಬೇಡ. ಈ ವಿಷಯ ಏತಕ್ಕೆ ಹೇಳುತ್ತಿದ್ದೇನೆಂದರೆ, ಗ್ರಾಮೀಣಾಭಿವೃದ್ಧಿಗೋಸ್ಕರ 20 ಕಿ.ಮೀ. ರಸ್ತೆ ಮಾಡಿಕೊಡುತ್ತೇವೆಂದು ಹೇಳಿದ್ದೀರಿ. ಇದರ ಕ್ರಿಯಾಯೋಜನೆ ಮಾಡುವುದಕ್ಕೂ ಸಹ ಹೇಳಿದ್ದೀರಿ. ಇವತ್ತಿನದಿವಸ ಜಿಲ್ಲಾಪಂಚಾಯುತ್‌ನಿಂದ ಗ್ರಾಮೀಣ ಪ್ರದೇಶದಲ್ಲಿ ಸುಮಾರು 94 ಸಾವಿರ ಕಿ.ಮೀ. ರಸ್ತೆ ಆಗಬೇಕಾಗಿದೆ. 20 ಕಿ.ಮೀ. ರಸ್ತೆಯನ್ನು ಒಂದು ತಾಲ್ಲೂಕಿಗೆ ಕೊಟ್ಟರೆ ಒಂದು ವರ್ಷದಲ್ಲಿ ಎಷ್ಟು ಕಿ.ಮೀ. ರಸ್ತೆಯನ್ನು ಅಭಿವೃದ್ಧಿ ಮಾಡುತ್ತೀರಿ? ಈಗ ಇವೆಲ್ಲ ನಮಗೆ ಬೇಡ. ಆದ್ದರಿಂದ, 5 ವರ್ಷ ಮುಂದಕ್ಕೆ ಹಾಕಿ. ರಸ್ತೆ ಇಲ್ಲದೆ ಇದ್ದರೂ ಪರವಾಗಿಲ್ಲ, ಜನರು ಕಾಲ್ನಡಿಗೆಯಲ್ಲಿ ಓಡಾಡಲಿ. ಮೇಕೆದಾಟಿನ ಹತ್ತಿರ ಒಂದು ಡ್ಯಾಂ ಕಟ್ಟಲೇ ಬೇಕಾದಂಥ ಅನಿವಾರ್ಯ ಪರಿಸ್ಥಿತಿ ನಮಗೆ ಇದೆ. ಇದನ್ನು ಮಾಡದೆ ಇದ್ದರೆ ಮುಂದೆ ನಮಗೆ ಉಳಿಗಾಲ ಇಲ್ಲ.

ಅಧ್ಯಕ್ಷರು:- ಇದನ್ನು ಎಲ್ಲರೂ ಹೇಳಿಕೊಂಡು ಬಂದಿದ್ದಾರೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಮಾನ್ಯ ಅಧ್ಯಕ್ಷರೆ, ಈ ಕಾರಣಕ್ಕೋಸ್ಕರವೇ ಈ ಬಗ್ಗೆ ಒಂದು ತೀರ್ಮಾನ ಮಾಡಿಕೊಳ್ಳಿ ಎಂದು ನಾನು ಸರ್ಕಾರಕ್ಕೆ ಹೇಳುತ್ತಿದ್ದೇನೆ. ಏಕೆಂದರೆ, ಹಿಂದಿನ ಸರ್ಕಾರಗಳು ಈ ಕೆಲಸವನ್ನು ಮಾಡಲಿಲ್ಲ. ನಾವಂತೂ ಮಾಡುವುದಕ್ಕೆ ಆಗಲಿಲ್ಲ. ನಾವು ಕೇವಲ 20 ತಿಂಗಳು ಮಾತ್ರ ಇದ್ದೆವು. ಆದ್ದರಿಂದ, ನನ್ನ ಕೈಯಲ್ಲಿ ಆಗಲಿಲ್ಲ. ಆಗ ನಮ್ಮದು ಸಮ್ಮಿಶ್ರ ಸರ್ಕಾರ ಆಗಿತ್ತು. ಈಗ ಇರತಕ್ಕಂಥ ಅವಕಾಶವನ್ನು ಉಪಯೋಗಿಸಿಕೊಳ್ಳಿ ಎಂದು ಹೇಳುತ್ತಿದ್ದೇನೆ. ಏಕೆಂದರೆ, ಈ ಸರ್ಕಾರದಲ್ಲಿ ಹಣದ ಕೊರತೆ ಇಲ್ಲ. ಈ ವಿಷಯವನ್ನು ನಾನು ಬೆಳಿಗ್ಗೆಯಿಂದ ಹೇಳುತ್ತಿದ್ದೇನೆ. ಆದರೆ, ಸಕಾರಕ್ಕೆ ಬದ್ಧತೆ ಬೇಕಷ್ಟೆ. ಆಂಧ್ರ ಪ್ರದೇಶದವರು ನೀರಾವರಿ ಯೋಜನೆಗಳನ್ನು ಮುಗಿಸುವುದಕ್ಕೆ ಒಂದೇ ಬಾರಿಗೆ 30,000 ಕೋಟಿ ರೂಪಾಯಿಯ ಒಂದು ಟೆಂಡರ್ ಕರೆದು ಹಣ ಖರ್ಚು ಮಾಡುವುದಕ್ಕೆ ಅವರಿಗೆ ಸಾಧ್ಯವಾಗುತ್ತಿದೆ. ಆದ್ದರಿಂದ ನಮಗೇಕೆ ಸಾಧ್ಯವಾಗುವುದಿಲ್ಲ? ಆದ್ದರಿಂದ, ನಾನು ಹೇಳುವುದೇನೆಂದರೆ, ಹಿಂದೆ ಮಾಡಿರತಕ್ಕಂಥ ತಪ್ಪುಗಳನ್ನು ಈಗಿನ ಸರ್ಕಾರಗಳು ಮಾಡಿಕೊಂಡು ಹೋಗುವುದು ಬೇಡ ಎಂದು ಹೇಳುತ್ತೇನೆ. ಬಯಲುಸೀಮೆ ಪ್ರದೇಶಕ್ಕೆ ನೀರನ್ನು ತರತಕ್ಕಂಥದ್ದಕ್ಕೆ ಸರ್ಕಾರ ತಕ್ಷಣ ಒಂದು ದೊಡ್ಡ ಮಟ್ಟದ ತೀರ್ಮಾನ ಮಾಡಲಿ. ಬೇಕಾದರೆ, ಅದಕ್ಕಾಗಿ ಸಾಲ ಮಾಡಲಿ.

ಅಧ್ಯಕ್ಷರು:- ನೀರಾವರಿಯ ಎಲ್ಲ ಪ್ರಾಜೆಕ್ಟ್‌ಗಳ ಬಗ್ಗೆ ಸಂಕ್ಷಿಪ್ತವಾಗಿ ಹೇಳಿದ್ದೀರಿ. ಈಗ ತಮ್ಮಿಂದ ಸರ್ಕಾರಕ್ಕೆ ಏನು ಮಾರ್ಗದರ್ಶನ ಬೇಕೆಂದರೆ, on going ನೀರಾವರಿ ಯೋಜನೆಗಳನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸುವುದಕ್ಕೆ ಸರ್ಕಾರ ಏನು ಮಾಡಬೇಕೆಂಬ ಬಗ್ಗೆ ಸ್ವಲ್ಪ ಹೇಳಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಮಾನ್ಯ ಅಧ್ಯಕ್ಷರೆ, ಈ ಒಂದು ಉದ್ದೇಶದಿಂದಲೇ ನಾನು ಸರ್ಕಾರದ ಗಮನ ಸೆಳೆಯುತ್ತಿದ್ದೇನೆ. ಕೃಷ್ಣಾ

ಮೇಲ್ದಂಡೆ ಯೋಜನೆ ಇರಬಹುದು ಅಥವಾ ಬಯಲು ಸೀಮೆ ಪ್ರದೇಶದ ಭಾಗಗಳಿಗೆ ನೀರು ಕೊಡತಕ್ಕಂಥದ್ದು ಇರಬಹುದು. ಈ ಬಗ್ಗೆ ಜನತೆಗೆ ಪ್ರಣಾಳಿಕೆಯಲ್ಲಿ ಒಂದು ಭರವಸೆ ಕೊಟ್ಟಿದ್ದಾರೆ. ಅದೇನೆಂದರೆ, ಮುಂದಿನ 5 ವರ್ಷಗಳಲ್ಲಿ 50 ಸಾವಿರ ಕೋಟಿ ರೂಪಾಯಿಗಳನ್ನು ನೀರಾವರಿ ಯೋಜನೆಗಳಿಗೆ ವೆಚ್ಚ ಮಾಡುತ್ತೇವೆಂದು ಹೇಳಿದ್ದಾರೆ. ಆದ್ದರಿಂದ, ಸರ್ಕಾರಕ್ಕೆ ಮನವಿ ಮಾಡುವುದೇನೆಂದರೆ, ಇವತ್ತು ಸಾಲ ಮಾಡುವುದು ಅನಿವಾರ್ಯವಾದರೂ ಪರವಾಗಿಲ್ಲ, ನೀರಾವರಿ ಯೋಜನೆಗೋಸ್ಕರ 1 ಲಕ್ಷ ಕೋಟಿ ರೂಪಾಯಿಗಳನ್ನು ಸಾಲ ಮಾಡಿ. ಏಕೆಂದರೆ, ಇದು asset create ಆಗುತ್ತದೆ. ಹಾಗೆಯೇ GDP growthಗೆ ಅನುಕೂಲವಾಗುತ್ತದೆ. ಮಾನ್ಯ ಸಿದ್ದರಾಮಯ್ಯನವರಿಗೆ ಇರತಕ್ಕಂಥ ಅನುಭವದಲ್ಲಿ ಸರಿಯಾದ ರೀತಿಯಲ್ಲಿ ಸ್ವಲ್ಪ ಗಮನಕೊಟ್ಟರೆ ಸಾಕು. ಏಕೆಂದರೆ, ಮೊನ್ನೆದಿವಸ ಅವರು ಒಂದು ಮಾತನ್ನು ಹೇಳಿದ್ದಾರೆ. ಅದೇನೆಂದರೆ, ನನಗೆ ವಿಪರೀತ ಕೆಲಸದ ಒತ್ತಡದಿಂದ ಆರ್ಥಿಕ ಇಲಾಖೆಯನ್ನು ನಿರ್ವಹಣೆ ಮಾಡತಕ್ಕಂಥದ್ದಕ್ಕೆ ಸಮಯವನ್ನು ಮೀಸಲಿಡುವುದಕ್ಕೆ ನನ್ನ ಕೈಯಲ್ಲಿ ಆಗುತ್ತಿಲ್ಲ. ಮತ್ತೆ ಆ ಕಡೆ ಗಮನ ಹರಿಸುವುದಕ್ಕೆ ಸಾಧ್ಯವಾಗುತ್ತಿಲ್ಲವೆಂಬ ಮಾತನ್ನು ಹೇಳಿದ್ದಾರೆ. ಅವರು ಸ್ವಲ್ಪ ಬೇರೆ ಚಟುವಟಿಕೆಗಳಿಗೆ ಅಂದರೆ, ತಾವು ಮಾಡುತ್ತಿರುವ ಸಮ್ಮೇಳನವನ್ನು ಬೇರೆ ನಾಯಕರಿಗೆ ಬಿಟ್ಟು ನೀವು ಅಲ್ಲಿಗೆ ಹೋಗುವುದನ್ನು ಕಡಿಮೆ ಮಾಡಿ. ಈ ರೀತಿಯಾದ ಸಮ್ಮೇಳನಗಳನ್ನು ಅವರ ಪಕ್ಷದ ಅಧ್ಯಕ್ಷರಿಗೆ ಬಿಟ್ಟುಕೊಟ್ಟು ಹಣಕಾಸು ಇಲಾಖೆ ಕಡೆ ಹೆಚ್ಚಿನ ಗಮನವನ್ನೂ ಕೊಟ್ಟರೆ ಬಹುಶಃ ನೀರಾವರಿಗೆ ಹೆಚ್ಚಿನ ಆದ್ಯತೆ ಕೊಡುವುದಕ್ಕೆ ಸಾಧ್ಯವಾಗಬಹುದೆಂದು ಹೇಳುವುದಕ್ಕೆ ಬಯಸುತ್ತೇನೆ. ನೀರಾವರಿ ವಿಷಯದಲ್ಲಿ ಹಿಂದೆ ನಾವೇನು ಎಡವಿದ್ದೇವೆಯೋ ಅದೇ ನಮ್ಮ ಅನುಭವ ಎಂದು ಮನವರಿಕೆ ಮಾಡಿಕೊಂಡು ಇವತ್ತು ನೀರಾವರಿಗೆ ಆದ್ಯತೆ ಕೊಡಬೇಕಾಗುತ್ತದೆ. ತಾವು ಬಜೆಟ್‌ನಲ್ಲಿ ಸಣ್ಣ ನೀರಾವರಿ ವಿಷಯ ಪ್ರಸ್ತಾಪ ಮಾಡಿರುವಾಗ ತಾವು ಏನು ಹೇಳಿದ್ದೀರೆಂದರೆ, "ಸೂರ್ಯ ಜ್ಯೋತಿ ರೈತರ ಬಾಳಿನ ಪರಂಜ್ಯೋತಿ" ಎಂಬ

ಒಂದು ಕಾರ್ಯಕ್ರಮದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಈ ಸಂದರ್ಭದಲ್ಲಿ ಜಲಸಂವರ್ಧನ ಇಲಾಖೆಯ ಬಗ್ಗೆ ನಾನು ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ, ಆ ಬಗ್ಗೆ ಚರ್ಚೆ ಮಾಡುವುದಕ್ಕೆ ಹೋದರೆ ತಲೆ ಕೆಟ್ಟು ಹೋಗುತ್ತದೆ. ಕೆರೆ ಕಟ್ಟೆಗಳನ್ನು ವೃದ್ಧಿ ಮಾಡುತ್ತೇವೆಂದು ಈಗಾಗಲೇ 40,000 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಆದರೆ, ಈಗ ಕೆರೆ ಕಟ್ಟೆಗಳನ್ನು ಇವತ್ತಿನದಿವಸ ನಾವು ಹುಡುಕಬೇಕಾಗಿರುವಂಥ ಪರಿಸ್ಥಿತಿಯಲ್ಲಿ ನಾವಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳಲ್ಲಿ ನಾನು ನೀರಾವರಿ ಬಗ್ಗೆ ಮೊತ್ತೊಮ್ಮೆ ಒತ್ತಿ ಒತ್ತಿ ಹೇಳುವುದಕ್ಕೆ ಬಯಸುವುದೇನೆಂದರೆ, ಇದನ್ನು ಬಹಳ ಗಂಭೀರವಾಗಿ ತೆಗೆದುಕೊಂಡು ಇದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಿ ಎಂದು ಹೇಳುತ್ತೇನೆ. ಬೆಂಗಳೂರು ನಗರದ ವಿಷಯದ ಬಗ್ಗೆ ಹೇಳುವುದಾದರೆ, ಹಿಂದಿನ ಎಲ್ಲ ಸರ್ಕಾರಗಳು ಬೆಂಗಳೂರು ನಗರದ ಬಗ್ಗೆ ಚರ್ಚೆ ಮಾಡಿ ಯಾವ್ಯಾವ ರೀತಿಯಲ್ಲಿ ಬೆಂಗಳೂರು ನಗರಕ್ಕೋಸ್ಕರ ಎಷ್ಟೇಷ್ಟು ಹಣ ತೊಡಗಿಸಿದ್ದಾರೆಂದು ನೋಡಿದಾಗ ಎಲ್ಲೋ ಒಂದು ಕಡೆ ಮನಸ್ಸಿಗೆ ನೋವಾಗುತ್ತದೆ. ಇವತ್ತು ಬೆಂಗಳೂರು ನಗರದ ಅಭಿವೃದ್ಧಿಗೆ ಸಂಬಂಧಪಟ್ಟಂತೆ 9,477 ಕೋಟಿ ಬೆಂಗಳೂರು ನಗರದ ಅಭಿವೃದ್ಧಿಗೆ ಕೊಟ್ಟಿದ್ದಾರೆಂದು Times if India ಪತ್ರಿಕೆಯಲ್ಲಿ ಬಂದಿರುವ ವಿಷಯವನ್ನು ನಾನು ನೋಡಿದ್ದೇನೆ. ಇವರ ಬಜೆಟ್‌ನಲ್ಲಿ ಏನು ಹೇಳಿದ್ದಾರೆಂದರೆ, "ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ರಾಜ್ಯ ಸರ್ಕಾರದ ನಗರೋತ್ಥಾನ ಯೋಜನೆ, 13ನೇ ಹಣಕಾಸು ಯೋಜನೆ, ರಾಜ್ಯ ಹಣಕಾಸು ಯೋಜನೆ, ಕೆರೆಗಳ ಅಭವೃದ್ಧಿ ಯೋಜನೆ ಮತ್ತು ಮುಖ್ಯಮಂತ್ರಿಗಳ ವಿಶೇಷ ಅನುದಾನಗಳ ಅಡಿಯಲ್ಲಿ 1527 ಕೋಟಿ ರೂ. ಅನುದಾನ ಲಭ್ಯವಾಗುತ್ತಿದ್ದು ಈ ಅನುದಾನಗಳ ಜೊತೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅನುದಾನ ಸೇರಿಸಿ 2014-15ನೇ ಸಾಲಿನಲ್ಲಿ ಈ ಕೆಳಕಂಡ ಯೋಜನೆಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ. 500 ಕೋಟಿ ರೂ.ಗಳ ವೆಚ್ಚದಲ್ಲಿ ಸುಗಮ ಸಂಚಾರಕ್ಕಾಗಿ ಆಯ್ದ ಆರ್ಟೀರಿಯಲ್ ಮತ್ತು ಸಬ್ ಆರ್ಟೀರಿಯಲ್ ರಸ್ತೆಗಳ ಸಮಗ್ರ ಅಭಿವೃದ್ಧಿ" ಎಂದು ಹೇಳಿದ್ದಾರೆ. ಬಿಜೆಪಿ ಸರ್ಕಾರ ಇದ್ದಾಗಿನಿಂದ

ಬೆಂಗಳೂರಿನ ಅಭಿವೃದ್ಧಿ ಎಂದಾಗ ಈ ವಿಷಯಗಳನ್ನು ಪ್ರತಿ ವರ್ಷ ಬಜೆಟ್ ಪುಸ್ತಕದಲ್ಲಿ ಅಚ್ಚಾಕುತ್ತಿದ್ದಾರೆ. 2014-15ನೇ ಸಾಲಿನ ಬಜೆಟ್‌ನಲ್ಲಿ ಏನು ಹೇಳಿದ್ದಾರೆಂದರೆ, 500 ಕೋಟಿ ರೂ.ಗಳ ವೆಚ್ಚದಲ್ಲಿ ಸುಗಮ ಸಂಚಾರಕ್ಕಾಗಿ ಆಯ್ದ ಆರ್ಟೀರಿಯಲ್ ಮತ್ತು ಸಬ್ ಆರ್ಟೀರಿಯಲ್ ರಸ್ತೆಗಳ ಸಮಗ್ರ ಅಭಿವೃದ್ಧಿ ಎಂದು ಹೇಳಿದ್ದಾರೆ. ಹಾಗೆಯೇ ಕಳೆದ ವರ್ಷದ ಬಜೆಟ್‌ನಲ್ಲಿ ಏನು ಹೇಳಿದ್ದಾರೆಂದರೆ, 300 ಕೋಟಿ ರೂ.ಗಳ ಅಂದಾಜು ವೆಚ್ಚದಲ್ಲಿ 100 ಕಿ.ಮೀ.ಗಳಷ್ಟು ಆರ್ಟೀರಿಯಲ್ ಮತ್ತು ಸಬ್ ಆರ್ಟೀರಿಯಲ್ ರಸ್ತೆಗಳ ಸಮಗ್ರ ಅಬಿವೃದ್ಧಿ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದು ಎಂದು ಹೇಳಿದ್ದಾರೆ. ಕಳೆದ ಬಜೆಟ್ ಮತ್ತು ಅದರ ಹಿಂದಿನ ಬಜೆಟ್ ಹಾಗೂ ಈಗಿನ ಬಜೆಟ್‌ನಲ್ಲಿ ಈ ವಿಷಯ repetition ಆಗುತ್ತಾ ಬಂದಿದೆ. ಮೊನ್ನೆದಿವಸ ಕಾರ್ಪೋರೇಷನ್‌ನವರು ಮಂಡಿಸಿರುವ ಬಜೆಟ್ ಅನ್ನು ನಾನು ನೋಡಿದ್ದೇನೆ. ಪ್ರತಿ ವರ್ಷ ಅವರ ಬಜೆಟ್‌ನಲ್ಲಿ ಈ ವಿಷಯ ಹೇಳಿಕೊಂಡು ಬರುತ್ತಿದ್ದಾರೆ. ಇವತ್ತಿನದಿವಸ ಬಿಬಿಎಂಪಿ ನಗೆಪಾಟಲಿಗೆ ಹೀಡಾಗಿದೆ. ಹಾಗೆಯೇ ಸಾರ್ವಜನಿಕರ ಟೀಕೆಗೆ ಒಳಗಾಗಿದೆ. ಬೆಂಗಳೂರು ಮಹಾನಗರ ಪಾಲಿಕೆಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮಾಡಬೇಕೆಂದು ಚರ್ಚೆಗಳು ನಡೆದಂಥ ಸಂದರ್ಭದಲ್ಲಿ ಮತ್ತು ಇದನ್ನು ರಚನೆ ಮಾಡಿದಂಥ ಸಂದರ್ಭದಲ್ಲಿ ನಾನೂ ಕೂಡ ಒಂದು ಸಣ್ಣ ಪಾತ್ರವನ್ನು ವಹಿಸಿದ್ದೇನೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ 7 ನಗರಸಭೆಗಳು ಒಂದು ಪಟ್ಟಣ ಪಂಚಾಯಿತಿಗಳು ಒಳಗೊಂಡಂತೆ ಸುಮಾರು 110 ಹಳ್ಳಿಗಳನ್ನು ಅದರ ವ್ಯಾಪ್ತಿಗೆ ತಂದಿದ್ದೇವೆ. ಇವತ್ತಿನದಿವಸ ಈ ಬೆಂಗಳೂರು ನಗರದ ಅಭಿವೃದ್ಧಿ ವಿಷಯದಲ್ಲಿ ಹಿಂದಿನ 5-6 ವರ್ಷಗಳಿಂದ ಸರ್ಕಾರ ನಡೆಸಿರುವಂಥವರು ಸುಳ್ಳಿನ ಸರಮಾಲೆಯ ಕಂತೆಯನ್ನು ನಾವು ಬೆಂಗಳೂರು ನಗರಕ್ಕೋಸ್ಕರ ಘೋಷಣೆ ಮಾಡಿಕೊಂಡು ಬಂದಿದ್ದೇವೆ. ಬೆಂಗಳೂರು ನಗರದ ಅಭಿವೃದ್ಧಿ ವಿಷಯದಲ್ಲಿ ಹಿಂದಿನ ಸರ್ಕಾರಗಳು ಹಲವಾರು ಘೋಷಣೆಗಳನ್ನು ಮಾಡಿದ್ದಾರೆ. ಈಗ ಈ ಸರ್ಕಾರ ಕೂಡ ಬೆಂಗಳೂರು ನಗರದ ಅಭಿವೃದ್ಧಿಗೆ ಅದೇರೀತಿಯ ಘೋಷಣೆಗಳನ್ನು

ಮುಂದುವರಿಸಿಕೊಂಡು ಹೋಗಿದ್ದಾರೆಂದು ನಾನು ಹೇಳುವುದಕ್ಕೆ ಬಯಸುತ್ತೇನೆ. ಇವತ್ತು ನಮ್ಮ ರಾಜ್ಯ GDP growth ನಲ್ಲಿ ಸ್ವಲ್ಪ ಹಿನ್ನಡೆ ಆಗುತ್ತಿದೆ. ಬೇರೆ ಬೇರೆ ರಾಜ್ಯಗಳು ಇಂಥ ಒಂದು ಪರಿಸ್ಥಿತಿಯಲ್ಲಿ ಕೂಡ ಅವರು ಉತ್ತಮವಾದಂಥ ಬೆಳವಣಿಗೆಯನ್ನು ಕಾಣುತ್ತಿದ್ದಾರೆ. ಕರ್ನಾಟಕದ ಒಂದು GDP growthಗೆ ಬೆಂಗಳೂರಿನ ನಗರ ಹೆಚ್ಚಿನ ಒಂದು ಕೊಡಿಗೆಯನ್ನು ಕೊಟ್ಟಿದೆ. 63 ಬಿಲಿಯನ್ ಡಾಲರ್ ನಮ್ಮ GDP growthಗೆ ಬೆಂಗಳೂರು ನಗರದಿಂದ contribute ಆಗುತ್ತಿದೆ. ಇವತ್ತು ಒಟ್ಟಾರೆ 55% ರಿಂದ 65% ನವರೆಗೆ GDP growthಗೆ ಬೆಂಗಳೂರು ನಗರದಿಂದ ಕೊಡುಗೆ ಬರುತ್ತಿದೆ. ಇವತ್ತು ಬೆಂಗಳೂರು ನಗರದ ಜನಸಂಖ್ಯೆ 1 ಕೋಟಿ ಮುಟ್ಟುತ್ತಿದ್ದೇವೆ. ಇವತ್ತು ಬೆಂಗಳೂರು ನಗರವನ್ನು multi cultural city ಎಂದು ಹೇಳುತ್ತೇವೆ. ಬೇರೆ ಬೇರೆ ರಾಜ್ಯಗಳಿಂದ ಬೆಂಗಳೂರು ನಗರಕ್ಕೆ ಜನರು ಬರುವುದನ್ನು ನಾವು ಕಾಣುತ್ತಿದ್ದೇವೆ. ಇವತ್ತು ವಿದೇಶದ map ನಲ್ಲಿ India ಎಂದರೆ ಬೆಂಗಳೂರು ನಗರ ಎನ್ನತಕ್ಕಂಥ ಒಂದು ಭಾವನೆ ಮೂಡಿಸತಕ್ಕಂಥದ್ದರಲ್ಲಿ ಬೆಂಗಳೂರಿನ ನಾಗರೀಕರು ಕೊಟ್ಟಿರತಕ್ಕಂಥ ಕೊಡುಗೆ ಇದೆ. ಇವತ್ತು 6 ಸೆಕ್ಟರ್‌ನಲ್ಲಿ ಬೆಂಗಳೂರು ನಗರದ ಅಭಿವೃದ್ಧಿ ಕುಂಠಿತ ಆಗತಕ್ಕಂಥದ್ದು ಜನರ ನಿರೀಕ್ಷೆಯನ್ನು ನಾವು ತಲುಪದೆ ಇರತಕ್ಕಂಥ ಪರಿಸ್ಥಿತಿಗೆ ನಮ್ಮನ್ನು ದೂಡಿಕೊಂಡಿದ್ದೇವೆ. ಇದರಲ್ಲಿ 6 issue ಗಳು ಏನಿವೆ, ಇವತ್ತು frequent power cuts, bad roads and traffic jams, shortage of drinking water, disposal of garbage, growing pollution, preservation of ecology, lakes, parks, lung space ಅನ್ನು ಯಾವ ರೀತಿಯಲ್ಲಿ ಇವತ್ತು ಆ ವಿಷಯದಲ್ಲಿ ಸರ್ಕಾರಗಳು ಏನು ಅಸಡ್ಡೆ ಮಾಡಿದ್ದಾರೆ. ಬಹುಶಃ M/s. Ferguson Consultants ಒಂದು ಸಂಸ್ಥೆಗೆ ಮಾನ್ಯ ಸಿದ್ದರಾಮಯ್ಯನವರು ಉಪ ಮುಖ್ಯಮಂತ್ರಿಗಳು ಇದ್ದಾಗ 2004-05ನೇ ಇಸ್ವಿಯಲ್ಲಿ ಆ ಒಂದು ಸಂಸ್ಥೆಗೆ ಬೆಂಗಳೂರು ನಗರಕ್ಕೆ ಆಗಬೇಕಾಗಿರತಕ್ಕಂಥ ಒಂದು infrastructure ಬಗ್ಗೆ ಒಂದು ಸವಿಸ್ತಾರವಾದಂಥ ವರದಿಯನ್ನು ಕೊಡತಕ್ಕಂಥ ಅವರಿಗೆ

ಒಂದು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೀರಿ, ಅವರಿಗೆ ಆ ಒಂದು ಕೆಲಸವನ್ನು ನಿರ್ವಹಿಸುವಂಥದ್ದಕ್ಕೆ ನೀವು ಏನೊಂದು direction ಕೊಟ್ಟಿದ್ದೀರಿ. 2004–05ನೇ ಇಸ್ವಿಗೆ ಬೆಂಗಳೂರು ನಗರದ ಒಂದು ಸಂಪೂರ್ಣ ಅಭಿವೃದ್ಧಿಗೆ 49,000 ಕೋಟಿ ರೂ.ಗಳ ಅವಶ್ಯಕತೆ ಇದೆ ಎನ್ನತಕ್ಕಂಥ ಆ Ferguson Consultants Committee ಯವರು ಏನೊಂದು ವರದಿಯನ್ನು ಕೊಟ್ಟಿದ್ದಾರೆ. 2004–05ನೇ ಇಸ್ವಿಗೆ 49,000 ಕೋಟಿ ರೂ.ಗಳನ್ನು ಇಲ್ಲಿ investment ಮಾಡಬೇಕಾಗಿತ್ತು. ಇವತ್ತು 2014ನೇ ಇಸ್ವಿಗೆ ಬಂದಿದ್ದೇವೆ. ಇವತ್ತು ಆ 49,000 ಕೋಟಿ ರೂ.ಗಳ raise ಎಷ್ಟಾಗಿರಬಹುದು. BBMP ಗೆ ಇಲ್ಲಿ ನಾವು ಲಘುವಾಗಿ ಮಾತನಾಡುತ್ತೇವೆ. ಅವರು ಆ report ನಲ್ಲಿ ಕೊಟ್ಟಿದ್ದಾರೆ. ಇವತ್ತು ಎಲ್ಲಾ ಕಾರ್ಯಕ್ರಮಗಳಿಗೆ BBMP ಹೊಣೆಯನ್ನು ಹೊರಬೇಕು ಎನ್ನತಕ್ಕಂಥ ಭಾವನೆಯನ್ನು ಯಾರು ಇಟ್ಟುಕೊಳ್ಳಬಾರದು. ಇವತ್ತು ಕರ್ನಾಟಕಕ್ಕೆ ಮತ್ತು ದೇಶಕ್ಕೆ ಹೆಚ್ಚಿನ ಒಂದು ತೆರಿಗೆ ಏನು ಕಟ್ಟುತ್ತಿದ್ದೇವೆ. ಇವತ್ತು ಕರ್ನಾಟಕದ GDP growth ಗೆ ಹೆಚ್ಚಿನ ಒಂದು contribution ಕೊಡತಕ್ಕಂಥ ಬೆಂಗಳೂರು ನಗರಕ್ಕೆ ಇವತ್ತು ಕೇವಲ BBMP ಯಿಂದ ನಾವು ಕೆಲಸವನ್ನು ನಿರೀಕ್ಷೆ ಮಾಡುವಂಥದ್ದು ಎಲ್ಲೋ ಒಂದು ಕಡೆ ಅದನ್ನು ಮಾಡಲು ಸಾಧ್ಯವಾಗದೇ ಇರತಕ್ಕಂಥ ಒಂದು ವಿಷಯವೆಂದು ಹೇಳುವುದಕ್ಕೆ ನಾನು ಬಯಸುತ್ತೇನೆ. ಇವತ್ತು BBMP ಎಂದರೆ ಎಲ್ಲರೂ ಒಂದು ರೀತಿಯ ಬಹಳ ಲಘುವಾಗಿ ಮಾತನಾಡತಕ್ಕಂಥದ್ದನ್ನು ನಾವು ಕಾಣುತ್ತಿದ್ದೇವೆ. ನಾನು ಆ ರೀತಿ ಲಘುವಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಇವತ್ತು ಸರ್ಕಾರ ಅದರ ಜವಾಬ್ದಾರಿಯನ್ನು ನಿರ್ವಹಿಸಬೇಕಾದರೆ ಬೆಂಗಳೂರು ನಗರ ಇವತ್ತು GDP growth ಗೆ ಒಂದು ಹೆಚ್ಚಿನ contribution ಕೊಟ್ಟಿದ್ದಾರೆ. ಇವತ್ತು ಹೆಚ್ಚಿನ ನೆರವನ್ನು ರಾಜ್ಯ ಸರ್ಕಾರ ಕೊಡಬೇಕಾಗಿರತಕ್ಕಂಥದ್ದು ತಮ್ಮ ಕರ್ತವ್ಯ ಎನ್ನತಕ್ಕಂಥದ್ದನ್ನು ಸರ್ಕಾರದ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. ಇವತ್ತು ಬೆಂಗಳೂರು ನಗರವನ್ನು ಅಭಿವೃದ್ಧಿಯ ವಿಷಯದಲ್ಲಿ ಅನಾಥವಾಗಿರತಕ್ಕಂಥ ವಾತಾವರಣವನ್ನು ಮತ್ತೇ ಮುಂದುವರೆಸತಕ್ಕಂಥದ್ದು ಸೂಕ್ತ ಅಲ್ಲ

ಎನ್ನುವುದನ್ನು ನಿಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರಲಿಕ್ಕೆ ಬಯಸುತ್ತಿದ್ದೇನೆ. ಇವತ್ತು ಬೆಂಗಳೂರು ಆದಾಯ ಸಂಗ್ರಹ ಮಾಡತಕ್ಕಂಥದ್ದಕ್ಕೆ ಒಂದು ರೀತಿಯ ಹಸು ಇದ್ದ ಹಾಗೆ. ಹಾಲು ತುಂಬಿಕೊಂಡಿರತಕ್ಕಂಥ ಒಂದು ಹಸು ಇದು. ಇವತ್ತು ಬೆಂಗಳೂರು ನಗರವನ್ನು ಹಾಲು ಎಂದು ಏನು ಕರೆಯುತ್ತಿದ್ದೇವೆ. ಇವತ್ತು ಅದಕ್ಕೆ ನಾವು ಸರಿಯಾದ ರೀತಿಯಲ್ಲಿ ಇವತ್ತು infrastructure ಅನ್ನು build up ಮಾಡತಕ್ಕಂಥದ್ದರಲ್ಲಿ ನಿಜಕ್ಕೂ ಪ್ರಾಮಾಣಿಕವಾಗಿ ನಾವು ಏನಾದರೂ ಕೆಲಸವನ್ನು ನಿರ್ವಹಿಸುತ್ತಿದ್ದೇವಾ, ಬೆಂಗಳೂರು ನಗರಕ್ಕೆ ನಾವು ಸರಿಯಾದ ರೀತಿಯಲ್ಲಿ ಮೇವು ಕೊಡುತ್ತಿದ್ದೇವಾ, ಇದನ್ನು ನಾವು ಚರ್ಚೆ ಮಾಡಬೇಕಾಗಿದೆ. ಇವತ್ತು ಬೆಂಗಳೂರು ನಗರಕ್ಕೆ ಬಜೆಟ್‌ನಲ್ಲಿ ಮಂಡನೆ ಮಾಡುವಾಗ ಏನು ಹೇಳಿಕೊಂಡಿದ್ದಾರೆ ಅದು ಎಲ್ಲಾ bundle of lies ಎಂದು ಹೇಳುವುದಕ್ಕೆ ಬಯಸುತ್ತೇನೆ. ಬೆಂಗಳೂರು ನಗರದ ಕಾರ್ಯಕ್ರಮದ ಬಗ್ಗೆ ಏನು ಹೇಳಿದ್ದಾರೆ ಇದೆಲ್ಲಾ bundle of lies.

ಶ್ರೀ ಡಿ.ಕೆ. ಶಿವಕುಮಾರ್:- ಹಾಗಾದರೆ ನಿಮ್ಮ ಲೆಕ್ಕದಲ್ಲಿ ಏನು ಕೆಲಸ ಆಗುವುದಿಲ್ಲವಾ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ತಾವು ಕುಳಿತುಕೊಳ್ಳಿ, ಬೆಂಗಳೂರು ನಗರಕ್ಕೆ...

ಶ್ರೀ ಡಿ.ಕೆ. ಶಿವಕುಮಾರ್:- ತಾವು ಬಜೆಟ್ ಬಗ್ಗೆ ಹೇಳುತ್ತಿದ್ದೀರಿ. ನೀವು study ಮಾಡುತ್ತಿದ್ದೀರಿ. ಇವತ್ತು ಸರ್ಕಾರಕ್ಕೆ ಒಳ್ಳೊಳ್ಳೆಯ ಸಲಹೆಗಳನ್ನು ಕೊಡುತ್ತಿದ್ದೀರಿ ಎಲ್ಲಾ it is fine. ಬಹಳ ಸಂತೋಷ, ಬಹಳ ವಿಚಾರಧಾರೆಗಳನ್ನು ತಿಳಿಸಿದ್ದೀರಿ ನಮಗೂ ಬೇಕಾದಷ್ಟು ಬೆಳಕನ್ನು ಚೆಲ್ಲುತ್ತಿದ್ದೀರಿ ಅದು ಎಲ್ಲಾ ಸರಿ. ಆದರೆ ಇಷ್ಟೆಲ್ಲಾ ಹೇಳಿ, ನೀವು ಒಬ್ಬರು ಮುಖ್ಯ ಮಂತ್ರಿಯಾಗಿದ್ದವರು, it is all bundle of lies ಎಂದು ಹೇಳಿದರೆ, ನೀವು ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ ನೀವು ಏನು ವಿಚಾರ ಚೆಲ್ಲಿದಿರಿ ಅದು ನಿಮ್ಮದು ಕೂಡ bundle of lies ಎಂದು ನಾವು ಅಭಿಪ್ರಾಯಕ್ಕೆ ಬಂದು

ಬಿಡುವುದಕ್ಕಾಗುತ್ತದೆಯೇ? ಅಲ್ಲಾ ನಾನು ಹೇಳಿದ್ದು. ಯಾವುದೋ ಒಂದು ನಮ್ಮ programme ಸರಿ ಇಲ್ಲವೆಂದು criticize ಮಾಡಲಿ. ಇದು ಸರಿ ಇಲ್ಲವೆಂದು ಹೇಳಲಿ. ನೀವು ಹೇಳಿದ್ದು ಎಲ್ಲಾ ಸುಳ್ಳಿನ ಕಂತೆ ಎಂದು ಹೇಳಿದರೆ ಏನಿದು. ಬೇರೆ ಯಾರಾದರೂ ಮಾತನಾಡಿದರೆ ಪರವಾಗಿಲ್ಲ. He is a responsible Chief Minister of State ಆಗಿದ್ದಂತಹವರು, how can he tell that it is a bundle of lies? It is a budget book. ಇದೇ ನಮ್ಮ ಸಿದ್ಧಾಂತ. ಇದರ ಮೇಲೆಯೇ ಇಡೀ ರಾಜ್ಯ ನಡೆಯುತ್ತಿದೆ. ಈ ಪುಸ್ತಕದ ಮೇಲೆ ಇಡೀ ನಮ್ಮ complete ವ್ಯವಸ್ಥೆ ನಡೆಯುತ್ತಿದೆ.

ಶ್ರೀ ವೈ.ಎಸ್.ವಿ. ದತ್ತಾ:- ಹಾಗಾದರೆ ಒಂದು ಕೆಲಸವನ್ನು ಮಾಡೋಣ. ಈಗ ನಿಮ್ಮ ಸಮಾಧಾನಕ್ಕೆ ಅದೆಲ್ಲಾ bundle of lies ಎಂದು ಇಟ್ಟುಕೊಳ್ಳೋಣ. ಈಗ bundle of facts ಸತ್ಯಗಳ ದಾಖಲೆ ಎಂದು ಇಟ್ಟುಕೊಳ್ಳೋಣ. Action Taken Report ಬಂದ ಮೇಲೆ ಅದನ್ನು ತೀರ್ಮಾನ ಮಾಡೋಣ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಮಾನ್ಯ ಅಧ್ಯಕ್ಷರೆ, ಅವರು ನೀವು ಏನು ಮಾಡಿದಿರಿ ಎಂದು ಹೇಳಿದರು. ನೀವು ಮುಖ್ಯಮಂತ್ರಿಯಾಗಿದ್ದಾಗ ನೀವು ಹೇಳಿದ್ದಿರಿ, ನೀವು bundle of lies ಹೇಳಿದ್ದೀರಾ ಎಂದು. ನಾನು ಅದಕ್ಕೂ ಬಂದು ಬಿಡುತ್ತೇನೆ. ಇಲ್ಲಿ ನಾನು bundle of lies ಎನ್ನುವ ಪದವನ್ನು ಬಳಸಬೇಕಾದರೆ, as a responsible Opposition Member ನಾನು ಆ ಪದವನ್ನು ಬಳಸಿದ್ದೇನೆ. ಸುಮ್ಮನೆ ಸರ್ಕಾರದ ದಾರಿ ತಪ್ಪಿಸಿ ಹೇಳುತ್ತಿಲ್ಲ. ನಾನು ಅದನ್ನೆ ಹೇಳುತ್ತಿದ್ದೇನೆ ತಾವು ಕುಳಿತುಕೊಳ್ಳಿ.

ಶ್ರೀ ಡಿ.ಕೆ. ಶಿವಕುಮಾರ್:- Responsible ಇರುವುದರಿಂದಲೇ ನಾನು ಹೇಳುತ್ತಿರುವುದು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ನೀವು ಸಮಾಧಾನವಾಗಿ ಕುಳಿತುಕೊಳ್ಳಿ, ನಿಮ್ಮ contribution ಏನು ಎಂದು ಕೇಳಿದಿರಲ್ಲಾ ಅದಕ್ಕೆ ಹೇಳುತ್ತೇನೆ. ನಿನ್ನೆ ಯಾವುದೋ ಟಿ.ವಿ.ಯಲ್ಲಿ ಹೇಳುತ್ತಿದ್ದರು. ಮಾಹಿತಿ ತಂತ್ರಜ್ಞಾನ ಸೆಕ್ಟರ್ ಬೆಳೆದು ಬಿಟ್ಟಿದ್ದು ಎಸ್.ಎಂ.ಕೃಷ್ಣ ರವರ ಕಾಲದಲ್ಲಿ ಎನ್ನುವುದನ್ನು ಒಬ್ಬರು college student ಹೇಳುತ್ತಿದ್ದಳು. ನಾವು ಜನತಾ ದಳದ ಕೊಡುಗೆ ಏನು ಎಂಬ records ಬಗ್ಗೆ ನಾವು ಪ್ರಚಾರ ಮಾಡಿಕೊಳ್ಳಲಿಲ್ಲ. 1995 ರಲ್ಲಿ ಇದೇ ಮಾನ್ಯ ಸಿದ್ದರಾಮಯ್ಯನವರು ಆರ್ಥಿಕ ಸಚಿವರಾಗಿದ್ದರು, ಮಾನ್ಯ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಾಗ, Singapur International Tech Park ಗೆ, IT industry ಗೆ ಸಿಂಗಪೂರದ ಪ್ರಧಾನ ಮಂತ್ರಿಗಳನ್ನು ಕರೆದು foundation ಹಾಕಿಸಿರುವುದು. ಇವತ್ತು ನೀವು two tier cities ಹೋಗಬೇಕೆಂದು ಹೇಳುತ್ತಿದ್ದೀರಿ. ಮಾಹಿತಿ ತಂತ್ರಜ್ಞಾನ ಹುಬ್ಬಳ್ಳಿಗೆ ಹೋಗಬೇಕು. ಇಲ್ಲಿಂದ ಮಂಗಳೂರಿಗೆ ಹೋಗಬೇಕು. ನಮ್ಮ ಆಸೆ ಬೆಂಗಳೂರಿಗೆ ಮಾತ್ರ ಸೀಮಿತವಾಗಬಾರದೆಂದು ಇದೆ. ಆದರೆ ಏತಕ್ಕೆ ಇವರು ಹೋಗುವುದಕ್ಕೆ ತಯಾರಾಗಿಲ್ಲ. ಅವತ್ತು STPL ಒಂದು ಕಾನೂನನ್ನು ತಂದಿದ್ದರು. ಇವತ್ತು ಬೆಂಗಳೂರು ನಗರದ ಕೋರಮಂಗಲ ಮತ್ತು ಸಣ್ಣ ಸಣ್ಣ ಮನೆಗಳಲ್ಲಿಯೂ ಒಂದು IT Industries ಗಳು ಪ್ರಾರಂಭವಾಗಿದ್ದವು. ಈಗ ದೊಡ್ಡ ದೊಡ್ಡ park ಗಳನ್ನು builders ಗಳು ಮಾಡಿದ್ದಾರೆ. SEZ ಗೆ ಅನುಕೂಲವನ್ನು ಮಾಡಿಕೊಟ್ಟಿದ್ದಾರೆ ಅದರಿಂದ ಇವತ್ತು ಬೆಂಗಳೂರು ನಗರಕ್ಕೆ ಎಲ್ಲಾ concentrate ಮಾಡಿದ್ದಾರೆ. ಇವತ್ತು SEZ ನ ಒಂದು ಯೋಜನೆ ಬೇರೆ ಬೇರೆ ಕಡೆಗೆ ವಿಸ್ತರಣೆ ಮಾಡಿ ಅವಕಾಶವನ್ನು ಕಲ್ಪಿಸಿ ಕೊಟ್ಟರೆ two tier cities ಹೋಗತಕ್ಕಂಥದ್ದಕ್ಕೆ ಅವಕಾಶಗಳು ಇವೆ. ನೀವು ಏನು ಮಾಡಿದಿರಿ ಎಂದು ಹೇಳುತ್ತಿದ್ದೀರಲ್ಲಾ, ಮಾನ್ಯ ಸಿದ್ಧರಾಮಯ್ಯನವರಿಗೆ ಆವತ್ತು ಇದ್ದ ಬಜೆಟ್ 3600 ಕೋಟಿ ರೂ.ಗಳು ಮಾತ್ರ, ಇವತ್ತು ಕರ್ನಾಟಕದ ಬಜೆಟ್ 1.36 ಲಕ್ಷ ಕೋಟಿ ರೂ.ಗಳು ಅಂದಿನ ಕರ್ನಾಟಕದ 3500 ಕೋಟಿ ರೂ.ಗಳ ಒಂದು ಬಜೆಟ್‌ನಲ್ಲಿ first ಬೆಂಗಳೂರು ನಗರದ flyover ಪ್ರಾರಂಭವಾಗಿರುವುದು.

ಸಿರ್ಸಿ flyover ಏಷ್ಯಾಯಾದಲ್ಲಿಯೇ ಅತ್ಯಂತ ದೊಡ್ಡ flyover ಎನ್ನತಕ್ಕಂಥದ್ದನ್ನು ಹೇಳಿದರು. ಅದು ಜನತಾದಳ ಸರ್ಕಾರದಲ್ಲಿ ಮಾಡಿದಂಥ ಕಾರ್ಯಕ್ರಮ. ನೀವು ಹೇಳಿರುವುದಕ್ಕೆ ಇದನ್ನು ನಾನು ಹೇಳುವುದಕ್ಕೆ ಬಯಸುತ್ತೇನೆ. ನನ್ನ ಕಾಲದಲ್ಲಿ ಏನು ಮಾಡಿದಿರಿ ಎಂದು ಕೇಳಿದರು. ಅಂದಿನ ಪ್ರಧಾನ ಮಂತ್ರಿಗಳನ್ನು ಬೆಂಗಳೂರಿಗೆ ಕರೆದುಕೊಂಡು ಬಂದು Metro Project ಗೆ ಚಾಲನೆ ಕೊಟ್ಟವರು ನಾವು, ಶಂಕುಸ್ಥಾಪನೆ ನೆರವೇರಿಸಿದ್ದು ನಮ್ಮ ಸಮ್ಮಿಶ್ರ ಸರ್ಕಾರದಲ್ಲಿ. ಹಲವಾರು ತಾಂತ್ರಿಕ ದೋಷಗಳನ್ನು ಸರಿಪಡಿಸಿ ನಮ್ಮ ಕಾಲದಲ್ಲಿ ಅದಕ್ಕೆ ಚಾಲನೆಯನ್ನು ಕೊಟ್ಟೆವು. ಮಾನ್ಯ ಯಡಿಯೂರಪ್ಪನವರು ಅವರ ಕಾಲದಲ್ಲಿ ದೊಡ್ಡ ದೊಡ್ಡ ಬೋರ್ಡ್‌ಗಳನ್ನು ಹಾಕಿಕೊಂಡಿದ್ದರು ಅವರು ಬರಲಿಲ್ಲ. Metro Project ಚಿಂತಕರು ಎಂದು ಬೋರ್ಡ್‌ನ್ನು ಬೆಂಗಳೂರು ನಗರದಲ್ಲಿ ಹಾಕಿಕೊಂಡಿದ್ದರು. ಪಾಪ ಅವರಿಂದ Metro Project ಅನ್ನು inauguration ಮಾಡುವುದಕ್ಕಾಗಲಿಲ್ಲ. ಮಾನ್ಯ ಸದಾನಂದಗೌಡರು ತರಾತುರಿಯಲ್ಲಿ ಅವತ್ತು inauguration ಮಾಡಿ ಬಿಟ್ಟರು. ನಾವು ಇಲ್ಲಿ contribution ಕೊಟ್ಟಿದ್ದೇವೆ ಇಲ್ಲವೆಂದು ಹೇಳುವುದಿಲ್ಲ. ಇಲ್ಲಿ ನೀವು ಯಾವ ತರಹ 1537 ಕೋಟಿ ರೂ.ಗಳ ಬಗ್ಗೆ ಹೇಳಿದ್ದೀರಲ್ಲಾ ನೀವು ನಿಜವಾಗಲೂ ಇಷ್ಟು ಹಣವನ್ನು ಅಲ್ಲಿಗೆ ಕೊಟ್ಟಿದ್ದೀರಾ ಎಂದು ನಾನು ಪ್ರಶ್ನೆ ಕೇಳುತ್ತಿರುವುದು. ಆ ವಿಷಯದ ಬಗ್ಗೆ ದಾರಿ ತಪ್ಪಿಸುವುದು ಸೂಕ್ತ ಅಲ್ಲವೆಂದು ನಾನು ಹೇಳುವುದು. ಇವತ್ತು BBMP ವಿಷಯದಲ್ಲಿ ನಾವು ಚರ್ಚೆ ಮಾಡುತ್ತೇವೆ. ಬಜೆಟ್ ಪುಸ್ತಕದಲ್ಲಿ ಹೇಳುತ್ತಾರೆ. ಹೋದ ವರ್ಷ ಹೇಳಿರುವುದನ್ನೇ ಈ ವರ್ಷವೂ ಘೋಷಣೆ ಮಾಡಿಕೊಂಡು ಹೋಗುತ್ತಾರೆ. ಸಜ್ಜನ್‌ರಾವ್ ಸರ್ಕಲ್‌ನಿಂದ ಹಡ್ಸನ್ ಸರ್ಕಲ್‌ವರೆಗೆ elevated road, parking policy ಇದನ್ನು 3–4 ವರ್ಷದಿಂದ ಈ parking policy ಬಗ್ಗೆ ಹೇಳಿಕೊಂಡೆ ಬರುತ್ತಿದ್ದೇವೆ. ಬಜೆಟ್‌ನಲ್ಲಿ ನಾವು ಏನು ಘೋಷಣೆ ಮಾಡುತ್ತಿದ್ದೇವೆ. ನೀವು ಬಜೆಟ್‌ನಲ್ಲಿ ಬೆಂಗಳೂರಿಗೆ 1527 ಕೋಟಿ ರೂ.ಗಳ ಅನುದಾನ. ಹಿಂದಿನ ವರ್ಷದಲ್ಲಿ ಬೆಂಗಳೂರಿಗೆ ಅನುದಾನ. 15%, 2009–10 ಕ್ಕೆ ಮತ್ತು 2010–11

ಕ್ಕೆ 15%, 2011-12ಕ್ಕೆ 9%, ಪ್ರಸಕ್ತ ಸಾಲಿನಲ್ಲಿ 12% ಎಂದು ಇದೆಲ್ಲವನ್ನು ಹೇಳಿಕೊಂಡು ಹೋಗಿದ್ದೀರಿ. ಬೆಂಗಳೂರು ನಗರದಲ್ಲಿ ಇವರು ಯಾವ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ, ನಾನು ಸದನದ ದಾರಿಯನ್ನು ತಪ್ಪಿಸುತ್ತಿದ್ದೇನೆ ಎನ್ನುವ ರೀತಿಯಲ್ಲಿ ಹೇಳುತ್ತಿದ್ದೀರಿ. 2004-05 ರಲ್ಲಿ Ferguson Consultant company ಯವರು 49,000 ಕೋಟಿ ರೂ.ಗಳು ಎಂದು ಹೇಳುತ್ತಾರೆ. ನನ್ನ ಕಾಲದಲ್ಲಿ ಹಲವಾರು ರಸ್ತೆಗಳ ಅಗಲೀಕರಣಕ್ಕೆ ತೀರ್ಮಾನವನ್ನು ಕೊಟ್ಟಿದ್ದೇನೆ. ಕೇಂದ್ರ ಸರ್ಕಾರದ ಮನವೊಲಿಸಿ Jn-NURM-scheme ನಿಂದ 24,000 ಕೋಟಿ ರೂ.ಗಳ ಹಣವನ್ನು ತರುವಂತಹ ವ್ಯವಸ್ಥೆ ಮಾಡಬೇಕೆಂದು ತೀರ್ಮಾನಕ್ಕೆ ಬಂದೆವು. ಆಗ ಮಾನ್ಯ ಜಯಪಾಲರೆಡ್ಡಿಯವರು ನಗರಾಭಿವೃದ್ಧಿ ಸಚಿವರಾಗಿದ್ದರು. ಹಲವಾರು ಬಾರಿ ಭೇಟಿ ಮಾಡಿದ್ದೇನೆ. Jn-NURM-scheme ನಲ್ಲಿ ಹಣ ತಂದಿರುವ ಬಗ್ಗೆ ನಾನು ಹೆಮ್ಮೆಪಡುತ್ತೇನೆ. ಅಧಿಕಾರದಲ್ಲಿದ್ದಿದ್ದು 20 ತಿಂಗಳು. ಇವತ್ತು ಏನಾಗಿದೆ ಎಂದರೆ, head of account ಅನ್ನು ತೆಗೆದುಕೊಳ್ಳುವುದಾದರೆ ಪ್ರತಿ ವರ್ಷ ಕಡಿಮೆಯಾಗುತ್ತಾ ಹೋಗುತ್ತಿದೆ. ಬೆಂಗಳೂರು ನಗರಕ್ಕೆ ರಾಜ್ಯ ಸರ್ಕಾರ ಬಜೆಟ್‌ನಲ್ಲಿ ಅಲೋಕೇಟ್ ಮಾಡುತ್ತಿರುವ ಹಣ ಯಾವ ರೀತಿ ಕಡಿತವಾಗುತ್ತಾ ಹೋಗುತ್ತಿದೆ ಎನ್ನುವುದನ್ನು ಸರ್ಕಾರದ ಗಮನಕ್ಕೆ ತರಲಿಕ್ಕೆ ಬಯಸುತ್ತೇನೆ. Urban Development Assistance to Muncipal Corporation, other expenses headನಲ್ಲಿ 2010-11 ರಲ್ಲಿ 602 ಕೋಟಿ ರೂ.ಗಳನ್ನು ಇವತ್ತು ಕೊಟ್ಟಿದ್ದೇವೆ. 2011-12 ರಲ್ಲಿ 8 1/4 ಕೋಟಿ ರೂ.ಗಳನ್ನು ಕೊಟ್ಟಿದ್ದೇವೆ. 2012-13ರಲ್ಲಿ blank, 2013-14ರಲ್ಲಿ blank, 2014-15 ರಲ್ಲಿ blank. Equity in BMRCL 2010-11 ರಲ್ಲಿ ನಾವು 476 ಕೋಟಿ ರೂ.ಗಳನ್ನು ಈ ಒಂದು ಹೆಡ್‌ನಿಂದ ಕೊಟ್ಟಿದ್ದೇವೆ. 2011-12 ರಲ್ಲಿ 133 ಕೋಟಿ ರೂ.ಗಳನ್ನು ಕೊಟ್ಟಿದ್ದೇವೆ. 2012-13, 2013-2014, 2014-2015 ರಲ್ಲಿ ಕೊಟ್ಟಿಲ್ಲ. Bangalore Water Supply ಗೆ 2010-11 ರಲ್ಲಿ 110 ಕೋಟಿ ರೂ.ಗಳನ್ನು ಕೊಟ್ಟಿದ್ದೇವೆ. In lieu of entry tax head ನಲ್ಲಿ 2010-11 ರಲ್ಲಿ 220 ಕೋಟಿ

ರೂ.ಗಳು, 2011-12 ರಲ್ಲಿ 240 ಕೋಟಿ ರೂ.ಗಳು 2012-13 ರಲ್ಲಿ 255 ಕೋಟಿ ರೂ.ಗಳು, 2013-14 ರಲ್ಲಿ 492 ಕೋಟಿ ರೂ.ಗಳು, 2014-15 ರಲ್ಲಿ 325 ಕೋಟಿ ರೂ.ಗಳು. Other devolutions Scheme ನಲ್ಲಿ 2010-11 ರಲ್ಲಿ 164 ಕೋಟಿ ರೂ.ಗಳು, 2011-12 ರಲ್ಲಿ 187 ಕೋಟಿ ರೂ.ಗಳು, 2012-13 ರಲ್ಲಿ 207 ಕೋಟಿ ರೂ.ಗಳು, 2013-14 ರಲ್ಲಿ Zero, 2014-15 ರಲ್ಲಿ 207 ಕೋಟಿ ರೂ.ಗಳು ಅದೇ ರೀತಿ ನಗರೋತ್ಥಾನ ಯೋಜನೆಯಲ್ಲಿ, ನಗರ ಉತ್ಥಾನ ಎನ್ನುವುದನ್ನು ತೆಗೆದುಹಾಕಿ ಬೇರೆ ಇಡಬೇಕಾಗಿತ್ತು. ನಗರೋತ್ಥಾನ ಯೋಜನೆ ಅಡಿಯಲ್ಲಿ 2010-11 ರಲ್ಲಿ ಇರಲಿಲ್ಲ. 2011-12 ರಲ್ಲಿ 250 ಕೋಟಿ ರೂ.ಗಳನ್ನು ಕೊಟ್ಟಿದ್ದಾರೆ, 2012-13 ರಲ್ಲಿ 500 ಕೋಟಿ ರೂ.ಗಳು, 2013-14 ರಲ್ಲಿ 900 ಕೋಟಿ ರೂ.ಗಳು, 2014-15 ರಲ್ಲಿ 837 ಕೋಟಿ ರೂ.ಗಳು. ನಗರೋತ್ಥಾನ ಯೋಜನೆ ಅಡಿಯಲ್ಲಿ 837 ಕೋಟಿ ರೂ.ಗಳನ್ನು ಏನು ಕೊಟ್ಟಿದ್ದೀರಿ ಇದೇ ನೀವು ಕೊಟ್ಟಿರುವಂಥದ್ದು. 1,576 ಕೋಟಿ ರೂ.ಗಳು ಎಂದು ಏನು ಹೇಳಿದ್ದೀರಿ ಆ ಅಮೌಂಟ್ ಹೋಗಿಲ್ಲ. 13th Finance Commission grants, 2010-11 ರಲ್ಲಿ 126 ಕೋಟಿ ರೂ.ಗಳು, 2011-12 ರಲ್ಲಿ 147 ಕೋಟಿ ರೂ.ಗಳು ಈ ರೀತಿ ಏನು ಹೋಗಿದೆ, ಈಗ 388 ಕೋಟಿ ರೂ.ಗಳು 13th Finance Commission ನಿಂದ grants ಕೊಟ್ಟಿರುವುದು ಆಗಿರುತ್ತದೆ. ಇದು ರಾಜ್ಯ ಸರ್ಕಾರದ ದುಡ್ಡು ಅಲ್ಲಾ. Roadsಗೆ 2010-11 ರಲ್ಲಿ 24 ಕೋಟಿ ರೂ.ಗಳು, 2011-12 ರಲ್ಲಿ 26 ಕೋಟಿ ರೂ.ಗಳು, 2012-13 ರಲ್ಲಿ 28 ಕೋಟಿ ರೂ.ಗಳು, 2013-14 ರಲ್ಲಿ 30 ಕೋಟಿ ರೂ.ಗಳು, 2014-15 ರಲ್ಲಿ 34 ಕೋಟಿ ರೂ.ಗಳು. Jn-NURM scheme ನಲ್ಲಿ 2010-11 ರಲ್ಲಿ 654 ಕೋಟಿ ರೂ.ಗಳು, 2011-12 ರಲ್ಲಿ 485 ಕೋಟಿ ರೂ.ಗಳು, 2012-13 ರಲ್ಲಿ 650 ಕೋಟಿ ರೂ.ಗಳು, 2014-15 ರಲ್ಲಿ 75 ಕೋಟಿ ರೂ.ಗಳು, Total allocation in Rs (Lakhs) at current prices, 2010-11 ರಲ್ಲಿ 2,377 ಕೋಟಿ ರೂ.ಗಳು, 2011-12 ರಲ್ಲಿ 1,479 ಕೋಟಿ ರೂ.ಗಳು, 2012-13 ರಲ್ಲಿ 1,827 ಕೋಟಿ ರೂ.ಗಳು, 2013-14 ರಲ್ಲಿ 1,588 ಕೋಟಿ

ರೂ.ಗಳು, 2014–15 ರಲ್ಲಿ 1,868 ಕೋಟಿ ರೂ.ಗಳು, ಇಲ್ಲಿ ಪ್ರತಿ ವರ್ಷ ಬೆಂಗಳೂರು ನಗರದ ಅಭಿವೃದ್ಧಿಗೆ ಹಣ ವಿನಿಯೋಗ ಮಾಡುವುದರಲ್ಲಿ decrease ಆಗುತ್ತಾ ಹೋಗುತ್ತಿದೆ. ಇಲ್ಲಿ ನಾನು ಸದನದ ದಾರಿ ತಪ್ಪಿಸಬೇಕೆಂದು ಈ ಮಾತನ್ನು ಹೇಳುತ್ತಿಲ್ಲ. The level of Government support to Bangalore development is decreasing year by year. In 2010-11 an amount of Rs 2,377 crores provided for developmental activity and in 2014-15 this government is providing near Rs 1,956 crores for Bangalore under all head of accounts. ಇಲ್ಲಿ ಯಾವ ರೀತಿ decrease ಆಗುತ್ತಿದೆ ಎನ್ನುವ graph ಅನ್ನೂ ಕೊಟ್ಟಿದ್ದಾರೆ. 1,527 ಕೋಟಿ ರೂ.ಗಳನ್ನು ಯಾವ ರೀತಿ ಇಡುತ್ತಿದ್ದಾರೆ? Devolution on account of abolition of entry tax. Devolution as per State Finance Commission recommendation, Assistance from Central Finance Commission ಇದನ್ನು ನಾವು ಯಾವುದನ್ನೂ account ಗೆ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಇದು most of the amount non-paln expenses ಗೆ salaries ಹೋಗುತ್ತದೆ. ಇವತ್ತು ಈ ಸರ್ಕಾರ ಈ ರೀತಿ ಬೆಂಗಳೂರು ನಗರದ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಯಾವ ರೀತಿಯಲ್ಲಿ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ, ಆಕ್ಟ್ರಾಯ್ ಎನ್ನುವ ಸಿಸ್ಟಂ ಹಿಂದೆ ಇತ್ತು, ಆನಂತರ abolish ಆಯಿತು. ಆದರೆ ಮಹಾರಾಷ್ಟ್ರದಲ್ಲಿ ಆಕ್ಟ್ರಾಯ್ ಅನ್ನು ಮುಂದುವರೆಸಿಕೊಂಡು ಹೋದರು. ಅವರು ಬಾಂಬೆ-ಥಾಣಾ ಮುನಿಸಿಪಾಲಿಟಿ ಏರಿಯಾದಲ್ಲಿ 2012–13 ರಲ್ಲಿ 6,500 ಕೋಟಿ ರೂ.ಗಳನ್ನು ಆವತ್ತಿನ ಮುನಿಸಿಪಾಲಿಟಿ ತೆರಿಗೆ ಸಂಗ್ರಹ ಮಾಡಿದ್ದಾರೆ. ಈಗ ಆಕ್ಟ್ರಾಯ್ ಎನ್ನುವುದನ್ನು ತೆಗೆದುಹಾಕಿ Local Body Tax ಎನ್ನುವ ವ್ಯವಸ್ಥೆಯಲ್ಲಿ VAT administration ಅನ್ನು implement ಮಾಡಿದ್ದಾರೆ. 7,000 ಕೋಟಿ ರೂ.ಗಳ ಆದಾಯ ಬಂದಿದೆ. ಇಲ್ಲಿ ಆಕ್ಟ್ರಾಯ್ ಪದ್ಧತಿ ಇಲ್ಲ. Entry tax ಅನ್ನು introduce ಮಾಡಿದರು. ಆದ್ದರಿಂದ ಇಲ್ಲಿ ಬರುವಂತಹ ಆದಾಯ ಸರ್ಕಾರಕ್ಕೆ ಬರುತ್ತದೆ. ಇನ್ನು ಬಿ.ಬಿ.ಎಂ.ಪಿ.ಯವರಿಗೆ ಕೆಲಸ ಮಾಡಿ ಎಂದರೆ ಅವರು ಎಲ್ಲಿಂದ ಆದಾಯ ತರಲು ಸಾಧ್ಯ? ಇವತ್ತು ನಾನೇನೂ

ಸದನಕ್ಕೆ ತಪ್ಪು ಮಾಹಿತಿ ಕೊಡುತ್ತಿಲ್ಲ. ಬಜೆಟ್‌ನಲ್ಲಿ ರಾಜ್ಯ ಸರ್ಕಾರದ ಅನುದಾನ 837 ಕೋಟಿ ರೂ.ಗಳು ಎಂದು ಹೇಳಿದ್ದಾರೆ. ಇವತ್ತು ರಾಜ್ಯ ಸರ್ಕಾರದ ಬೆಂಗಳೂರು ನಗರದ ಅಭಿವೃದ್ಧಿ ಬಗ್ಗೆ ಚರ್ಚೆ ಮಾಡಲು ಶ್ರೀ ಮೋಹನ್‌ದಾಸ್ ಪೈ, ಶ್ರೀಮತಿ ಕಿರಣ್‌ಮಜುಂದಾರ್, ಶ್ರೀ ರಾಜೀವ್ ಚಂದ್ರಶೇಖರ್‌ರವರನ್ನು ಮೀಟಿಂಗ್ ಕರೆಯುತ್ತೀರಿ. ಅವರೆಲ್ಲರ ಸಲಹೆಗಳನ್ನು ತೆಗೆದುಕೊಳ್ಳುತ್ತೀರಿ. ಅವರು ಪ್ರತಿಬಾರಿ ಸರ್ಕಾರದ ಮುಂದೆ ಹೇಳುವಂಥದ್ದು ಏನು? ಬೆಂಗಳೂರಿನ infrastructure ಬಗ್ಗೆ ಚರ್ಚೆ ಮಾಡುತ್ತಾರೆ. ನಾವು ಅಂತಿಮವಾಗಿ ಏನು ತೀರ್ಮಾನವನ್ನು ತೆಗೆದುಕೊಳ್ಳುತ್ತಿದ್ದೇವೆ? ಇದನ್ನು ಸರ್ಕಾರಕ್ಕೆ ಏಕೆ ಹೇಳುತ್ತಿದ್ದೇನೆಂದರೆ, ನಾನು criticize ಮಾಡಬೇಕೆಂದು ಹೇಳುತ್ತಿಲ್ಲ. ಯಾರೇ ತಪ್ಪು ಮಾಡಿದರೂ ತಪ್ಪೇ. ಇವತ್ತು ಬೆಂಗಳೂರು ನಗರಕ್ಕೆ ನಾವು ಸರಿಯಾದ ಸೌಕರ್ಯವನ್ನು ಒದಗಿಸದೇ ಹೋದರೆ, ಎಲ್ಲಿಂದ ಇವತ್ತು ನಾವು revenue collection ಮಾಡುತ್ತಿದ್ದೇವೆ, ಅದಕ್ಕೆ ಪೂರಕವಾಗಿ ಕೆಲಸ ನಿರ್ವಹಿಸುತ್ತಿದ್ದೇವೆ.

ಶ್ರೀ ಡಿ.ಕೆ. ಶಿವಕುಮಾರ್:- ಮಾನ್ಯ ಕುಮಾರಸ್ವಾಮಿಯವರೆ, ಈಗ ನಾವು ಬಾಂಬೆ ಸಿಸ್ಟಂ ಅನ್ನು ಮಾಡೋಣವೇ ಅಥವಾ ಈಗ ಇಲ್ಲಿರುವ ಸಿಸ್ಟಂ ಅನ್ನು ಮಾಡೋಣವೇ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಮುಂಬಯಿಯಲ್ಲಿ 7,000 ಕೋಟಿ ರೂ.ಗಳ ತೆರಿಗೆಯನ್ನು ಮುನಿಸಿಪಾಲಿಟಿಯವರು ಯಾವ ರೀತಿ ಸಂಗ್ರಹ ಮಾಡುತ್ತಿದ್ದಾರೆ ಎನ್ನುವ ರಿಪೋರ್ಟ್‌ಅನ್ನು ತರಿಸಿ.

ಶ್ರೀ ದಿನೇಶ್‌ಗುಂಡೂರಾವ್:- ಮುಂಬಯಿಲ್ಲಿ ಆಕ್ಟ್ರಾಯ್ ಸಿಸ್ಟಂ ಇದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಮುಂಬಯಿಯಲ್ಲಿ ಆಕ್ಟ್ರಾಯ್ ಸಿಸ್ಟಂ ಇದೆ. ಆಕ್ಟ್ರಾಯ್ ಸಿಸ್ಟಂ ಅನ್ನು ಇಲ್ಲಿ ರದ್ದು ಮಾಡಿದ್ದರಿಂದ ಇವತ್ತು ಬೆಂಗಳೂರು ನಗರ ಒಳಗೊಂಡಂತೆ ರಾಜ್ಯದ ಎಲ್ಲಾ ಪಟ್ಟಣ ಪಂಚಾಯಿತಿಗಳು

ನಗರಗಳಿಗೆ ಸೇರಿದಂತಾಯಿತಿ. ಸರ್ಕಾರ ಅನುದಾನ ಕೊಡಬೇಕು ಕೊಡುತ್ತಿದ್ದೀರಿ. ಆಕ್ಟ್ರಾಯ್ ರದ್ದು ಮಾಡಿರುವುದರಿಂದ ಬಿ.ಬಿ.ಎಂ.ಪಿ ಯಲ್ಲಿ ಬರುವಂತಹ revenue collection ಏನಿದೆ ಅದನ್ನು ಅವರು ತೆಗೆದುಕೊಳ್ಳುತ್ತಿಲ್ಲ. ಆದ್ದರಿಂದ ಅಲ್ಲಿ ಆಕ್ಟ್ರಾಯ್ ಸಿಸ್ಟಂ ಏನು ಇಟ್ಟಿದ್ದಾರೆ, ಅದನ್ನು ಕಳೆದ ವರ್ಷ Local Body Tax ಎಂದು ಬದಲಾವಣೆ ಮಾಡಿದ್ದಾರೆ. ಇವತ್ತು ಯಾವ ರೀತಿ ಆ ಮಟ್ಟದಲ್ಲಿ ಅವರು ತೆರಿಗೆ ಸಂಗ್ರಹ ಮಾಡಿದ್ದಾರೆಂದು, ಮುಂಬಯಿ ನಗರಾಭಿವೃದ್ಧಿ ಕೆಲಸವನ್ನು ಅವರು ಯಾವ ರೀತಿ ನಿರ್ವಹಿಸುತ್ತಿದ್ದಾರೆ ಎಂದು ಯಾರನ್ನಾದರೂ ಕಳುಹಿಸಿ ಅಲ್ಲಿಂದ ವರದಿಯನ್ನು ತರಿಸಿಕೊಳ್ಳಿ. ಬಿ.ಬಿ.ಎಂ.ಪಿ ಯವರು ಏನೂ ಕೆಲಸ ಮಾಡುವುದಿಲ್ಲ ಎಲ್ಲಾ ಸರ್ಕಾರದ ಮೇಲೆ ಹೊರೆ ಹೊರೆಸಿದ್ದಾರೆ, ಹಿಂದೆ 2,000 ಕೋಟಿ ರೂ.ಗಳು ಅಭಿವೃದ್ಧಿ ಕೆಲಸ ಮಾಡಿ ಪೇಮೆಂಟ್ ಕೊಡಲಿಲ್ಲ ಎಂದು ನಾವು ಚರ್ಚೆ ಮಾಡುತ್ತಿರುತ್ತವೆ. ಇದಕ್ಕೆ ಕಾರಣವೇನು ಎನ್ನುವುದನ್ನು ಹುಡುಕಬೇಕಾಗುತ್ತದೆ. Government of India ದವರು amount release ಮಾಡಿರುವುದು ಇದೆ. 13th Finance Commission 166.39 ಕೋಟಿ ರೂ.ಗಳನ್ನು allocate ಮಾಡಿ award ಮಾಡಿ release ಮಾಡಿದ್ದಾರೆ. ಆದರೆ ಇಲ್ಲಿಯವರೆಗೂ ಬಿಬಿಎಂಪಿಯವರಿಗೆ ಬಂದಿರುವುದು 50 ಕೋಟಿ ರೂ.ಗಳು ಅಷ್ಟೆ ಎಂದು ಅವರ ಬಜೆಟ್ ಪುಸ್ತಕದಲ್ಲಿ ತೋರಿಸಿದ್ದಾರೆ. 166 ಕೋಟಿಯಲ್ಲಿ ಕೇವಲ 50 ಕೋಟಿ ಕೊಟ್ಟಿರತಕ್ಕಂಥದ್ದು. Rs 492.33 Crores was to be provided to BBMP as per the award of Finance Commission. What was released was only Rs 350 crores. BBMP Budget 2014–15ರಲ್ಲಿ ಕೊಟ್ಟಿದ್ದಾರೆ. even in 2012-13 against total budget allocation of Rs 462 crores what was released was only Rs 387 crores. ಬಜೆಟ್‌ನಲ್ಲಿ ತೋರಿಸಿ ಏನು ಹೇಳುತ್ತೀರಿ, ಬಜೆಟ್‌ನಲ್ಲಿ ಬಂದಿದ್ದೇ ಅದನ್ನು ನಾವು ಕಾರ್ಯರೂಪಕ್ಕೆ ತರುತ್ತೇವೆ ಎಂದು ಅದರಲ್ಲೂ ಇವತ್ತು ಅನುದಾನಗಳನ್ನು ಕಟ್ ಮಾಡಿಕೊಂಡಿದ್ದೀರಿ. ಬೆಂಗಳೂರು ನಗರಕ್ಕೆ ನಿಜಕ್ಕೂ ನಾವು ಅಭಿವೃದ್ಧಿಗೆ ಪೂರಕವಾದ ರೀತಿಯಲ್ಲಿ

ಸರ್ಕಾರಗಳು ಗಮನ ಕೊಡಬೇಕಾಗಿದೆ. ನೀವೇ Ferguson Consultant Companyಯಿಂದ report ತೆಗೆದುಕೊಂಡಿದ್ದೀರಿ. 2004-05ರಲ್ಲಿ report ಕೊಟ್ಟಿದ್ದಾರೆ. ಅವತ್ತು ಇದ್ದ 49 ಸಾವಿರ ಕೋ.ರೂ. ಬೆಂಗಳೂರು ನಗರದ ಅಭಿವೃದ್ಧಿಗೆ investment ಮಾಡಬೇಕೆಂದು ಹೇಳಿದ್ದಾರೆ. ಇವತ್ತು ನಾವು 2014-15ಕ್ಕೆ ಬಂದಿದ್ದೇವೆ. ಈಗ ಹಣದ ಪ್ರಮಾಣ ಎಷ್ಟಾಗಿರಬಹುದು? ಹಾಗಾದರೆ ನಾವು ಇಲ್ಲಿಗೆ ಏನು ಕೊಡುತ್ತಿದ್ದೇವೆ? BBMP ಯಿಂದ ಇಲ್ಲಿ ಇವರು ಎಲ್ಲಾ ಕೆಲಸಗಳನ್ನು ಮಾಡಲಿಕ್ಕೆ ಸಾಧ್ಯವೇ? ಈ ರೀತಿಯ ನಮ್ಮ ಧೋರಣೆಗಳೇನಿವೆ ಇದನ್ನು ಯಾವ ರೀತಿಯಲ್ಲಿ ಬದಲಾವಣೆ ಮಾಡಿಕೊಳ್ಳಬೇಕೆನ್ನುವುದಕ್ಕೆ ಸರ್ಕಾರ ತೀರ್ಮಾನ ಮಾಡಿಕೊಳ್ಳಬೇಕು.

ವಸತಿ ಸೌಕರ್ಯದ ಬಗ್ಗೆ ಹೇಳಿದ್ದೀರಿ. 2.5 ಲಕ್ಷ ಮನೆ ಈಗಾಗಲೇ complete ಆಗಿದೆ ಎಂದು ಹೇಳಿದ್ದಾರೆ. ಕಳೆದ ಬಜೆಟ್‌ನಲ್ಲಿ ವರ್ಷಕ್ಕೆ 3 ಲಕ್ಷ ಮನೆ ಕಟ್ಟುತ್ತೇವೆಂದು ಹೇಳಿದಿರಿ. ಈಗ ನಿಮ್ಮ ಬಜೆಟ್‌ನಲ್ಲಿ ಹೇಳಿಕೊಂಡಿದ್ದೀರಿ. ವಸತಿ ಸೌಕರ್ಯದಲ್ಲಿ ವಸತಿ ಕ್ಷೇತ್ರದಲ್ಲಿನ ಸಾಧನೆ-ರಾಜೀವ್‌ಗಾಂಧಿ ಗ್ರಾಮೀಣ ವಸತಿ ನಿಗಮದಿಂದ ಜನವರಿ ಅಂತ್ಯದವರೆಗೆ 8,833 ನಿವೇಶನಗಳ ಹಂಚಿಕೆ 2.5 ಲಕ್ಷ ಮನೆಗಳ ನಿರ್ಮಾಣ ಪೂರ್ಣ. ಇದು 2013-14ನೇ ಸಾಲಿನಲ್ಲಿ ಆಗಿರುವುದು. ಈ ಸರ್ಕಾರ ಇಲ್ಲಿ ಒಂದೊಂದು ಪಂಚಾಯಿತಿಗೆ 20-20 ಮನೆ ಕೊಟ್ಟಿತು. ಮೊದಲನೇ instalment ಏನಾದರೂ clear ಆಗಿದೆಯೇ ಎಂದು ಸದಸ್ಯರುಗಳು ಹೇಳಬೇಕು. ಒಂದು ಲಕ್ಷ ಮನೆ ಕಟ್ಟಲಿಕ್ಕೆ 20-20 ಮನೆಯನ್ನು ಒಂದೊಂದು ಗ್ರಾಮ ಪಂಚಾಯಿತಿಗೆ ಕೊಟ್ಟಿದ್ದಾರೆ, ಮೊದಲನೇ instalment ಆಗಿಲ್ಲ. ಹಿಂದೆ ಬಿಜೆಪಿ ಸರ್ಕಾರದಲ್ಲಿ ನಮ್ಮ ವಸತಿ ಸಚಿವರೇ ಹೇಳಿಕೆ ಕೊಟ್ಟಿದ್ದಾರೆ. ಕಳೆದ ಕಲಾಪದಲ್ಲಿ ಸರ್ಕಾರವೇ ಕೊಟ್ಟಿರುವ ಮಾಹಿತಿ. ಸುಮಾರು 12 ಲಕ್ಷ ಮನೆಗಳನ್ನು ಕಟ್ಟುವುದಕ್ಕೆ ಬಿಜೆಪಿ ಸರ್ಕಾರದಲ್ಲಿ ಘೋಷಣೆ ಮಾಡಿದರು. ಮಾನ್ಯ ಅಂಬರೀಷ್‌ರವರೇ ದಿ:17.7.2013ರಲ್ಲಿ ಉತ್ತರ ಕೊಟ್ಟಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ವಸತಿಹೀನರು 12 ಲಕ್ಷದ 26

ಸಾವಿರ, ನಿವೇಶನರಹಿತರು 10 ಲಕ್ಷದ 42 ಸಾವಿರ, ಗುಡಿಸಲುವಾಸಿಗಳು 10 ಲಕ್ಷ something ಇದೆ. 2010–11ರಿಂದ 13 ಲಕ್ಷದ 17 ಸಾವಿರದ 817 ಮನೆಗಳು ಮಂಜೂರು. ಸೋಮಣ್ಣನವರು Housing Minister ಆಗಿ ಎಲ್ಲಾ ತಾಲ್ಲೂಕುಗಳದ್ದೂ ಹೇಳಿಬಿಟ್ಟರು. ನಿಮಗೆ 5 ಸಾವಿರ ತೆಗೆದುಕೊಳ್ಳಿ, ನಿಮಗೆ 10 ಸಾವಿರ ತೆಗೆದುಕೊಳ್ಳಿ ಎಂದು ಹೇಳಿದರು. ಏನೋ ಮನೆ ಬಂತು, ಹಣ ಬಂತು ಎಂದು ಎಲ್ಲರೂ ಮನೆ ಕಟ್ಟಲಿಕ್ಕೆ ಹೋಗಿ ಇವತ್ತೆಲ್ಲ ಬೀದಿಯಲ್ಲಿ ನಿಂತಿದ್ದಾರೆ. ಹಳೆಯದಕ್ಕೆ ಯಾವುದಕ್ಕೂ ಸರಿಯಾದ ರೀತಿಯಲ್ಲಿ ಹಣ ಬಿಡುಗಡೆಯಾಗಿಲ್ಲ. 2.5 ಲಕ್ಷ ಈಗಾಗಲೇ ಇಲ್ಲಿ ಮನೆ ನಿರ್ಮಾಣವಾಗಿ ಹೋಗಿದೆ ಎಂದು ಹೇಳುತ್ತೀರಿ. ನಿಮ್ಮ action taken reportನಲ್ಲಿ ಏನು ಹೇಳುತ್ತೀರಿ? ಆದರೆ, ನಿಮ್ಮ action taken report ನಲ್ಲಿ 2.5 ಲಕ್ಷ ಮನೆ ನಿರ್ಮಾಣವಾಗಿರುವುದು ಎಲ್ಲೂ ಇಲ್ಲ. ಇಲ್ಲಿ ಆ ಮಾಹಿತಿಯೇ ಇಲ್ಲ. ಇಲ್ಲಿ ಏನು ಹೇಳುತ್ತಾರೆಂದರೆ, ತೆಗೆದುಕೊಂಡಿರುವ ಕ್ರಮ– 3 ಲಕ್ಷ ಮನೆ ಕಟ್ಟುವಂಥದ್ದು ಭಾಷಣದಲ್ಲಿ ಹೇಳಿದ್ದೀರಿ. ಇದು ಮುಂದುವರೆದ ಯೋಜನೆಯಾಗಿದೆ. ಪ್ರಸಕ್ತ ಸಾಲಿನಲ್ಲಿ ಬಸವ ವಸತಿ ಯೋಜನೆಯಡಿ 1 ಲಕ್ಷದ 12 ಸಾವಿರ 510 ಮನೆಗಳು, ವಾಜಪೇಯಿ ನಗರ ವಸತಿ ಯೋಜನೆಯಡಿ 20 ಸಾವಿರ ಮನೆಗಳು, ಇಂದಿರಾ ಆವಾಸ್ ಯೋಜನೆಯಡಿ 1 ಲಕ್ಷದ 6 ಸಾವಿರದ 198 ಮನೆಗಳು ನಿರ್ಮಾಣದ ಗುರಿಯನ್ನು ಹೊಂದಲಾಗಿದೆ. ಪ್ರಕ್ರಿಯೆ ಚಾಲನೆಯಲ್ಲಿದ್ದು, ರಾಜೀವಗಾಂಧಿ ಗ್ರಾಮೀಣ ವಸತಿ ನಿಗಮವು ಈಗಾಗಲೇ ಎಲ್ಲಾ ಅನುಷ್ಠಾನಾಧಿಕಾರಿಗಳಿಗೆ ಫಲಾನುಭವಿಗಳ ಆಯ್ಕೆಗೆ ಸೂಕ್ತ ನಿರ್ದೇಶನ ನೀಡಿದೆ. ಇಲ್ಲಿ ಹೇಳಿದ್ದಾರೆ. ಎಲ್ಲೂ action taken report ನಲ್ಲಿ ಎರಡೂವರೆ ಲಕ್ಷ ಮನೆ ಕಟ್ಟಿರತಕ್ಕಂಥದ್ದು ಇಲ್ಲಿ ಮಾಹಿತಿ ಇಲ್ಲ. ಅದೇ ರೀತಿಯಲ್ಲಿ ಇಲ್ಲಿ ಇನ್ನೊಂದು ಹೇಳಿದ್ದಾರೆ. ಸಮಗ್ರ ವಸತಿ ಮತ್ತು ಕೊಳಚೆ ಪ್ರದೇಶ ಅಭಿವೃದ್ಧಿ (IHSDP) ಯೋಜನೆಯಡಿ ರಾಜ್ಯದ 32 ನಗರ/ಪಟ್ಟಣಗಳಲ್ಲಿ ಇರುವ 135 ಕೊಳಚೆ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯಗಳೊಂದಿಗೆ 411 ಕೋಟಿ ರೂ.ಗಳ ವೆಚ್ಚದಲ್ಲಿ 17,237 ಮನೆಗಳ

ನಿರ್ಮಾಣ ಕಾರ್ಯ ಪ್ರಗತಿಯಲ್ಲಿ. ಜನವರಿ ಅಂತ್ಯಕ್ಕೆ 16,494 ಮನೆಗಳು ಪೂರ್ಣ. 348 ಕೋಟಿ ರೂ.ಗಳ ವೆಚ್ಚ. ಆದರೆ, action taken report ನಲ್ಲಿ ಏನು ಹೇಳುತ್ತಾರೆಂದರೆ, IHSDP ಅಡಿಯಲ್ಲಿ ಮೂಲ ಸೌಕರ್ಯಗಳನ್ನೊಳಗೊಂಡ 500 ಮನೆಗಳನ್ನು ನಿರ್ಮಿಸಲು ಪ್ರಸ್ತಾಪಿಸಲಾಗಿದೆ. ರಾಜೀವಗಾಂಧಿ ವಸತಿ ಯೋಜನೆಯಡಿಯಲ್ಲಿ 2013–14ನೇ ಸಾಲಿಗೆ 5549 ಮನೆಗಳ ಗುರಿಯನ್ನು ಹೊಂದಲಾಗಿದೆ. ಇಲ್ಲಿ ತೆಗೆದುಕೊಂಡಿರುವ ಕ್ರಮ: IHSDP ಯೋಜನೆಯಡಿ 1351 ಮನೆಗಳನ್ನು ಹಾಗೂ ರಾಜೀವ್ ಆವಾಸ್ ಯೋಜನೆಯಡಿ 124 ಕೊಳಚೆ ಪ್ರದೇಶಗಳಲ್ಲಿ ಮನೆಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗಿದೆ. ಇಲ್ಲಿ ಹೇಳಿದ್ದೀರಿ, 2013–14ರಲ್ಲಿ 16494 ಮನೆಗಳನ್ನು ಪೂರ್ಣ ಮಾಡಿದ್ದೇವೆ, achieve ಮಾಡಿದ್ದೇವೆಂದು ಹೇಳುತ್ತಿದ್ದೀರಿ. 348 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿದ್ದೇವೆಂದು ಹೇಳಿದ್ದೀರಿ. ಇನ್ನೊಂದು –" ನಗರ ಬಡಜನರ ಮೂಲಭೂತ ಸೌಕರ್ಯ (BSUP)ನಲ್ಲಿ ಯೋಜನೆಯಡಿ 125 ಕೊಳಚೆ ಪ್ರದೇಶಗಳಲ್ಲಿ ಅಂದರೆ ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಮೂಲಭೂತ ಸೌಲಭ್ಯಗಳೊಂದಿಗೆ 728 ಕೋಟಿ ರೂ.ಗಳ ವೆಚ್ಚದಲ್ಲಿ 24,508 ಮನೆಗಳ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿ. ಜನವರಿ ಅಂತ್ಯಕ್ಕೆ 20,396 ಮನೆಗಳು ಪೂರ್ಣ. 546.95 ಕೋಟಿ ರೂ,ಗಳ ವೆಚ್ಚ" ಎಂದು ಹೇಳಿದ್ದೀರಿ. ಇದರ Action Taken Report ನಲ್ಲಿ ಏನೂ ಇಲ್ಲ. ಹಾಗೆಯೇ "ಈ ಆಶ್ರಯ ಯೋಜನೆಯಡಿ 10.84 ಲಕ್ಷ ಫಲಾನುಭವಿಗಳಿಗೆ 1498 ಕೋಟಿ ರೂಪಾಯಿಗಳ ಸಾಲವನ್ನು ನೀಡಿದ್ದು, ನನ್ನ ಮನೆ ನನ್ನ ಸ್ವತ್ತು ಯೋಜನೆ ಜಾರಿಯಾದಮೇಲೆ ಈವರೆಗೆ 39 ಕೋಟಿ ರೂಪಾಯಿಗಳ ಸಾಲ ವಸೂಲಾತಿ ಆಗಿದೆ. ಇನ್ನೂ 1458 ಕೋಟಿ ರೂಪಾಯಿಗಳ ಅಸಲು 1030 ಕೋಟಿ ರೂ.ಬಡ್ಡಿ ಹಾಕಿ ಇದೆ. ಸದರಿ ಸಾಲ ಮತ್ತು ಬಡ್ಡಿಯನ್ನು ಮನ್ನಾ ಮಾಡಲು ಉದ್ದೇಶಿಸಿದೆ. ಇದರಿಂದ 10.84 ಲಕ್ಷ ಫಲಾನುಭವಿಗಳಿಗೆ ಅನುಕೂಲವಾಗಲಿದೆ". ಎಂದು ಹೇಳಿದ್ದಾರೆ. ಇದು book adjustment.

ಶ್ರೀ ಮಹದೇವ ಪ್ರಸಾದ್‌ರವರು ಸಹಕಾರಿ ಬ್ಯಾಂಕ್‌ನದೆಲ್ಲವನ್ನು ಹೇಳುತ್ತಿದ್ದರು. ಸಾಲ ಮನ್ನಾ ಎಂದು ಪತ್ರಿಕೆಯಲ್ಲಿ ಬರೆದಿದ್ದರು. 248 ಕೋಟಿ ರೂ. ಸಾಲ ಮನ್ನಾ ಎಂದು ಮಾನ್ಯ ಮುಖ್ಯಮಂತ್ರಿಯವರು ಬೆಳಗಾಂನಲ್ಲಿ ಭಾಷಣ ಮಾಡಿದ್ದಾರೆ, ಅದು front page ನಲ್ಲಿ ಬಂದಿದೆ. ಇದು ಈ ಸರ್ಕಾರದಲ್ಲಿ ಸಾಲ ಮನ್ನಾ ಮಾಡುತ್ತಿರುವುದರಲ್ಲಿ ಇದನ್ನು ಯಾರೂ ಕಟ್ಟಲಿಕ್ಕೆ ಆಗುವುದಿಲ್ಲ, ಕಟ್ಟಿಲ್ಲ. ಇದು ಹಿಂದಿನಿಂದ ಏನು carry over ಆಗಿದೆ book adjustment ಅಷ್ಟೆ.

ಅಧ್ಯಕ್ಷರು:- ಸಾಲ ಇತ್ತು ರೀ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಸಾಲ ಯಾವುದು? ಅಧ್ಯಕ್ಷರೆ.

ಅಧ್ಯಕ್ಷರು:- ಆಶ್ರಯ ಮನೆಗಳಿಗೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಆಶ್ರಯ ಮನೆಗಳಿಗೆ ಸಾಲ ರೂಪದಲ್ಲಿ ಕೊಟ್ಟಿದ್ದೇವೆ. ಸರ್ಕಾರಗಳು ಕೊಟ್ಟಿವೆ. ಆದರೆ, ಯಾರೂ ಈ ಸಾಲ ಇದು ಸಾಲ ಎಂದು ಜನರು ತಿಳಿದುಕೊಂಡಿಲ್ಲ. ಯಾರೂ ಹಣ ಕಟ್ಟಿಲ್ಲ.

ಅಧ್ಯಕ್ಷರು:- ಅದು ಹೇಗೆ ಆಗುತ್ತದೆ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಒಂದುನಿಮಿಷ ಅಧ್ಯಕ್ಷರೆ, ಈಗ ಸರ್ಕಾರವೇ ಹೇಳಿದೆ.

ಅಧ್ಯಕ್ಷರು:- ನಾವೆಲ್ಲ ಏನು? ಬುದ್ಧಿ ಇಲ್ಲವೇ?

(ಗೊಂದಲ)

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಹಣ ಎಲ್ಲಿ ಇಟ್ಟಿದ್ದೀರಿ?

ಶ್ರೀ ಬಸವರಾಜ ರಾಯರೆಡ್ಡಿ:– ಅದು book adjustment ಆಗುವುದಿಲ್ಲ. ದಯವಿಟ್ಟು ನೋಡಿ.

ಶ್ರೀ ಕುಮಾರಸ್ವಾಮಿ:– ಹಾಗಾದರೆ ಹಣ ಎಲ್ಲಿ ಇಟ್ಟಿದ್ದೀರಿ? 2480 ಕೋಟಿ ರೂಪಾಯಿಗಳನ್ನು ಎಲ್ಲಿ ಇಟ್ಟಿದ್ದೀರಿ?

ಶ್ರೀ ಬಸವರಾಜ ರಾಯರೆಡ್ಡಿ:– If you are interested Clear ಮಾಡುತ್ತೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಹೇಳಿ.

ಅಧ್ಯಕ್ಷರು:– ನಿನ್ನೆ ಶಿವಮೊಗ್ಗದಿಂದ phone ಮಾಡಿದ್ದರು, ಸರ್ ವಜಾ ಆಯಿತು, ಬಹಳ ಖುಷಿ ಆಯಿತು, ತುಂಬಾ ಸಂತೋಷ ಎಂದು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:– ಹೂ ಮುಡಿಸುತ್ತಿರುವುದು ಅದೇ ಅಧ್ಯಕ್ಷರೆ.

ಶ್ರೀ ಬಸವರಾಜ ರಾಯರೆಡ್ಡಿ:– ಬಡವರಿಗೆ ಏನು ಮನೆ, ನಿವೇಶನ ಕೊಡುತ್ತಾರೆ, ಆಶ್ರಯ ಯೋಜನೆ ಇರಬಹುದು, ಬಸವ ವಸತಿ ಇರಬಹುದು, ಹೀಗೆ ಬೇರೆ ಬೇರೆ ಯೋಜನೆಗಳಲ್ಲಿ ಏನಿದೆ, ಎಲ್ಲಾ ಮನೆಗಳಿಗೂ ಕೂಡ ಸಾಲವನ್ನು ರಾಜ್ಯ ಸರ್ಕಾರ ತೆಗೆದುಕೊಂಡಿರುತ್ತದೆ. HUDCO ದಿಂದ ತೆಗೆದುಕೊಂಡಿರಬಹುದು, private finance ನಿಂದ ತೆಗೆದುಕೊಂಡಿರಬಹುದು, ಎಲ್ಲಿಂದಲೋ ತೆಗೆದುಕೊಂಡಿರಬಹುದು, ಇಲ್ಲಿ book adjustment ಮಾಡುವ ಪ್ರಶ್ನೆ ಅಲ್ಲ. ರಾಜ್ಯ ಸರ್ಕಾರ ಆ ಹಣಕಾಸು ಸಂಸ್ಥೆಗಳಿಗೆ ವಾಪಸ್ಸು ಕೊಡಬೇಕಾಗುತ್ತದೆ. ಹೀಗಾಗಿ ನಿವೇಶನಗಳಿಗೆ, ಮನೆಗಳಿಗೆ ಏನು ಹಣ ಕೊಟ್ಟಿದ್ದರೋ ಅದನ್ನು ನಾವು ಅವರಿಗೆ ಬಿಟ್ಟುಬಿಟ್ಟಿದ್ದೇವೆ, ರದ್ದುಮಾಡಿದ್ದೇವಪ್ಪ ಎಂದು ಹೇಳಿಬಿಟ್ಟರೆ ರಾಜ್ಯ ಸರ್ಕಾರ ಹಣ ಕೊಡುತ್ತದೆ. ಹೀಗಾಗಿ book adjustment ಅಲ್ಲ ಎಂದು ಹೇಳಿದೆವು ಅಷ್ಟೆ. Book adjustment ಎಂದರೆ,...

ಶ್ರೀ ಡಿ.ಕೆ. ಶಿವಕುಮಾರ್:- Government stands guarantee to all the institutions.

ಶ್ರೀ ಬಸವರಾಜ ರಾಯರೆಡ್ಡಿ:- yes. ಅವರಿಗೆ ವಾಪಸ್ಸು ತುಂಬಬೇಕು. ಇದು ರಾಜ್ಯಸರ್ಕಾರದ್ದು ಅಲ್ಲ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- 2480 ಕೋಟಿ ಇಲ್ಲಿಯವರೆಗೆ ಹಲವಾರು institutions ನಿಂದ ಈ scheme ನಲ್ಲಿ ನಾವೇನು ಸಾಲ ತೆಗೆದುಕೊಂಡಿದ್ದೇವೆ ಆ ಹಣವನ್ನು ನಾವು ಪ್ರತಿ ವರ್ಷ ಸರ್ಕಾರಕ್ಕೆ ಕಟ್ಟಿದ್ದೇವೋ ಇಲ್ಲವೋ? ಹಿಂದಿನ ಸರ್ಕಾರಗಳಿಂದಲೂ ಕಟ್ಟಿಕೊಂಡು ಬಂದಿದ್ದಾರೆ.

ಅಧ್ಯಕ್ಷರು:- ಹೌದು.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಇಲ್ಲಿ ಏನೂ 2480 ಕೋಟಿ ರೂ. Outstanding ಇಲ್ಲ. ಇದು Outstanding ಇರತಕ್ಕಂಥದ್ದಲ್ಲ. ಇಲ್ಲಿ ಇದು ಘೋಷಣೆ ಅಷ್ಟೆ ಅಧ್ಯಕ್ಷರೆ. ನೀವು ಹೇಳಿದಿರಲ್ಲ, ಅಯ್ಯೋ ಸಾಲ ಮನ್ನಾ ಆಯಿತು ಖುಷಿ ಆಯಿತು ಎಂದು ಹೇಳುತ್ತಾರಲ್ಲ, ಪಾಪ, ಜನರಿಗೆ ಇದು ಏನು ಗೊತ್ತಾಗುತ್ತದೆ? ಮಾಹಿತಿ ಸ್ನೇಹಿತರುಗಳಿಗೇ ಇದು ಗೊತ್ತಾಗುವುದಿಲ್ಲ.

ಅಧ್ಯಕ್ಷರು:- ಆ ವಸೂಲಿ ಮಾಡುವ ಅಧಿಕಾರವನ್ನು ಪಂಚಾಯತಿಗಳಿಗೆ ಆದರೂ ಕೊಟ್ಟಿದ್ದರೆ ಇವತ್ತು ಬಹುಶಃ ಅದು ಮನ್ನಾ ಆಗಿದೆ ಎಂದು ಗೊತ್ತಾಗುವುದಿಲ್ಲವೇ? ಜನ ಅಷ್ಟೇನು ದಡ್ಡರೇ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಮಾಧ್ಯಮಗಳಿಗೇ ಗೊತ್ತಾಗುವುದಿಲ್ಲ. 240 ಕೋಟಿ ರೂಪಾಯಿಗಳನ್ನೂ ಈ ಸರ್ಕಾರ burden ತೆಗೆದುಕೊಂಡುಬಿಟ್ಟಿದೆ, ಎಲ್ಲವನ್ನೂ ಮನ್ನಾ ಮಾಡಿಬಿಟ್ಟಿದೆ ಎಂದು

ಮಾಧ್ಯಮಗಳು ತಿಳಿದುಕೊಂಡುಬಿಟ್ಟಿವೆ. ಪಾಪ, ಇನ್ನು common man ಗೆ ಏನು ಗೊತ್ತಾಗುತ್ತದೆ?

ಅಧ್ಯಕ್ಷರು:- ಅದು ಏನು ಗೊತ್ತಾ? ಯಾವತ್ತಿನಿಂದ loan repayment ಆಗಬೇಕಾಗಿತ್ತಲ್ಲ, ಆ ವಸೂಲು ಮಾಡತಕ್ಕಂಥ ಒಂದು ವ್ಯವಸ್ಥೇ ಇರಲಿಲ್ಲ. ಅದಕ್ಕಾಗಿ ಕೇಳಲಿಲ್ಲ, ಅವರೂ ಕೊಡಲಿಕ್ಕೂ ಬರಲಿಲ್ಲ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಅದು ವಸೂಲಿ ಆಗುವುದಿಲ್ಲ ಅಧ್ಯಕ್ಷರೆ.

ಶ್ರೀ ಜಗದೀಶ್ ಶೆಟ್ಟರ್:- ಸನ್ಮಾನ್ಯ ಅಧ್ಯಕ್ಷರೆ, ಈಗ ಅದರಲ್ಲಿ honest ಆಗಿ 39 ಕೋಟಿ ರೂಪಾಯಿಗಳನ್ನು ಯಾರು ತುಂಬಿದ್ದಾರೆ ಅವರಿಗೆ ಇವರು reimbursement ಮಾಡಬೇಕು. ಯಾರು ತುಂಬಿಲ್ಲ ಅವರದ್ದು ಹೋಯಿತು.

ಅಧ್ಯಕ್ಷರು:- ಕುಮಾರಸ್ವಾಮಿಯವರೇ ಇನ್ನು ಎಷ್ಟು ಹೊತ್ತು ಮಾತನಾಡುವಿರಿ?

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಇನ್ನೊಂದು ಅರ್ಧಗಂಟೆಯಲ್ಲಿ ಮುಗಿಸಿಬಿಡುತ್ತೇನೆ.

ಅಧ್ಯಕ್ಷರು:- ಆಯಿತು. ಆರು ಗಂಟೆಗೆ ಮುಗಿಸಿಬಿಡಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಇಲ್ಲವೆಂದರೆ ಬೆಳಿಗ್ಗೆ ಒಂದು ಗಂಟೆ ಅವಕಾಶ ಕೊಟ್ಟುಬಿಡಿ. ಇನ್ನು ಹಲವಾರು ವಿಷಯಗಳಿವೆ. ನಾಳೆ ಬೆಳಿಗ್ಗೆ ಒಂದು ಗಂಟೆ ಅವಕಾಶ ಕೊಟ್ಟುಬಿಡಿ.

ಅಧ್ಯಕ್ಷರು:- ಈಗ ಹದಿನೈದು ನಿಮಿಷಗಳಲ್ಲಿ ಮಾತನಾಡಿ ಮುಗಿಸಿ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ:- ಇಲ್ಲ ಸರ್, ಇನ್ನು ನಮ್ಮ ಗ್ರಾಮೀಣಾಭಿವೃದ್ಧಿ, ಆರೋಗ್ಯ ಇವೆಲ್ಲಾ ಸ್ವಲ್ಪ important issues ಇವೆ. ನಾಳೆ ಮುಕ್ಕಾಲು ಗಂಟೆ ಅಥವಾ ಒಂದು ಗಂಟೆ ಅವಕಾಶ ಕೊಡಿ.

ಅಧ್ಯಕ್ಷರು:- Ok. ಈಗ ಗಮನ ಸೆಳೆಯುವ ಸೂಚನೆ, ಶ್ರೀ ಹೆಚ್.ಸಿ. ಬಾಲಕೃಷ್ಣರವರು ಮಾತನಾಡಿ

6. ಗಮನ ಸೆಳೆಯುವ ಸೂಚನೆ

1) ವಿಷಯ:- ಮಾಗಡಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ರಾಮನಗರ ತಾಲ್ಲೂಕು ಬಿಡದಿ ಹೋಬಳಿಯ ಎಲ್ಲಾ ಪಂಚಾಯಿತಿಗಳ ಗ್ರಾಮಗಳಿಗೆ ನಿರಂತರ ವಿದ್ಯುತ್ ಸರಬರಾಜು ಮಾಡುವ ಬಗ್ಗೆ ಮಾನ್ಯ ಇಂಧನ ಸಚಿವರ ಗಮನ ಸೆಳೆಯುವ ಬಗ್ಗೆ.

ಶ್ರೀ ಹೆಚ್.ಸಿ. ಬಾಲಕೃಷ್ಣ:- ಮಾಗಡಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ರಾಮನಗರ ತಾಲ್ಲೂಕು ಬಿಡದಿ ಹೋಬಳಿಯ ಬೈರಮಂಗಲ ಕೆರೆಗೆ ಬೆಂಗಳೂರಿನ ವೃಷಭಾವತಿ ನದಿಯ ಕೊಳಚೆ ನೀರು ಹರಿದು ಬರುತ್ತಿರುವುದರಿಂದ ಸುತ್ತಮುತ್ತಲ ಗ್ರಾಮಗಳಲ್ಲಿ ಸೊಳ್ಳೆಗಳ ಕಾಟ ಹೆಚ್ಚಾಗಿದ್ದು, ನಾಗರೀಕರ ಆರೋಗ್ಯದ ಮೇಲೆ ತುಂಬಾ ದುಷ್ಪರಿಣಾಮ ಬೀರುತ್ತಿರುವುದರಿಂದ ಬಿಡದಿ ಹೋಬಳಿಯ ಎಲ್ಲಾ ಪಂಚಾಯಿತಿಗಳ ಗ್ರಾಮಗಳಿಗೆ ನಿರಂತರ ವಿದ್ಯುತ್ ಸರಬರಾಜು ಮಾಡುವ ಬಗ್ಗೆ ಮಾನ್ಯ ಇಂಧನ ಸಚಿವರ ಗಮನ ಸೆಳೆಯುತ್ತಿದ್ದೇನೆ.

ಶ್ರೀ ಡಿ.ಕೆ. ಶಿವಕುಮಾರ್ (ಮಾನ್ಯ ಇಂಧನ ಸಚಿವರು):- ಉತ್ತರವನ್ನು ಒದಗಿಸಲಾಗಿದೆ.

ಶ್ರೀ ಹೆಚ್.ಸಿ. ಬಾಲಕೃಷ್ಣ:- ಈಗ ಓದುವುದು ಬೇಡ, ಏನು ಕ್ರಮ ತೆಗೆದುಕೊಂಡಿದ್ದೀರಿ ಎಂಬ ಬಗ್ಗೆ correct ಆಗಿ ಹೇಳಿಬಿಡಿ.